ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ




ಪ.ಬಂಗಾಳ ಹುತಾತ್ಮ ತಹಿದುಲ್ ಇಸ್ಲಾಂ

ಸಂಪುಟ 10 | ಸಂಚಿಕೆ 18 | ಪುಟ 16 | ಮೇ 1, 2016 | ರೂ. 10/-

web: www.janashakthi.co.in e-mail : js_weekly@yahoo.com



ಚಾರಿತ್ರಿಕ ಗಾರ್ಮೆಂಟ್ ಕಾರ್ಮಿಕರ ಬಂಡಾಯ




ಜಾರ್ಖಂಡ್ : ಕೋಮುವಾದದ ಕುಲುಮೆ

ಮೇ ನಲ್ಲಿ ಸಿಗರನಹಳ್ಳಿ ಚಲೋ



ಕಾಶ್ಮೀರದಲ್ಲಿ ಮಿಲಿಟರಿಗೆ ಕಡಿವಾಣ ಹಾಕಿ : ಕಾರಟ್

ಜಾಗತೀಕರಣ 25 ಮರುಚಿಂತನೆ ಅಗತ್ಯ



ಉತ್ತರಾಖಂಡದಲ್ಲಿ ರಾಷ್ಟ್ರಪತಿ ಆಳ್ವಿಕೆ ರದ್ದು: ಹೈಕೋರ್ಟ್ ತೀರ್ಪು

ಮೋದಿ ಸರಕಾರದ ಕೆನ್ನೆಗೆ ಬಾರಿಸಿದ ಸ್ವಾಗತಾರ್ಹ ತೀರ್ಪು–ಸಿಪಿಐ(ಎಂ)

ಉತ್ತರಾಖಂಡ ಹೈಕೋರ್ಟ್ ಎಪ್ರಿಲ್ 21ರಂದು ಮೋದಿ ಸರಕಾರ ಉತ್ತರಾಖಂಡ ರಾಜ್ಯದ ಮೇಲೆ ಮಾರ್ಚ್ 27ರಂದು ಹೇರಿದ್ದ ರಾಷ್ಟ್ರಪತಿ ಆಳ್ವಿಕೆಯ ಆದೇಶವನ್ನು ರದ್ದು ಪಡಿಸುವ ತೀರ್ಪನ್ನು ನೀಡಿದೆ. ರಾಷ್ಟ್ರಪತಿ ಆಳ್ವಿಕೆಯ ಹೇರಿಕೆಯ ಸಮಯದಲ್ಲಿ ಇದ್ದ ಹರೀಶ್ ರಾವತ್ ಸರಕಾರದ ಬಲಪರೀಕ್ಷೆ ವಿಧಾನಸಭೆಯಲ್ಲಿ ಎಪ್ರಿಲ್ 29ರಂದು ನಡೆಯಬೇಕು ಎಂದೂ ಹೈಕೋರ್ಟ್ ಆದೇಶಿಸಿದೆ.

ಇದೊಂದು ಮೈಲಿಗಲ್ಲಾಗಬಹುದಾದ ತೀರ್ಪು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸ್ವಾಗತಿಸಿದೆ.

ಸಂವಿಧಾನದ 356ನೇ ಕಲಮನ್ನು ಕಟ್ಟಕಡೆಯ ಸಾಧನವಾಗಿ ಬಳಸಬೇಕು ಎಂದು ನ್ಯಾಯಾಲಯ ಒತ್ತಿ ಹೇಳಿರುವುದು ಮಹತ್ವದ ಸಂಗತಿ. ರಾಷ್ಟಪತಿ ಆಳ್ವಿಕೆಯ ಹೇರಿಕೆ ಸುಪ್ರಿಂ ಕೋರ್ಟ್ ಹಾಕಿಕೊಟ್ಟಿರುವ ವಿಧಾನಗಳಿಗೂ ತದ್ವಿರುದ್ಧವಾದದ್ದು ಎಂದೂ ಅದು ಹೇಳಿದೆ. ಇದು, ಇಂತಹ ಪ್ರಜಾಪ್ರಭುತ್ವ–ವಿರೋಧಿ ಮತ್ತು ಉತ್ತರಾಖಂಡದಲ್ಲಿ ಸಂವಿಧಾನ–ವಿರೋಧಿ ವ್ಯವಸ್ಥೆಯನ್ನು ತರುವ ಕ್ರಮಕ್ಕಿಳಿದ ಮೋದಿ ಸರಕಾರದ ಕೆನ್ನೆಗೆ ಬಾರಿಸಿರುವ ಏಟು ಎಂದು ಪೊಲಿಟ್‌ಬ್ಯುರೊ ವರ್ಣಿಸಿದೆ.

ವಿಧಾನಸಭಾ ಚುನಾವಣೆಗಳ ಮೂಲಕ ಜನಾದೇಶ ಪಡೆಯಲಾಗದ ಬಿಜೆಪಿ ಇಂತಹ ಕುತಂತ್ರಗಳಿಗೆ ಕೈಹಾಕಿದೆ. **ಈ ಪ್ರಸ್ತುತ ಉದಾಹರಣೆಯಲ್ಲಿ ಉತ್ತರಾಖಂಡದಲ್ಲಿ ಇಂತಹ ಪ್ರಜಾಪ್ರಭುತ್ವ–ವಿರೋಧಿ ಕಸರತ್ತಿಗೆ ಕಾರಣರಾದವರನ್ನು ಶಿಕ್ಷಿಸಬೇಕು, ಏಕೆಂದರೆ ಉತ್ತರದಾಯಿತ್ವ ಪ್ರಜಾಪ್ರಭುತ್ವದ ಹೆಗ್ಗುರುತು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.**

ನ್ಯಾಯಾಲಯ ತನ್ನ ತೀರ್ಪಿನಲ್ಲಿ ಕೇಂದ್ರ ಸರಕಾರ ನಗ್ನ ಸುಳ್ಳಿನೊಂದಿಗೆ ವರ್ತಿಸಿದೆ ಎಂದರೆ, ಅಲ್ಲಿಯ ವಿಧಾನ ಸಭಾಧ್ಯಕ್ಷರು ಪಕ್ಷಪಾತದಿಂದ ವರ್ತಿಸಿದ್ದಾರೆ ಎಂದು ಹೇಳಿದೆ. ಈ ಆದೇಶಕ್ಕೆ ತಡೆಯಾಜ್ಞೆ ಕೊಡಬೇಕೆಂಬ ಕೇಂದ್ರ ಸರಕಾರದ ಮನವಿಯನ್ನು ತಿರಸ್ಕರಿಸಿದ ಹೈಕೋರ್ಟ್ "ನಮ್ಮ ತೀರ್ಪಿಗೆ ನಾವೇ ತಡೆಯಾಜ್ಞೆ ಕೊಡೆವು, ನೀವು ಸುಪ್ರಿಂ ಕೋರ್ಟಿಗೆ ಹೋಗಿ ತಡೆಯಾಜ್ಞೆ ಪಡೆಯಬಹುದು" ಎಂದುತ್ತರಿಸಿತು.

ಮುಖಭಂಗ ತಾಳಲಾರದ ಕೇಂದ್ರ ಸರಕಾರ, ತೀರ್ಪಿನ ಪ್ರತಿ ಕೈತಲುಪುವ ಮೊದಲೇ, ಎಪ್ರಿಲ್ 22ರಂದು ಸುಪ್ರಿಂ ಕೋರ್ಟಿನಲ್ಲಿ ಉತ್ತರಾಖಂಡ ಹೈಕೋರ್ಟಿಗೆ ತಡೆಯಾಜ್ಞೆ ನೀಡುವಂತೆ ಕೋರಿ ವಿಶೇಷ ಅರ್ಜಿ ಸಲಲಿಸಿದೆ ಎಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ತಿಳಿದು ಬಂದಿದೆ.

ವಿಚಾರಣೆಯ ಸಮಯದಲ್ಲೇ ಹೈಕೋರ್ಟ್ ಪೀಠ ಕೇಂದ್ರ ಸರಕಾರದ ಬಗ್ಗೆ ಕೇಳಿದ ತೀಕ್ಷ್ಣ ಪ್ರಶ್ನೆಗಳಿಂದ ತೀರ್ಪು ತಮ್ಮ ವಿರುದ್ಧ ಹೋಗುತ್ತದೆ ಎಂದು ಮನಗಂಡಿದ್ದ ಕೇಂದ್ರ ಸರಕಾರ ಈ ಬಗ್ಗೆ ಈ ಮೊದಲೇ ಯೋಚಿಸಿತ್ತು ಎನ್ನಲಾಗಿದೆ. ಒಂದು ಕ್ರಮವಾಗಿ ತೀರ್ಪು ಬರುವ ಮೊದಲೇ ತಮ್ಮ ರಾಷ್ಟ್ರಪತಿ ಆಳ್ವಿಕೆಯನ್ನು ಹಿಂತೆಗೆದುಕೊಂಡು ಬಿಜೆಪಿ ಸರಕಾರವನ್ನು ಕುಳ್ಳಿರಿಸುವ ಯೋಚನೆಯೂ ಇತ್ತು ಎನ್ನಲಾಗಿದೆ.

ಈ ಬಗ್ಗೆ ನ್ಯಾಯಾಲಯದಲ್ಲಿ ಪ್ರಸ್ತಾಪವಾದಾಗ ನ್ಯಾಯಪೀಠ ಕಟು ಎಚ್ಚರಿಕೆಯನ್ನು ನೀಡಿತ್ತು, ಎಂಬುದನ್ನು ಇಲ್ಲಿ ಗಮನಿಸಬಹುದು. ಕೇಂದ್ರ ಸರಕಾರ ನಿಷ್ಪಕ್ಷಪಾತದಿಂದಿರಬೇಕು, ಆದರೆ ಅದು ಒಂದು 'ಖಾಸಗಿ ಪಕ್ಷ' ಎಂಬಂತೆ ವರ್ತಿಸುತ್ತಿರುವುದು ನೋವಿನ ಸಂಗತಿ ಎಂದೂ ನ್ಯಾಯಪೀಠ ಉದ್ಗರಿಸಿತ್ತು.

ಇದಕ್ಕೆ ಮೊದಲು ರಾಷ್ಟ್ರಪತಿಗಳು ಎಲ್ಲವನ್ನೂ ಯೋಚಿಸಿಯೇ ಆದೇಶಕ್ಕೆ ಸಹಿ ಹಾಕಿದ್ದಾರೆ ಎಂದು ಕೇಂದ್ರ ಸರಕಾರದ ವಕೀಲರು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದಾಗ, ರಾಷ್ಟ್ರಪತಿಗಳೂ ತಪ್ಪು ಮಾಡಬಹುದು, ಅವರ ಆದೇಶಗಳನ್ನು ಪರಿಶೀಲಿಸುವ ಹಕ್ಕು ನ್ಯಾಯಾಲಯಕ್ಕಿದೆ ಎಂದು ನೆನಪಿಸಬೇಕಾಗಿ ಬಂದಿತ್ತು. ●



ಅಮೆರಿಕನ್ ಸಾಮ್ರಾಜ್ಯಶಾಹಿಯ ಬೆದರಿಕೆಯ ವಿರುದ್ಧ ವೆನೆಝುವೆಲದೊಂದಿಗೆ ಸೌಹಾರ್ದ

ವೆನೆಝುವೆಲದೊಂದಿಗೆ ಸೌಹಾರ್ದದ ರಾಷ್ಟ್ರೀಯ ಸಮಿತಿ ಎಪ್ರಿಲ್ 19ರಂದು ನವದೆಹಲಿಯಲ್ಲಿ ಒಂದು ಸೌಹಾರ್ದ ಸಭೆಯನ್ನು ಸಂಘಟಿಸಿತ್ತು. ಈ ಲ್ಯಾಟಿನ್ ಅಮೆರಿಕಾದ ದೇಶವನ್ನು ಅಸ್ಥಿರಗೊಳಿಸುವ ಅಮೆರಿಕಾದ ಪ್ರಯತ್ನಗಳ ವಿರುದ್ಧ ಭಾರತದ ಸೌಹಾರ್ದವನ್ನು ವ್ಯಕ್ತಪಡಿಸಲುರೀ ಸಭೆ ಏರ್ಪಡಿಸಲಾಗಿತ್ತು.

ಮಾರ್ಚ್ 3ರಂದು ಅಮೆರಿಕಾ ಅಧ್ಯಕ್ಷ ಒಬಾಮ ಈ ದೇಶ ಅಮೆರಿಕಾದ ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ಧೋರಣೆಗೆ ಅಸಾಮಾನ್ಯ ಬೆದರಿಕೆ ಎಂದು ಅನ್ಯಾಯವಾಗಿ ಸಾರುವ ಘೋಷಣೆಯನ್ನು ನವೀಕರಿಸಿದ ಸಂದರ್ಭದಲ್ಲಿ ವೆನೆಝೂವೆಲಾದ ಎಡ ಮತ್ತು ಪ್ರಗತಿಪರ ಪಕ್ಷಗಳು ಮತ್ತು ಆಂದೋಲನಗಳು ಅಮೆರಿಕಾದ ಈ ಬೆದರಿಕೆಯ ವಿರುದ್ಧ ಅಂತರ್‍ರಾಷ್ಟ್ರೀಯ ಸೌಹಾರ್ದಕ್ಕೆ ಕರೆ ನೀಡಿದ್ದವು.

ಎಪ್ರಿಲ್ 19 ವೆನೆಝುವೆಲದ ಜನತೆ ತಮ್ಮನ್ನು ಆಕ್ರಮಿಸಿಕೊಂಡಿದ್ದ ಸ್ಪೇನಿನಿಂದ ಸ್ವಾತಂತ್ರ್ಯವನ್ನು ಘೋಷಿಸಿದ ದಿನ . ಈ ವರ್ಷ ಈ ದಿನ ಜಗತ್ತಿನಾದ್ಯಂತ ಅಮೆರಿಕನ್ ಸಾಮ್ರಾಜ್ಯಶಾಹಿಯ ಬೆದರಿಕೆಯ ವಿರುದ್ಧ ವೆನೆಝುವೆಲದೊಂದಿಗೆ ಸೌಹಾರ್ದದ ದಿನವಾಗಿ ಆಚರಿಸಲಾಗಿದೆ. ವಿಶ್ವ ಶಾಂತಿ ಮಂಡಳಿ ಮುಂತಾದ ಅಂತರ್‍ರಾಷ್ಟ್ರೀಯ ಸಂಘಟನೆಗಳೂ ಸೌಹಾರ್ದ ಸೂಚಿಸಿವೆ.

ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ಭಾರತದಲ್ಲಿ ವೆನೆಝುವೆಲದ ರಾಯಭಾರಿ ಅಗಸ್ತೊ ಮೊಂತಿಯೆಲ್ ಭಾಗವಹಿಸಿದರು. ಭಾರತದ ಸೌಹಾರ್ದ ಸಮಿತಿಯ ಸಂಯೋಜಕರಾದ ಸಿಪಿಐ(ಎಂ)ನ ಪೊಲಿಟ್‌ಬ್ಯುರೊ ಸದಸ್ಯ ಪ್ರಕಾಶ ಕಾರಟ್ ಮತ್ತು ಸಿಪಿಐನ ಪ್ರಧಾನ ಕಾರ್ಯದರ್ಶಿ ಸುಧಾಕರ ರೆಡ್ಡಿ , ಪ್ರೊ. ಅಚಿನ್ ವನೈಕ್ ಮತ್ತಿತರರು ಸಭೆಯನ್ನುದ್ದೇಶಿ ಮಾತನಾಡಿದರು.

ಇದೇ ದಿನ ನವದೆಹಲಿ ಮಹಾನಗರ ಸಭೆ ಚಾಣಕ್ಯಪುರಿ ರಾಯಭಾರ ಕಚೇರಿಗಳ ವಲಯದಲ್ಲಿರುವ ಚೌಕವೊಂದಕ್ಕೆ ಲ್ಯಾಟಿನ್ ಅಮೆರಿಕಾದ ವಿಮೋಚನೆಯ ಕ್ರಾಂತಿಕಾರಿ ಮುಖಂಡ ಸಿಮೊನ್ ಬೊಲಿವಾರ್ ಚೌಕ ಎಂದು ಹೆಸರಿಸಿ ಗೌರವಿಸಿದೆ. ವೆನೆಝುಯವೆಲ ಮತ್ತು ಇತರ ಲ್ಯಾಟಿನ್ ಅಮೆರಿಕನ್ ದೇಶಗಳ ರಾಯಭಾರಿಗಳು ಈ ಸಮಾರಂಬದಲ್ಲಿ ಭಾಗವಹಿಸಿದ್ದರು. ●

ಕಾಶ್ಮೀರದಲ್ಲಿ ಭದ್ರತಾ ಪಡೆಗಳು ಕಾರ್ಯಾಚರಣೆಯ ವಿಧಾನಗಳಿಗೆ ಕಟ್ಟುನಿಟ್ಟಾಗಿ ಬದ್ದರಾಗಿರಬೇಕು–ಜಮ್ಮು–ಕಾಶ್ಮೀರ ಸಿಪಿಐ(ಎಂ)

ಕಾಶ್ಮೀರ ಕಳೆದೆರಡು ವಾರಗಳಲ್ಲಿ ಬಹಳವಾಗಿ ಸುದ್ದಿಯಲ್ಲಿದೆ. ಜಮ್ಮು–ಕಾಶ್ಮೀರದ ಹಿಂದಿನ ಮುಖ್ಯಮಂತ್ರಿ ಮುಫ್ತಿ ಮಹಮ್ಮದ್ ಸಯೀದ್‌ರವರ ನಿಧನದ ನಂತರ ಪಿಡಿಪಿ–ಬಿಜೆಪಿ ಮೈತ್ರಿಕೂಟದಲ್ಲಿನ ಜಗ್ಗಾಟದಿದಾಗಿ ಸುಮಾರು ಎರಡು ತಿಂಗಳ ರಾಷ್ಟ್ರಪತಿ ಆಳ್ವಿಕೆಯ ನಂತರ ಮೆಹಬೂಬ ಮುಫ್ತಿಯವರ ನೇತೃತ್ವದಲ್ಲಿ ಹೊಸ ಮೈತ್ರಿ ಸರಕಾರ ಕೊನೆಗೂ ಅಧಿಕಾರ ವಹಿಸಿಕೊಂಡಿತು. ಅದಾದ ಒಂದೆ–ರಡು ದಿನಗಳಲ್ಲೇ, ಮೊದಲು ಎನ್‌ಐಟಿ ಶ್ರೀನಗರದ ವಿದ್ಯಾರ್ಥಿಗಳಲ್ಲಿ ಅಶಾಂತಿ, ನಂತರ ಹಂದ್ವಾರದಲ್ಲಿ ಶಾಲಾ ಬಾಲಕಿಯೊಬ್ಬಳಿಗೆ ಕಿರುಕುಳದ ವದಂತಿಯ ಹಿನ್ನೆಲೆಯಲ್ಲಿ ಭುಗಿಲೆದ್ದ ಗಲಭೆಗಳ ಹಿನ್ನೆಲೆಯಲ್ಲಿ ಭದ್ರತಾ ಪಡೆಗಳ ಕಾರ್ಯಾಚರಣೆಗಳಲ್ಲಿ ಒಬ್ಬ ಉದಯೋನ್ಮುಖ ಕ್ರಿಕೆಟ್ ಪಟು ಸೇರಿದಂತೆ ನಾಲ್ವರು ನಾಗರಿಕರ ಸಾವು ಈ ಪ್ರದೇಶದಲ್ಲಿ ಬಿಗುವಿನ ಪರಿಸ್ಥಿತಿ ಉಂಟು ಮಾಡಿತ್ತು.

ಆ ಬಾಲಕಿ ಸೇನಾಪಡೆಯವರಿಂದ ತನಗೆ ಕಿರುಕುಳವಾಗಿಲ್ಲ ಎಂದು ಹೇಳುವ ವೀಡಿಯೋವನ್ನು ಭದ್ರತಾ ಪಡೆಯವರು ಪ್ರಸಾರ ಮಾಡಿದರೂ ಆ ಬಾಲಕಿ ಮತ್ತು ಆಕೆಯನ್ನು ಕರೆತರಲು ಹೋದ ಆಕೆಯ ತಂದೆ ಕಸ್ಟಡಿಯಲ್ಲಿದ್ದು, ಹೈಕೋರ್ಟಿನ ಮಧ್ಯಪ್ರವೇಶದ ನಂತರವೇ ಅವರನ್ನು ಹಾಜರು ಪಡಿಸಿದ್ದು ಈ ಪ್ರದೇಶದಲ್ಲಿ ಬಿಗುವಿನ ಪರಿಸ್ಥಿತಿ ಮುಂದುವರೆಯುವಂತೆ ಮಾಡಿತ್ತು.

ಇವನ್ನೆಲ್ಲ ಆಮೂಲಾಗ್ರವಾಗಿ ಚರ್ಚಿಸಲು ಸಿಪಿಐ(ಎಂ)ನ ಜಮ್ಮು–ಕಾಶ್ಮೀರ ರಾಜ್ಯಸಮಿತಿಯ ಸಭೆ ಎಪ್ರಿಲ್ 20ರಂದು ನಡೆಯಿತು. ಕುಪ್ವಾರ ಜಿಲ್ಲೆಯಲ್ಲಿ ಭದ್ರತಾ ಪಡೆಯವರ ಗೋಲೀಬಾರಿನ ಘಟನೆಗಳ ಬಗ್ಗೆ ಸಮಯಬದ್ಧ ನ್ಯಾಯಾಂಗ ತನಿಖೆ ನಡೆಯಬೇಕು ಎಂದು ರಾಜ್ಯ ಸಮಿತಿ ಆಗ್ರಹ ಪಡಿಸಿದೆ.

ಭದ್ರತೆಯ ಪರಿಸ್ಥಿತಿಯ ಬಗ್ಗೆ ಅತ್ಯುನ್ನತ ಮಟ್ಟದಲ್ಲಿ ಆಮೂಲಾಗ್ರ ಪರಾಮರ್ಶೆಯ ಅಗತ್ಯವಿದೆ ಎಂದು ಅಭಿಪ್ರಾಯ ಪಟ್ಟ ರಾಜ್ಯಸಮಿತಿ, ಕಾಶ್ಮಿರ ಕಣಿವೆಯಾದ್ಯಂತ ನಾಗರಿಕ ಪ್ರದೇಶಗಳಲ್ಲಿ ಭದ್ರತಾ ಪಡೆಯವರ ಬಂಕರ್‌ಗಳನ್ನು, ಔಟ್‌ಪೋಸ್ಟ್‌ಗಳನ್ನು ತಕ್ಷಣವೇ ತೆಗೆಯಬೇಕೆಂದೂ, ಭದ್ರತಾ ಪಡೆಗಳ ಕಾರ್ಯಾಚರಣೆಯ ವಿಧಾನಗಳನ್ನು ಕುರಿತಂತೆ ಇರುವ ಎಸ್‌ಒಪಿ(ಸ್ಟಾಂಡರ್ಡ್ ಆಪರೇನ್ಸ್ ಪ್ರೊಸೀಜರ್ಸ್)ಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದೂ ಸಿಪಿಐ(ಎಂ) ರಾಜ್ಯಸಮಿತಿ ಆಗ್ರಹಿಸಿದೆ.

ಇಲ್ಲಿನ ಪರಿಸ್ಥಿತಿಗಳಲ್ಲಿ ನಿಯಂತ್ರಣದ ವ್ಯವಸ್ಥೆ ಬೇಕಿದ್ದರೂ ಅಭಿಪ್ರಾಯ ಸ್ವಾತಂತ್ರ್ಯದ ಮೇಲೆ, ಅದರಲ್ಲೂ ಸಾಮಾಜಿಕ ಜಾಲತಾಣಗಳಲ್ಲಿ, ಮೊಬೈಲ್‌ಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು ನಿಷೇಧಗಳನ್ನು ಹಾಕಿರುವುದು ಎಳ್ಳಷ್ಟೂ ಒಪ್ಪತಕ್ಕಂತದ್ದಲ್ಲ ಎಂದಿರುವ ರಾಜ್ಯಸಮಿತಿ ಭಿನ್ನಮತಕ್ಕೆ ಗೌರವ ನೀಡಬೇಕು, ಇದು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದಲೂ ಅಗತ್ಯ ಎಂದು ಅಭಿಪ್ರಾಯ ಪಟ್ಟಿದೆ. ಒಂದು ಘನತೆಯ ಬದುಕಿಗಾಗಿ ರೇಶನ್ ಕಾರ್ಡ್ ಮತ್ತಿತರ ಮೂಲಭೂತ ಸೌಕರ್ಯಗಳು ಬೇಕೆಂದು ಆಗ್ರಹಿಸುತ್ತ ಬೀದಿಗಿಳಿಯುವ ಪ್ರತಿಭಟನಾಕಾರರ ಮೇಲೆ ನಿಷೇಧಗಳು, ಅಮಾನುಷ ಬಲಪ್ರಯೋಗ ಇವನ್ನೆಲ್ಲ ನಿಲ್ಲಿಸಬೇಕು, ಅನ್ಯಾಯದ್ದು, ತಮ್ಮ ಹಕ್ಕುಗಳನ್ನು ಮೊಟಕು ಮಾಡುವಂತದ್ದು ಎಂದು ಜನಕ್ಕೆ ಅನಿಸುವ ಯಾವುದೇ ಘಟನೆಯ ಬಗ್ಗೆ ಪ್ರತಿಭಟನೆಗಿಳಿಯುವವರ ಬಗ್ಗೆ ಸಂಬಂಧಪಟ್ಟವರು ಹೆಚ್ಚು ಮಾನವೀಯವಾದ ನಿಲುವನ್ನು ತಳೆಯಬೇಕು ಎಂದು ಜಮ್ಮು–ಕಾಶ್ಮೀರ ರಾಜ್ಯಸಮಿತಿ ಹೇಳಿದೆ.

ಎನ್‌ಐಟಿ ಬಿಕ್ಕಟ್ಟು ಕೆಲವು ಪಟ್ಟಭದ್ರ ಹಿತಾಸಕ್ತಿಗಳ ದುರುದ್ದೇಶಪೂರ್ಣ ಪ್ರಯತ್ನದ ಫಲಿತಾಂಶ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ಈ ರಾಜ್ಯದ ಕೋಮುಸೌಹಾರ್ದದ ಪರಂಪರೆಗೆ ಮತ್ತು ಬಹುತ್ವದ ಸಾಮಾಜಿಕ ಹಂದರಕ್ಕೆ ಕೆಟ್ಟ ಹೆಸರು ತರಲೆಂದೇ ಇದನ್ನು ಮಾಡಲಾಗಿದೆ ಎಂದಿರುವ ಅದು ಪರಿಸ್ಥಿತಿಯನ್ನು ಸರಿಯಾಗಿ ಸಂಭಾಳಿಸದಿದ್ದದ್ದು ಕೂಡ ತನ್ನ ಕೊಡುಗೆ ನೀಡಿದೆ ಎಂದು ಅಭಿಪ್ರಾಯ ಪಟ್ಟಿದೆ. ಈ ಸಂಸ್ಥೆಯಲ್ಲಿ ಕಳೆದ ಹಲವು ವರ್ಷಗಳಿಂದ ಇಂತಹ ಘಟನೆ ನಡೆದಿಲ್ಲ, 2008, 2010ರ ಸಾಮೂಹಿಕ ಪ್ರತಿಭಟನೆಗಳ ಸಮಯದಲ್ಲಿ ಇಡೀ ಕಾಶ್ಮೀರ ಕಣಿವೆಯಲ್ಲಿ ಆತಂಕದ ವಾತಾವರಣವಿದ್ದಾಗಲೂ ನಡೆದಿರಲಿಲ್ಲ ಎಂದು ಅದು ನೆನಪಿಸಿದೆ.

ಈ ಸಂಸ್ಥೆಯ ಹಲವು ಸ್ಥಳೀಯರಲ್ಲದ ವಿದ್ಯಾರ್ಥಿಗಳು ಈ ಬಿಕ್ಕಟ್ಟಿನ ಬಗ್ಗೆ ಪಟ್ಟಭದ್ರ ಹಿತಾಸಕ್ತಿಗಳ ನಕಾರಾತ್ಮಕ ಪ್ರತಿಕ್ರಿಯೆಗಳ ಬಗ್ಗೆ ಬೇಸರವನ್ನು ವಯಕ್ತಪಡಿಸಿರುವುದು ಮೆಚ್ಚತಕ್ಕ ಸಂಗತಿ. ಸ್ಥಳೀಯ ವಿದ್ಯಾರ್ಥಿಗಳು ಮುಂದೆ ಬಂದು ಈ ಬಿಕ್ಕಟಿನ ನಡುವಿನಲ್ಲೂ ಶಾಂತಿ ಮತ್ತು ಸೌಹಾರ್ದ ರೂಪಿಸಲು ಪ್ರಯತ್ನಸಿರುವುದೂ ಪ್ರಶಂನೀಯ ಎಂದು ರಾಜ್ಯ ಸಮಿತಿ ಹೇಳಿದೆ.


ಮಾನವ ಸಂಪನ್ಮೂಲ ಅಭಿವೃದ್ಧಿ(ಹೆಚ್‌ಆರ್‌ಡಿ) ಮಂತ್ರಾಲಯ ಪರಿಸ್ತಿತಿಯನ್ನು ಜಾಗರೂಕತೆಯಿಂದ ನಿಭಾಯಿಸಬೇಕು, ಎನ್‌ಐಟಿ ಆಡಳಿತ ವಿದ್ಯಾರ್ಥಿಗಳೊಂದಿಗೆ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಪರಿಹರಿಸಿಕೊಳ್ಳಲು ಬಿಡಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಎಚ್ಚರಿಸಿದೆ. ವಿದ್ಯಾರ್ಥಿಗಳ ನೈಜ ದೂರುಗಳನ್ನು ಪರಿಹರಿಸುತ್ತಲೇ, ರಾಜ್ಯದ ಹೊರಗೆ ಈ ರಾಜ್ಯದ ವಿದ್ಯಾರ್ಥಿಗಳು ಎದುರಿಸಬೇಕಾಗಿರುವ ಭದ್ರತಾ ಸಂದೇಹಗಳನ್ನು ಪರಿಹರಿಸಲೂ ಸರಕಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅದು ಹೇಳಿದೆ.

ರಾಜೌರಿಯಲ್ಲಿರುವ ಬಾಬಾ ಗುಲಾಂ ಶಾಹ ಬಾದಶಾಹ ವಿಶ್ವವಿದ್ಯಾಲಯ(ಬಿಜಿಎಸ್‌ಬಿಯು)ದಲ್ಲಿನ ಪರಿಸ್ತಿತಿಯೂ ಆತಂಕ ಉಂಟು ಮಾಡುವಂತಿದ್ದು, ಸಂಬಂಧಪಟ್ಟ ಅಧಿಕಾರಿಗಳು ತ್ವರಿತವಾಗಿ ಶಾಂತಿ ಮತ್ತು ಸೌಹಾರ್ದ ಮತ್ತೆ ನೆಲಸುವಂತೆ ಮಾಡಬೇಕು ಎಂದು ಸಿಪಿಐ(ಎಂ) ಜಮ್ಮು–ಕಾಶ್ಮೀರ ರಾಜ್ಯ ಸಮಿತಿ ಆಗ್ರಹಿಸಿದೆ. ●

ªAiÀvÉAzÀgÉ EzÀÄ

ಯುರೋಪಿನ ಬಂಡವಾಳಶಾಹಿಗಳು ಒಪ್ಪಂದಕ್ಕೆ ಬಂದರೆ ಯುರೋಪಿನ ಸಂಯುಕ್ತ ರಾಷ್ಟ್ರ ಕಟ್ಟುವುದು ಸಾಧ್ಯ. ಆದ–ರೆ ಏತಕ್ಕಾಗಿ? ಯುರೋಪಿನಲ್ಲಿ ಒಟ್ಟಾಗಿ ಸಮಾಜವಾದವನ್ನು ಹತ್ತಿಕ್ಕಲಿಕ್ಕಾಗಿಯೇ?

– ವಿ.ಐ. ಲೆನಿನ್



ಎಂತಹ ಮುಂಗಾಣ್ಕೆ– ಯುರೋಪಿಯನ್ ಕೂಟ ರಚನೆಯಾಗುವ ದಶಕಗಳ ಮೊದಲು !

ಕಾರ್ಮಿಕರ ನಿರ್ಲಕ್ಷ್ಯ ದಬ್ಬಾಳಿಕೆ ನಿಲ್ಲಿಸಿ !

ಸಂಪಾದಕೀಯ

ಈ ವಾರ ಕರ್ನಾಟಕ ಕಾರ್ಮಿಕ ಚಳುವಳಿಯಲ್ಲೇ ಚಾರಿತ್ರಿಕ ವಾರ. ಬೆಂಗಳೂರು ಮತ್ತು ಸುತ್ತಮುತ್ತಲಿನ ಗಾರ್ಮೆಂಟ್ ಕಾರ್ಖಾನೆಗಳ ಕಾರ್ಮಿಕರ ಬಂಡಾಯ ನಗರದ ಮತ್ತು ರಾಜ್ಯದ ಆಡಳಿತ ಮಾತ್ರವಲ್ಲ, ದೇಶದ ಸರಕಾರ ಮತ್ತು ಆಳುವ ವರ್ಗವನ್ನೇ ನಡುಗಿಸಿತು. ಕೇವಲ ಎರಡು ದಿನಗಳ ಬೃಹತ್ ಸ್ವಯಂ-ಸ್ಫೂರ್ತ ಹೋರಾಟದಿಂದಲೇ ಭಾರೀ ದರ್ಪ ತೋರಿಸುತ್ತಿದ್ದ ಕಾರ್ಮಿಕ-ವಿರೋಧಿ ಬಂಡವಾಳಶಾಹಿ-ಸ್ನೇಹಿ ಮೋದಿ ಸರಕಾರವನ್ನು ಮಣಿಸಿತು. ಕಾರ್ಮಿಕರ ಪಿ.ಎಫ್. ಹಣ ಹಿಂತೆಗೆತಕ್ಕೆ ಸಂಬಂಧಿಸಿದಂತೆ ಕೇಂದ್ರ ಸರಕಾರ ಇತ್ತೀಚೆಗೆ ತಂದ ಹೊಸ ನಿರ್ಬಂಧಗಳು ಮೇ ತಿಂಗಳಿಂದ ಜಾರಿಯಾಗಲಿರುವ ಸುದ್ದಿ ಗಾರ್ಮೆಂಟ್ ಕಾರ್ಮಿಕರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ವಾರದ ಪ್ರಧಾನ ಲೇಖನ ಈ ಚಾರಿತ್ರಿಕ ಹೋರಾಟದ ಬಗೆಗೇ ಇದೆ. ಜತೆಗೆ ಈ ಬಗ್ಗೆ ಕೇಂದ್ರೀಯ ಯೂನಿಯನು ಮತ್ತು ಎಡ ಪಕ್ಷಗಳ ಹೇಳಿಕೆಗಳೂ, ಈ ಹೋರಾಟದಿಂದ ಸ್ಫೂರ್ತಿ ಪಡೆದ ಎರಡು ಕವನಗಳೂ ಇವೆ.

ಈ ಅನಿರೀಕ್ಷಿತ ಚಾರಿತ್ರಿಕ ಮಹತ್ವದ ಹೋರಾಟದ ಗಂಭೀರ ವಿಶ್ಲೇಷಣೆ ನಡೆಯಬೇಕಾಗಿದೆ. ಇದರಿಂದ ಏನು ಪಾಠ ಕಲಿಯಬೇಕು ಎಂದು ಕೇಂದ್ರ/ರಾಜ್ಯ ಸರಕಾರಗಳು, ಗಾರ್ಮೆಂಟ್ಸ್ ಕಂಪನಿಗಳ ಮಾಲಿಕರು, ಎಲ್ಲಾ ಉದ್ಯಮಗಳ ಮಾಲಿಕರು ಮತ್ತು ಕಾರ್ಮಿಕ ಚಳುವಳಿ ಸಹ ಚಿಂತಿಸಬೇಕಾಗಿದೆ. ಅನಿರೀಕ್ಷಿತತೆ, ನಾಯಕ-ರಹಿತ ಸ್ವಯಂ-ಸ್ಫೂರ್ತತೆ, ಸಮರಶೀಲತೆ ಈ ಹೋರಾಟದ ವಿಶಿಷ್ಟತೆಗಳಾಗಿದ್ದವು. ಅದರ ಗಟ್ಟಿತನವೂ ಆಗಿತ್ತು. ಯಾವುದೇ ಉದ್ಯಮದಲ್ಲಿ ಸರಕಾರ ಮತ್ತು ಮಾಲಿಕ ವರ್ಗ ಸೇರಿ ಸಂಘಟಿತ ಯೂನಿಯನುಗಳು ತಲೆ ಎತ್ತದಂತೆ ಸದೆ ಬಡಿದರೆ ಕಾರ್ಮಿಕರನ್ನು ಹೇಗೆ ಬೇಕಾದರೂ ಶೋಷಿಸಬಹುದು. ನವ-ಉದಾರವಾದಿ ನೀತಿಗಳನ್ನು ಒಪ್ಪಿಕೊಳ್ಳುವಂತೆ ಅವರನ್ನು ಮಣಿಸಬಹುದು ಎಂಬ ಅವರ ಲೆಕ್ಕಾಚಾರ ತಲೆ ಕೆಳಗಾಗಿದೆ. ಬಂಡವಾಳಶಾಹಿ ಸಮಾಜದ ಮೂಲಭೂತ ವೈರುಧ್ಯಗಳಿಂದಾಗಿ ಕಾರ್ಮಿಕ ವರ್ಗವನ್ನು ಎಂದೂ ಪೂರ್ಣವಾಗಿ ದಮನ ಮಾಡಲು ಆಗುವುದಿಲ್ಲ. ಅದು ತನ್ನದೇ ಆದ ಪ್ರತಿರೋಧದ ವಿಧಾನಗಳನ್ನು ಕಂಡುಕೊಳ್ಳುತ್ತದೆ ಎಂಬುದು ಇನ್ನೊಮ್ಮೆ ಸಿದ್ಧವಾಗಿದೆ. ಸಮಾಜವನ್ನು ಬದಲಾಯಿಸುವ ಕಾರ್ಮಿಕ ವರ್ಗ ಎಲ್ಲಿದೆ? ಕಾರ್ಮಿಕ ವರ್ಗ ಎಂಬುದೇ ಇಲ್ಲ ಎಂದು ವಾದಿಸುತ್ತಿದ್ದ ಬೂರ್ಜ್ವಾ ಪಂಡಿತರಿಗೂ ತಲೆ ಮೇಲೆ ಹೊಡೆದಂತೆ ಗಾರ್ಮೆಂಟ್ ಕಾರ್ಮಿಕರು ಉತ್ತರ ಕೊಟ್ಟಿದ್ದಾರೆ

ಇಡೀ ದೇಶದ ಎಲ್ಲಾ ಕಾರ್ಮಿಕರನ್ನು ತಟ್ಟುವ ಈ ವಿಷಯದ ಬಗ್ಗೆ ಬೆಂಗಳೂರಿನ ಗಾರ್ಮೆಂಟ್ ಕಾರ್ಮಿಕರು ಮಾತ್ರ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು ಏಕೆ? ಇದಕ್ಕೆ ಈ ಸಂಚಿಕೆಯಲ್ಲಿರುವ ಪ್ರಧಾನ ಲೇಖನದಲ್ಲಿ ಉತ್ತರವಿದೆ. ಬೆಂಗಳೂರು ಗಾರ್ಮೆಂಟ್ಸ್ ಉದ್ಯಮದ ಕೇಂದ್ರವಾಗಿರುವುದು, ಗಾರ್ಮೆಂಟ್ಸ್ ಉದ್ಯಮದ ಅತ್ಯಂತ ಶೋಷಣಾತ್ಮಕವಾಗಿರುವುದು, ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರ ಹಲವು ಆಯಾಮಗಳ ಅತೀವ ಶೋಷಣೆ, ಅವರ ಸಾಮಾಜಿಕ-ಆರ್ಥಿಕ ಹಿನ್ನೆಲೆ, ಬದುಕಿನ ಸ್ಥಿತಿ, ಅಲ್ಲಿ ಟ್ರೇಡ್ ಯೂನಿಯನುಗಳನ್ನು ಹತ್ತಿಕ್ಕಿರುವುದರಿಂದ ಯಾವುದೇ ಸುಧಾರಣೆಯ ಸಾಧ್ಯತೆಯ ಅಭಾವ – ಇವೆಲ್ಲಾ ಈ ಆಸ್ಫೋಟಕ್ಕೆ ಕಾರಣವಾಗಿವೆ ಎಂದು ತೋರುತ್ತದೆ. ಈ ಆಸ್ಫೋಟಕ್ಕೆ ಶೋಷಣೆಯ ವಿರುದ್ಧ ಗಾರ್ಮೆಂಟ್ ಕಾರ್ಮಿಕರಲ್ಲಿ ಬೂದಿ ಮುಚ್ಚಿದ ಕೆಂಡದಂತೆ ಇದ್ದ ಆಕ್ರೋಶಕ್ಕೆ ಹೊಸ ಪಿ.ಎಫ್. ನೀತಿ ಕಿಡಿ ಒದಗಿಸಿದಂತೆ ತೋರುತ್ತದೆ. ಹಲವು ರಾಜ್ಯಗಳಲ್ಲಿ ಚುನಾವಣೆಗಳು ನಡೆಯುತ್ತಿರುವುದು ಕೇಂದ್ರ ಸರಕಾರ ಅಷ್ಟು ಬೇಗ ಮಣಿಯಲು ಕಾರಣವಾಗಿರಬಹುದು.

ಮುಂದೆ ಪೆನ್ಶನ್ ಒದಗಿಸುತ್ತೇವೆ ಎಂಬ ಸೋಗಿನಲ್ಲಿ ಪಿ.ಎಫ್. ವ್ಯವಸ್ಥೆಯನ್ನೇ ಮುಗಿಸಿ ಅಲ್ಲಿ ಈಗ ಶೇಖರಣೆಯಾಗಿರುವ ರೂ. 30 ಸಾವಿರ ಕೋಟಿ, ಹಾಗೂ ಮುಂದೆ ಈ ನೀತಿ ಪೂರ್ಣವಾಗಿ ಜಾರಿಯಾದರೆ ಒದಗುವ ಲಕ್ಷಾಂತರ ಕೋಟಿ ರೂ,ಗಳನ್ನು ಲಪಟಾಯಿಸುವ ಹುನ್ನಾರದ ವಿರುದ್ಧ ಕೇಂದ್ರೀಯ ಯೂನಿಯನುಗಳು ಎಚ್ಚರಿಸಿವೆ. ಕಾರ್ಮಿಕ ವರ್ಗವನ್ನು ನಿರ್ಲಕ್ಷಿಸಿ ಕಾರ್ಮಿಕ-ವರ್ಗ ವಿರೋಧಿ ಸಮಗ್ರ ನೀತಿಯನ್ನು ಹೇರುವ ಹುನ್ನಾರದ ವಿರುದ್ಧ ಕಳೆದ ಸೆಪ್ಟೆಂಬರ್ ನಲ್ಲಿ ನಡೆದ ಮತ್ತು ಈ ಸೆಪ್ಟೆಂಬರ್ ನಲ್ಲಿ ನಡೆಯುವ ಸಾರ್ವತ್ರಿಕ ಮುಷ್ಕರದ ಮೂಲಕ ಹೋರಾಟಕ್ಕೂ ಇಳಿದಿದೆ. ಆದರೂ ಗಾರ್ಮೆಂಟ್ ಕಾರ್ಮಿಕರ ಈ ಮಟ್ಟದ ಆಕ್ರೋಶ ಕೇಂದ್ರೀಯ ಯೂನಿಯನುಗಳಿಗೂ ಪೂರ್ಣವಾಗಿ ಅನಿರೀಕ್ಷಿತವಾಗಿದ್ದು ಸೋಜಿಗ ಮತ್ತು ಆತಂಕದ ವಿಷಯ. ಗಾರ್ಮೆಂಟ್ ಕಾರ್ಮಿಕರ ಈ ಬಂಡಾಯವನ್ನು ಅವರ ಶೋಷಣೆ ಕಡಿಮೆ ಮಾಡುವತ್ತ ಸಂಘಟಿತ ಹೋರಾಟವಾಗಿಸಲು ಕೇಂದ್ರೀಯ ಯೂನಿಯನುಗಳು ಮಧ್ಯಪ್ರವೇಶ ಮಾಡುವ ಅಗತ್ಯ ಇದೆ. ಬೆಂಗಳೂರಿನ ಬಂಡಾಯದ ಸುದ್ದಿ ಹರಡುತ್ತಿದ್ದಂತೆ ರಾಜ್ಯದ ಹಲವು ಕಡೆ ಗಾರ್ಮೆಂಟ್ ಕಾರ್ಮಿಕರ ಸ್ವಯಂ-ಸ್ಫೂರ್ತ ಸೌಹಾರ್ದ ಪ್ರತಿಭಟನೆಗಳಲ್ಲಿ ಸಿಐಟಿಯು ಮಧ್ಯ ಪ್ರವೇಶ ಮಾಡಿ ನಾಯಕತ್ವ ನೀಡಿದ್ದು ಈ ನಿಟ್ಟಿನಲ್ಲಿ ಸಕಾರಾತ್ಮಕ ಬೆಳವಣಿಗೆ. ಅದೇ ಸಮಯದಲ್ಲಿ ಗಾರ್ಮೆಂಟ್ ಕಾರ್ಮಿಕರ ಈ ಬೃಹತ್ ಬಂಡಾಯ ನಡೆಯುತ್ತಿರುವಾಗ ಸ್ವಯಂ-ಸ್ಫೂರ್ತವಾಗಿಯಾಗಲಿ ಸಂಘಟಿತವಾಗಿಯಾಗಲಿ ಇತರ ಸಂಘಟಿತ/ಅಸಂಘಟಿತ ಕ್ಷೇತ್ರದ ಕಾರ್ಮಿಕರು ಸೌಹಾರ್ದ ಪ್ರತಿಭಟನೆ/ಮುಷ್ಕರ ಮಾಡದೆ ಹೋದದ್ದು ಆತಂಕಕಾರಿ. ಈ ಬಗ್ಗೆ ಕೇಂದ್ರೀಯ ಯೂನಿಯನುಗಳು ಗಮನ ಹರಿಸಬೇಕಾಗಿದೆ.

ರಾಜ್ಯ ಸರಕಾರ ಈ ಹೋರಾಟವನ್ನು ನಿರ್ವಹಿಸಿದ ರೀತಿ ಎಲ್ಲರಿಂದಲೂ ತೀವ್ರ ಖಂಡನೆಗೆ ಒಳಗಾಗಿದೆ. ಕಾರ್ಮಿಕರ ಅದರಲ್ಲೂ ಮಹಿಳಾ ಕಾರ್ಮಿಕರ ಮೇಲೆ ಪುರುಷ ಪೋಲಿಸರನ್ನು ಬಳಸಿ ಮಾಡಿದ ಕ್ರೂರ ದಮನ ಅನಿರೀಕ್ಷಿತವಲ್ಲದಿದ್ದರೂ ಆತಂಕಕಾರಿ. ಇದರ ಜತೆಗೇ ಗಾರ್ಮೆಂಟ್ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಮಾತ್ರವಲ್ಲ ಎಲ್ಲಾ ವಿಭಾಗಗಳ ಕಾರ್ಮಿಕರ ಸಮಸ್ಯೆಗಳ ಬಗ್ಗೆ ರಾಜ್ಯ ಸರಕಾರದ ದಿವ್ಯ ನಿರ್ಲಕ್ಷ್ಯ ಮತ್ತು ಅವರ ಆಕ್ರೋಶ ತೀವ್ರ ಹೋರಾಟದ ಸ್ವರೂಪ ತಾಳಿದಾಗ ಅದರ ಕ್ರೂರ ದಮನ ಅದರ ಘೋಷಿತ ನೀತಿಯೇನೋ ಎಂಬಂತೆ ಢಾಳಾಗಿ ಕಾಣುತ್ತಿದೆ. ಇದು ರಾಜ್ಯದ ವಿವಿಧ ವಿಭಾಗಗಳ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಮತ್ತೆ ಮತ್ತೆ ಕಂಡು ಬಂದಿದೆ. ಇತ್ತೀಚೆಗೆ ಪಿಯು ಉಪನ್ಯಾಸಕರ, ಅತಿಥಿ ಉಪನ್ಯಾಸಕರ ಹೋರಾಟಗಳಿಗೆ ಸಂಬಂಧಿಸಿದಂತೆ ಕಂಡು ಬಂದಿದೆ.

ಕಾರ್ಮಿಕರ ವಿವಿಧ ಹಕ್ಕೊತ್ತಾಯಗಳಿಗೆ ಆಗ್ರಹಿಸಿ ಮಾರ್ಚ್ 11ರಂದು ವಿಧಾನಸೌಧ ಚಲೋ ಚಳುವಳಿ ನಡೆಸಲಾಗಿತ್ತು. ಈ ಚಳುವಳಿಯಲ್ಲಿ ಹಮಾಲಿ, ಸಾರಿಗೆ, ಮನೆಗೆಲಸ, ಕಟ್ಟಡ, ಅಂಗನವಾಡಿ, ಬಿಸಿಯೂಟ, ಆಶಾ, 108 ಸಂಜೀವನಿ, ಮುನಿಸಿಪಲ್, ಪಂಚಾಯತ್, ಬಿಬಿಎಂಪಿ/ಬಿಎಸ್.ಎನ್.ಎಲ್. ಮುಂತಾದ ಗುತ್ತಿಗೆ ಕಾರ್ಮಿಕರು ಭಾಗವಹಿಸಿದ್ದು ತಮ್ಮ ಕ್ಷೇತ್ರದ ನಿರ್ದಿಷ್ಟ ಬೇಡಿಕೆಗಳಲ್ಲದೆ ಇಡೀ ಕಾರ್ಮಿಕ ವರ್ಗದ ಸಮಾನ ಸಮಸ್ಯೆಗಳಾದ ಕನಿಷ್ಠ ವೇತನ ಮುಂತಾದ ಹಲವು ಹಕ್ಕೊತ್ತಾಯಗಳನ್ನು ಮುಂದಿಟ್ಟಿದ್ದರು. ಆಗ ಏಪ್ರಿಲ್ 12 ರಂದು ಎಲ್ಲಾ ಇಲಾಖೆಗಳ ಅಧಿಕಾರಿಗಳು, ಸಚಿವರುಗಳೊಂದಿಗೆ ಜಂಟಿ ಸಭೆ ನಡೆಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದರು. ಅವರು ತಮ್ಮ ಮಾತಿಗೆ ತಪ್ಪಿದ್ದು ಕಾರ್ಮಿಕರನ್ನು ಕಡೆಗಣಿಸುತ್ತಿರುವ ಬಗ್ಗೆ ಏಪ್ರಿಲ್ 18ರಂದು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಿಐಟಿಯು ನೇತೃತ್ವದಲ್ಲಿ ಸಾವಿರಾರು ಕಾರ್ಮಿಕರು ಪ್ರತಿಭಟನೆಗಳಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಪ್ರತಿಭಟನೆಯನ್ನೂ ಸರಕಾರ ನಿರ್ಲಕ್ಷಿಸುವ ಸಾಧ್ಯತೆಯೇ ಹೆಚ್ಚು.

ಗಾರ್ಮೆಂಟ್ ಕಾರ್ಮಿಕರ ಬೃಹತ್ ಬಂಡಾಯದ ನಂತರವಾದರೂ ಸರಕಾರ ಪಾಠ ಕಲಿಯಬೇಕಾಗಿದೆ. ಕಾರ್ಮಿಕರ ಸಮಸ್ಯೆಗಳ ಬಗ್ಗೆ ದೀರ್ಘ ಕಾಲ ದಿವ್ಯ ನಿರ್ಲಕ್ಷ್ಯ ತೋರಿದರೆ ಅದು ಒಂದು ದಿನ ಆಸ್ಫೋಟಗೊಳ್ಳಲಿದೆ ಎಂದು ಅರಿಯಬೇಕು. ಗಾರ್ಮೆಂಟ್ ಕಾರ್ಮಿಕರ ಬೃಹತ್ ಬಂಡಾಯ ಬರಿಯ ಸ್ಯಾಂಪಲ್ ಮಾತ್ರ. ಕರ್ನಾಟಕದ ಕಾರ್ಮಿಕರ ಸಹನೆಯ ಕಟ್ಟೊಡೆಯುತ್ತಿದೆ. ಸರಕಾರ ತನ್ನ ನಿರ್ಲಕ್ಷ್ಯ ಮತ್ತು ದಬ್ಬಾಳಿಕೆಯ ನೀತಿಯನ್ನು ನಿಲ್ಲಿಸಿ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಮುತುವರ್ಜಿ ವಹಿಸಬೇಕು. ಇದಕ್ಕೆ ಅಡ್ಡವಾಗುತ್ತಿರುವ ನವ-ಉದಾರವಾದಿ ನೀತಿಗಳನ್ನು ಕೈ ಬಿಡಬೇಕು. ಇಲ್ಲದಿದ್ದರೆ ಸಂಘಟಿತ ಕಾರ್ಮಿಕ ವರ್ಗ ಗಾರ್ಮೆಂಟ್ ಕಾರ್ಮಿಕರ ಬೃಹತ್ ಬಂಡಾಯದಿಂದ ಪಾಠ ಕಲಿತು ಅದನ್ನು ಸರಕಾರಕ್ಕೆ ಕಲಿಸಬೇಕಾಗಿದೆ. •



ಕೃಪೆ: ಪಿ. ಮಹಮ್ಮದ್
ವಿಜಯ ಕರ್ನಾಟಕ

ಮೇ ತಿಂಗಳಲ್ಲಿ 'ಸಿಗರನಹಳ್ಳಿ ಚಲೋ'

ಏಪ್ರಿಲ್ 22ರಂದು ಸಿಗರನಹಳ್ಳಿಯಲ್ಲಿ ದಲಿತರ ವಿರುದ್ಧ ಮುಂದುವರೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಪತ್ರಿಕಾಗೋಷ್ಠಿ ಕರೆಯಲಾಗಿತ್ತು. ಪತ್ರಿಕಾಗೋಷ್ಠಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವರಲಕ್ಷ್ಮಿ, ಹಾಸನ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್, ಹಿರಿಯ ದಲಿತ ಮುಖಂಡರಾದ ನಾರಾಯಣದಾಸ್, ಸಿಗರನಹಳ್ಳಿ ಗ್ರಾಮಸ್ಥರು ಮತ್ತು ಪತ್ರಕರ್ತರಾದ ವಿಜಯಕುಮಾರ್ ಸಿಗರನಹಳ್ಳಿ, ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕರಾದ ಪೃಥ್ವಿ ಎಂ.ಜಿ. ಸಿಗರನಹಳ್ಳಿ ಗ್ರಾಮಸ್ಥರಾದ ತಾಯಮ್ಮ, ಪದ್ಮಮ್ಮ, ರಾಜು, ನಂಜುಂಡ, ಹಾಸನ ಜಿಲ್ಲೆ ಮಾದಿಗ ದಂಡೋರ ಅಧ್ಯಕ್ಷರಾದ ವಿಜಯಕುಮಾರ್, ಹಾಸನ ಜಿಲ್ಲೆ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಹೆಚ್.ಆರ್.ನವೀನ್‌ಕುಮಾರ್ ಹಾಜರಿದ್ದರು. ಸರಕಾರ ಸಮಸ್ಯೆ ಬಗೆಹರಿಸದಿದ್ದರೆ ಮೇ ತಿಂಗಳಲ್ಲಿ 'ಸಿಗರನಹಳ್ಳಿ ಚಲೋ' ನಡೆಸುವುದಾಗಿ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಲಾಯಿತು. ಅಲ್ಲಿ ಬಿಡುಗಡೆ ಮಾಡಲಾದ ಪತ್ರಿಕಾ ಹೇಳಿಕೆಯ ಕೆಲವು ಅಂಶಗಳು ಇಲ್ಲಿವೆ.

ಸಿಗರನಹಳ್ಳಿಯಲ್ಲಿ 2015ರ ಆಗಸ್ಟ್ 31 ರಂದು ನಾಲ್ಕು ಮಂದಿ ದಲಿತ ಮಹಿಳೆಯರು ಅಲ್ಲಿನ ಬಸವೇಶ್ವರ ದೇಗುಲ ಪ್ರವೇಶದ ನಂತರದಲ್ಲಿ ಜಾತಿ ದೌರ್ಜನ್ಯಗಳು ನಡೆಯುತ್ತಿವೆ. ದಲಿತ ಮಹಿಳೆಯರು ದೇವಸ್ಥಾನ ಪ್ರವೇಶಿಸಿದ್ದಕ್ಕೆ ವಿವಾದ ಎಬ್ಬಿಸಿದ ಸವರ್ಣೀಯರ ಗಲಭೆಯಿಂದಾಗಿ ದೇವಸ್ಥಾನಕ್ಕೆ ಬೀಗ ಹಾಕಲಾಗಿತ್ತು. ಕೂಡಲೇ ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರ ಮಧ್ಯಪ್ರವೇಶ ನಡೆಸಿ ಸಿಗರನಹಳ್ಳಿ ದಲಿತರಿಗೆ ದೇವಸ್ಥಾನ ಮತ್ತು ಸಮುದಾಯ ಭವನಕ್ಕೆ ಪ್ರವೇಶ ಕೊಡಿಸಬೇಕು ಮತ್ತು ದಲಿತರ ಮೇಲೆ ದೌರ್ಜನ್ಯ ನಡೆಸಿದವರ ವಿರುದ್ಧ ಮತ್ತು ಅದಕ್ಕೆ ಕುಮ್ಮಕ್ಕು ನೀಡಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು.

ಸಿಗರನಹಳ್ಳಿ ಮೇಲ್ವರ್ಗದ ಜನ ಪರವಾಗಿ ಜೆಡಿಎಸ್ ಶಾಸಕ ರೇವಣ್ಣ, ದಲಿತರ ವಿರುದ್ಧ ಇರುವುದು ಮತ್ತು ಘಟನೆ ಪ್ರಾರಂಭವಾದಾಗಿನಿಂದ ಹಿಂದಿನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎಚ್.ಸಿ.ಮಹದೇವಪ್ಪ ಮತ್ತು ಈಗ ಹಾಸನದವರೇ ಆದ ಎ.ಮಂಜು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರೂ ಇದುವರೆಗೂ ಒಮ್ಮೆಯೂ ಸಿಗರನಹಳ್ಳಿಗೆ ಭೇಟಿ ನೀಡಿಲ್ಲ. ರಾಜ್ಯ ಸರ್ಕಾರ ಇವೆಲ್ಲವನ್ನು ನೋಡುತ್ತ ಜಾಣಕುರುಡು ಪ್ರದರ್ಶಿಸುತ್ತಿದೆ. ಸ್ವತಹಃ ದಲಿತರೇ ಆಗಿರುವ ಗೃಹ ಸಚಿವರಾದ ಜಿ.ಪರಮೇಶ್ವರ್‌ರವರು ಜಿಲ್ಲೆಗೆ ಭೇಟಿ ನೀಡಿದರೂ ಸಿಗರನಹಳ್ಳಿಗೆ ಹೋಗುವ ಮನಸ್ಸು ಮಾಡಲಿಲ್ಲ.

ಇತ್ತೀಚೆಗೆ ಮಾನ್ಯ ಎಚ್.ಡಿ.ದೇವೇಗೌಡರು ಸಿಗರನಹಳ್ಳಿಯ ವಿಚಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜುರವರೇ ನೇರ ಹೊಣೆ ಎಂದು ಹೇಳುವ ಮೂಲಕ ಸಿಗರನಹಳ್ಳಿ ಘಟನೆಯನ್ನು ತಮ್ಮ ರಾಜಕೀಯ ದಾಳವನ್ನಾಗಿಸಿಕೊಳ್ಳುತ್ತಿದ್ದಾರೆ ಮತ್ತು ದಲಿತರು ದೇವಾಲಯದ ಗರ್ಭಗುಡಿಗೆ ಪ್ರವೇಶ ಕೋರುತ್ತಿದ್ದಾರೆಂದು ಸುಳ್ಳು ಹೇಳುವ ಮೂಲಕ ಸಾಮಾಜಿಕ ಬಹಿಷ್ಕಾರದಂತಹ ಗಂಭೀರ ವಿಚಾರವನ್ನು ದಾರಿತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ.

ದಲಿತರಿಗೆ ಮತ್ತು ಜಿಲ್ಲೆಯಲ್ಲಿ, ರಾಜ್ಯದಲ್ಲಿ ನಡೆಯುತ್ತಿರುವ ದಲಿತರ ಮೇಲಿನ ದೌರ್ಜನ್ಯದ ವಿರುದ್ಧ ನ್ಯಾಯ ಸಿಗಬೇಕಾಗಿದೆ. ಸಿಗರನಹಳ್ಳಿಯಲ್ಲಿ ಶಾಂತಿ ನೆಲೆಸಿ ಎರಡೂ ಸಮುದಾಯದವರು ಅನ್ಯೂನ್ಯವಾಗಿ ಸಹಜೀವನ ನಡೆಸುವಂತಹ ವಾತಾವರಣ ನಿರ್ಮಾಣವಾಗಬೇಕಿದೆ. ಆ ಮೂಲಕ ದಲಿತರಿಗೆ ನ್ಯಾಯ ಮತ್ತು ಸಂವಿಧಾನಾತ್ಮಕ ಹಕ್ಕುಗಳನ್ನು ಖಾತ್ರಿ ಮಾಡಬೇಕಾದದ್ದು ಜವಾಬ್ದಾರಿಯುತ ಸರ್ಕಾರದ್ದು. ಈ ವಿಚಾರದಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೂ ಮತ್ತು ಜಿಲ್ಲೆಯಲ್ಲಿ ಹತ್ತಾರು ವರ್ಷಗಳಿಂದ ರಾಜಕೀಯ ಅಧಿಕಾರವನ್ನು ಅನುಭವಿಸುತ್ತಿರುವ "ಜಾತ್ಯಾತೀತ"ಜನತಾ ದಳದ ನಾಯಕರಿಗೂ ಯಾವುದೇ ವ್ಯತ್ಯಾಸಗಳು ಗೋಚರಿಸುತ್ತಿಲ್ಲ.

ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಸಿಪಿಐ(ಎಂ), ದಲಿತ ಹಕ್ಕುಗಳ ಸಮಿತಿ ಮತ್ತು ಎಲ್ಲಾ ದಲಿತ ಮತ್ತು ಪ್ರಗತಿಪರ ಸಂಘಟನೆಗಳೊಂದಿಗೆ ಮೇ ತಿಂಗಳಲ್ಲಿ ರಾಜ್ಯದ ಎಲ್ಲಾ ಭಾಗಗಳಿಂದ "ಸಿಗರನಹಳ್ಳಿ ಚಲೋ" ಹೋರಾಟವನ್ನು ನಡೆಸಲು ನಿರ್ಧರಿಸಲಾಗಿದೆ.

ಉಪನ್ಯಾಸಕರ ಜತೆ ಚಲ್ಲಾಟ, ವಿದ್ಯಾರ್ಥಿಗಳಿಗೆ ಲಾಠಿ ಏಟು

–ಗುರುರಾಜ ದೇಸಾಯಿ



ವೇತನ ತಾರತಮ್ಯ ನಿವಾರಣೆ ಹಾಗೂ ಕುಮಾರ್ ನಾಯ್ಕ್ ವರದಿ ಜಾರಿಗೆ ಒತ್ತಾಯಿಸಿ ಸ್ವಾತಂತ್ರ್ಯ ಉಧ್ಯಾನವನದಲ್ಲಿ ಪಿ.ಯು ಉಪನ್ಯಾಸಕರು ನಡೆಸಿದ ಹೋರಾಟ 18 ದಿನಗಳ ಕಾಲ ನಡೆದಿದೆ. ಉಪನ್ಯಾಸಕರ ಹೋರಾಟಕ್ಕೆ ಎಸ್.ಎಫ್.ಐ 10 ದಿನಗಳ ಕಾಲ ಬೆಂಬಲ ನೀಡಿತ್ತು. ಸರಕಾರ ಬರೋಬ್ಬರಿ ಉಪನ್ಯಾಸಕರೊಟ್ಟಿಗೆ 7 ಬಾರಿ ಸಭೆ ನಡೆಸಿದರೂ ಉಪನ್ಯಾಸಕರ ಸಮಸ್ಯೆಗೆ ಸ್ಪಂದಿಸದೆ ಉಪನ್ಯಾಸಕರ ಬದುಕಿನಲ್ಲಿ ಚಲ್ಲಾಟವಾಡಿ, ಅವರ ಬೇಡಿಕೆಯನ್ನು ಈಡೆರಿಸದೆ ಅವರನ್ನು ಅವಮಾನಿಸಿದೆ. ಉಪನ್ಯಾಸಕರ ಸಮಸ್ಯೆ ಬಗೆಹರಿಸಿ, ಮೌಲ್ಯಮಾಪನಕ್ಕೆ ಸರಕಾರಿ ಕಾಲೇಜುಗಳ ಉಪನ್ಯಾಸಕರೆ ಮಾಡ ಬೇಕು ಹೊರತು ಖಾಸಗಿ ಕಾಲೇಜುಗಳ ಉಪನ್ಯಾಸಕರಲ್ಲ ಎಂದು ಪ್ರತಿಭಟಿಸಿದ ಎಸ್.ಎಫ್.ಐ ಸಂಘಟನೆಯ ಕಾರ್ಯಕರ್ತರ ಮೇಲೆ ಪೋಲಿಸ್ ಲಾಠಿ ಬೀಸಿ, ದೌರ್ಜನ್ಯ ನಡೆಸಲಾಗಿದೆ.

ಎರಡು ದಶಕಗಳಿಂದ ವೇತನ ತಾರತಮ್ಯ ನಿವಾರಣೆ ಮಾಡುವಂತೆ ಉಪನ್ಯಾಸಕರು ಕೇಳಿ ಕೊಂಡರು ಕ್ಯಾರೆ ಅನ್ನದ ಸರಕಾರಕ್ಕೆ ಉಪನ್ಯಾಸಕರು ಸತ್ಯಾಗ್ರಹ ನಡೆಸುವಂತೆ ಮಾಡಿತು. 18 ದಿನಗಳ ಕಾಲ ಪಾಠ ಮಾಡುವ ಗುರುವಿನ ಬದುಕು ಬೀದಿಗೆ ಬಂದಿತ್ತು. ಐಕ್ಯತೆಯಿಂದ, ಶಾಂತಿಯುತವಾಗಿ ಬೇಡಿಕೆ ಈಡೇರಿಸುವಂತೆ ಸರಕಾರವನ್ನು ಮನವಿ ಮಾಡಿದರು ಸರಕಾರಕ್ಕೆ ಅನುಕಂಪವೇ ಬರಲಿಲ್ಲ. ಒಂದು ಬಡ್ತಿ ಹಾಗೂ ವಿಶೇಷ ಭತ್ಯೆಯನ್ನು ನೀಡುತ್ತೇವೆ ಎನ್ನುವ ಮೂಲಕ ಉಪನ್ಯಾಸಕರ ಹೋರಾಟವನ್ನು ಅವಮಾನಿಸಿದರು. ಎಸ್ಮಾ ಕಾಯ್ದೆ ಜಾರಿಗೆ ತರುವುದಾಗಿ ಬೆದರಿಕೆ ಹಾಕಿದರು. ಮೌಲ್ಯಮಾಪನಕ್ಕೆ ಹಾಜರಾಗದ ಉಪನ್ಯಾಸಕರ ಮನೆಗಳಿಗೆ ನೋಟಿಸ್ ಹಚ್ಚುವಂತೆ ಆದೇಶ ಮಾಡಿದರು. ನ್ಯಾಯ ಕೇಳಿದ ಉಪನ್ಯಾಸಕರೊಟ್ಟಿಗೆ ಸರಕಾರ ನಡೆದುಕೊಂಡ ರೀತಿ ಅಮಾನವೀಯ. ಸರಕಾರದ ಬಗ್ಗೆ ಅಸಹ್ಯ ಹುಟ್ಟಿಸುವಂತಿತ್ತು.

ಉಪನ್ಯಾಸಕರೇನು ವೇತನ ಹೆಚ್ಚಿಸುವಂತೆ ಬೇಡಿಕೆ ಇಟ್ಟಿರಲಿಲ್ಲ, ಇತರ ರಾಜ್ಯಗಳಲ್ಲಿ ಪಿಯು ಕಾಲೇಜಗಳ ಉಪನ್ಯಾಸಕರಿಗೆ ಹೆಚ್ಚುವರಿ ವೇತನವಿದೆ. ನಮ್ಮಷ್ಟೆ ಅವಧಿ ಕೆಲಸ ಮಾಡುವ ಪದವಿ ಮತ್ತು ಸ್ನಾತ–ಕ್ಕೋತ್ತರ ಕಾಲೇಜುಗಳ ಉಪನ್ಯಾಸಕರಿಗೆ ಎರಡರಷ್ಟು ವೇತನವಿದೆ. ಅದನ್ನು ಸರಿ ಪಡಿಸಿ ನಮಗೂ ನ್ಯಾಯ ಒದಗಿಸಿ ವೇತನ ತಾರತಮ್ಯ ನಿಲ್ಲಿಸಿ ಎಂದೂ ಕೇಳಿದ್ದರಲ್ಲಿ ತಪ್ಪೇನಿದೆ? ಆದರೆ ಸರಕಾರ ತನ್ನಲ್ಲಿ ಅಷ್ಟು ಹಣವಿಲ್ಲವೆಂದು ಉಪನ್ಯಾಸಕರ ಬೇಡಿಕೆಯನ್ನು ತಿರಸ್ಕರಿಸಿತು. ಸಾಲದ್ದಕ್ಕೆ ಬರಗಾಲವಿರುವುದರಿಂದ ಈ ರೀತಿ ವೇತನ ಹೆಚ್ಚಿಸುವಂತೆ ಕೇಳುವುದು ಸರಿಯಲ್ಲ ಎಂದು ಅವರ ಬೇಡಿಕೆಯನ್ನು ಭಾವನಾತ್ಮಕದ ಕಡೆ ತಿರುಗಿಸಿತು. ಶಾಸಕರ, ಸಚಿವರ ವೇತನ ಹೆಚ್ಚಿಸಿಕೊಳ್ಳುವಾಗ ಇವರಿಗೆ ಬರಗಾಲದ ಪ್ರಶ್ನೆ ಕಾಡಲಿಲ್ಲ. ಮಠ ಮಾನ್ಯಗಳಿಗೆ ಹಣ ಮುಟ್ಟಿಸುವಾಗಲೂ ಇವರಿಗೆ ಬರಗಾಲ ಕಾಣಲಿಲ್ಲ. ಆದರೆ ಸರಕಾರಿ ಕಾಲೇಜುಗಳಲ್ಲಿ ದುಡಿಯುವ ಉಪನ್ಯಾಸಕರೆ ವೇತನಕ್ಕೆ ಮಾತ್ರ ಬರಗಾಲದ ಪ್ರಶ್ನೆ ಸರಕಾರವನ್ನು ಕಾಡತೊಡಗಿದಂತಿದೆ.

ಕೇವಲ ಒಂದು ಬಡ್ತಿ ಹಾಗೂ ವಿಶೇಷ ಭತ್ಯೆ ನೀಡುವ ಸರಕಾರದ ಪ್ರಸ್ತಾಪವನ್ನು ಉಪನ್ಯಾಸಕರು ತಿರಸ್ಕರಿಸಿದ್ದಾರೆ. ಮಕ್ಕಳ ಹಿತದೃಷ್ಟಿಯಿಂದ ಮೌಲ್ಯ ಮಾಪನಕ್ಕೆ ಹಾಜರಾಗಿದ್ದಾರೆ. ನಮ್ಮ ಹಕ್ಕನ್ನು ನಾವು ಕೇಳುತ್ತಿದ್ದೇವೆ, ಸರಕಾರದ ಭಿಕ್ಷೆ ನಮಗೆ ಬೇಕಿಲ್ಲ. ಸರಕಾರಿ ಕಾಲೇಜುಗಳ ಮಕ್ಕಳ ಏಳಿಗೆಗಾಗಿ ಶ್ರಮವಹಿಸಿದ್ದೇವೆ. ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ಗೌರವ ನೀಡಿ ಮುಷ್ಕರವನ್ನು ಅಂತ್ಯ ಗೊಳಿಸಿ ಮೌಲ್ಯಮಾಪನಕ್ಕೆ ಹಾಜರಾಗುತ್ತಿದ್ದೇವೆ ಎಂದು ಉಪನ್ಯಾಸಕರ ಸಂಘದ ಅಧ್ಯಕ್ಷರಾದ ತಿಮ್ಮಯ್ಯ ಪುರ್ಲೆ ತಿಳಿಸಿದ್ದಾರೆ. ಮೌಲ್ಯಮಾಪನದ ನಂತರ ಮತ್ತೆ ಹೋರಾಟ ಚುರುಕುಗೋಳ್ಳುವ ಸಾದ–ೄತೆ ಇದೆ. ಉಪನ್ಯಾಸಕರ ಆಕ್ರೋಶ ರಟ್ಟೆಗೆ ಬಂದಿದೆ. ಇವರನ್ನು ಪ್ರತಿನಿಧಿಸಿ ಇವರಿಂದ ಮತ ಪಡೆದ ವಿಧಾನ ಪರಿಷತ್ ಸದಸ್ಯರ ಮೋಸ, ಸರಕಾರದ ನಿರ್ಲಕ್ಷ್ಯ ಮತ್ತೆ ಉಪನ್ಯಾಸಕರನ್ನು ಬಿದಿಗಿಳಿಸಿದರೆ ಅಚ್ಚರಿ ಪಡಬೇಕಿಲ್ಲ.

ಲಾಠಿ ಏಟು : ಪರ್ಯಾಯ ಮಾರ್ಗಗಳ ಮೂಲಕ ಹಾಗೂ ಅನುದಾನ ರಹಿತ ಉಪನ್ಯಾಸಕರಿಂದ ಮೌಲ್ಯಮಾಪನ ಮಾಡಲು ಮುಂದಾಗಿರುವ ಸರಕಾರದ ಕ್ರಮ ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಖಈಖ) ಸಂಘಟನೆಯು ಪಿಯು ಬೋರ್ಡ್‌ಗೆ ಮುತ್ತಿಗೆ ಹಾಕಲು ಪ್ರಯತ್ನಿಸಿತು. ಮುತ್ತಿಗೆ ಹಾಕಲು ಮುಂದಾದಾಗ ಪೋಲೀಸರು ಕಾರ್ಯಕರ್ತರ ಮೇಲೆ ಅಮಾನವೀಯವಾಗಿ ಲಾಠಿ ಚಾರ್ಜ್ ನಡೆಸಿದರು. ನಂತರ ಸ್ಥಳಕ್ಕಾಗಮಿಸಿದ ಶಿಕ್ಷಣ ಇಲಾಖೆಯ ಪ್ರದಾನಕಾರ್ಯದರ್ಶಿ ಅಜಯ್ ಸೇಠ್ ರವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಎಸ್.ಎಫ್.ಐ ರಾಜ್ಯಕಾರ್ಯದರ್ಶಿ ಗುರುರಾಜ್ ದೇಸಾಯಿ “18 ವರ್ಷಗಳಿಂದ ಪಿ.ಯು ಉಪನ್ಯಾಸಕರು ವೇತನ ನಿವಾರಣೆ ಮಾಡುವಂತೆ ಸರಕಾರವನ್ನು ಒತ್ತಾಯಿಸುತ್ತಿದ್ದಾರೆ. ಈಗಿರುವ ಸ್ಥಿತಿಯಲ್ಲಿ ಉಪನ್ಯಾಸಕರ ಬೇಡಿಕೆ ನ್ಯಾಯಯುತವಾಗಿದೆ. ಸರಕಾರ ಅವರ ಸಮಸ್ಯೆ ಬಗೆ ಹರಿಸಿ ಮೌಲ್ಯ ಮಾಪನ ಸರಾಗವಾಗಿ ನಡೆಯುವಂತೆ ಮುತುವರ್ಜಿ ವಹಿಸಬೇಕಿದೆ. ಉಪನ್ಯಾಸಕರ ಹೋರಾಟ ತೀವ್ರಗೊಳ್ಳುತ್ತಿದ್ದರೂ ಪಾಠ ಕಲಿಯದ ಸಚೀವರು ಮತ್ತು ಪಿ.ಯು ಮಂಡಳಿ ಅನುದಾನ ರಹಿತ ಕಾಲೇಜುಗಳ ಉಪನ್ಯಾಸಕರಿಂದ ಮೌಲ್ಯಮಾಪನ ಮಾಡಿಸುವುದಾಗಿ ಹೇಳುತ್ತಿದ್ದಾರೆ. ಪ್ರಶ್ನೆ ಪತ್ರಿಕೆ ಸೋರಿಕೆಯ ಆರೋಪ ಹೊತ್ತಿರುವ ನಾರಾಯಣ ಕಾಲೇಜು, ಚೈತನ್ಯ ಕಾಲೇಜು, ದೀಕ್ಷಾ ಕಾಲೇಜು, ಪ್ರೆಸಿಡೆನ್ಸಿ ಕಾಲೇಜ್, ಬೃಂದಾವನ ಕಾಲೇಜ್, ರೋಯಲ್ ಕೋನಿಕೋಡ್ ಕಾಲೇಜ್, ಸೇರಿಂದತೆ ಇತರೆ ಕಾಲೇಜುಗಳ ಉಪನ್ಯಾಸಕರನ್ನು ಕರೆಯಿಸಿ ಮೌಲ್ಯ ಮಾಪನ ಮಾಡಿಸಲು ಮುಂದಾಗಿರುವುದು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿಯಮಗಳಿಗೆ ವಿರುದ್ಧವಾಗಿದೆ. ಪ್ರಶ್ನೆ ಪತ್ರಿಕೆ ಲೀಕ್ ಮಾಡಿದ ಕಾಲೇಜುಗಳ ಉಪನ್ಯಾಸಕರಿಂದ ಮೌಲ್ಯ ಮಾಪನ ಮಾಡಿಸುವುದು ಎಷ್ಟು ಸರಿ? ಪರೀಕ್ಷೆ ನಡೆಯುವಾಗಲೇ ಹೆಚ್ಚಿನ ಅಂಕ ತಮ್ಮ ಕಾಲೇಜುಗಳಿಗೆ ಸಿಗಬೇಕೆಂಬ ಕಾರಣಕ್ಕೆ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದ ಕಾಲೇಜುಗಳಿಂದ ಮೌಲ್ಯಮಾಪನ ಮಾಡಿಸದರೆ ಅಲ್ಲಿ ಅಕ್ರಮ ನಡೆಯುವ ಸಾಧ್ಯತೆಗಳಿವೆ. ಅನುಭವ ಇಲ್ಲದ ಉಪನ್ಯಾಸಕರಿಂದ ಮೌಲ್ಯ ಮಾಪನ ಮಾಡಿದಲ್ಲಿ ಮೌಲ್ಯಮಾಪನದಲ್ಲಿ ದೋಷಗಳು ಕಾಣಲಿವೆ. ಹಾಗಾಗಿ ಸರಕಾರ ಖಾಸಗಿ ಉಪನ್ಯಾಸಕರಿಂದ ಯಾವುದೇ ಕಾರಣಕ್ಕೂ ಮೌಲ್ಯ ಮಾಪನ ಮಾಡಬಾರದು. ಧರಣಿ ನಿರತ ಉಪನ್ಯಾಸಕರ ಬೇಡಿಕೆ ಈಡೇರಿಸಿ ಮೌಲ್ಯ ಮಾಪನಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲ ವಾದಲ್ಲಿ ನಾಳೆ ಮೌಲ್ಯ ಮಾಪನ ನಡೆಯುವ ಕೇಂದ್ರಗಳಿಗೆ ಮುತ್ತಿಗೆ ಹಾಕಲಿದೆ ಎಂದು ಎಚ್ಚರಿಕೆ ನೀಡಿದರು.



ಪ್ರತಿಭಟನೆಯಲ್ಲಿ ಎಸ್.ಎಫ್.ಐ ರಾಜ್ಯಮುಖಂಡರಾದ ವೆಂಕಟೇಶ್.ಕೆ, ಹನಮಂತ್ ದುರ್ಗದ್, ಮಹೇಶ್, ಶೃತಿ ನೆಲಮಾಕನಳ್ಳಿ, ದಿಲಿಪ್ಪಶೆಟ್ಟ್, ಮೋನಿಷಾ, ಶಿವಕುಮಾರ್ ಸೇರಿದಂತೆ ಅನೇಕರಿದ್ದರು. ●

ಹಿಂದೂ ಧರ್ಮ, ದೇವಸ್ಥಾನ ಮತ್ತು ಜಾತ್ರೆಗಳನ್ನು ಯಾರೂ ಸಂಘಪರಿವಾರಕ್ಕೆ ಗುತ್ತಿಗೆ ಕೊಟ್ಟಿಲ್ಲ. ದೇವಸ್ಥಾನಗಳ ತೇರು, ಜಾತ್ರೆ, ದೈವಸ್ಥಾನಗಳ ಕೋಲ, ನೇಮ, ಗೆಂಡ ಸೇವೆ ಮುಂತಾದವುಗಳು ನಡೆಯುವ ಕಡೆ ಮುಸ್ಲಿಮ್ ವ್ಯಾಪಾರಿಗಳು ವ್ಯಾಪಾರ ಮಾಡಲು ಅವಕಾಶವನ್ನು ನಿಷೇಧಿಸಲಾಗಿದೆ ಎಂದು ಕರಾವಳಿಯ ವಿವಿಧೆಡೆ ಹಿಂದೂ ಜಾಗರಣ ವೇದಿಕೆ ಮತ್ತು ಅವರ ಇತರ ಮನೆ ಮುರುಕ ಸಂಘಟನೆಗಳು ಬ್ಯಾನರ್ ಹಾಕುತ್ತಿವೆ. ಊರಿನ ಜಾತ್ರೆಗಳು ಆಯಾ ಊರಿನ ಜನರ ಹಬ್ಬಗಳು ವಿನಃ ಅದು ಹಿಂದೂ ಜಾಗರಣ ವೇದಿಕೆಯ ಹಿಂದೂ ಸಮಾಜೋತ್ಸವ ಅಲ್ಲ. ಹಿಂದೂ ಸಮಾಜೋತ್ಸವಗಳಲ್ಲಿ ನೀವು ಬೇಕಾದರೆ ಬೇರೆ ಧರ್ಮದವರು ಸಾಕಿದ ಪ್ರಾಣಿಗಳನ್ನು ಸಹ ಆ ಜಾಗದತ್ತ ಸುಳಿಯಲು ಬಿಡಬೇಡಿ. ಆದರೆ ಊರಿನ ಜಾತ್ರೆಗಳು ಆಯಾ ಊರಿನ ಜನರಿಗೆ ಸಂಬಂಧಪಟ್ಟಿದ್ದು. ಅಲ್ಲಿ ಯಾರು ಬರಬೇಕು, ಹೋಗಬೇಕು, ವ್ಯಾಪಾರ ಮಾಡಬೇಕು ಎಂಬುದನ್ನು ನಿರ್ಧರಿಸಲು ದೇವಸ್ಥಾನಗಳ ಸಮಿತಿ, ಊರಿನ ಆಡಳಿತ, ಅಲ್ಲಿನ ನಾಗರಿಕರು ಇರುತ್ತಾರೆ. ಹಿಂದೂ ಧರ್ಮ, ದೇವಸ್ಥಾನ ಮತ್ತು ಜಾತ್ರೆಗಳನ್ನು ಯಾರೂ ಸಂಘಪರಿವಾರಕ್ಕೆ ಗುತ್ತಿಗೆ ಕೊಟ್ಟಿಲ್ಲ. ಊರಿನ ಜನರು ಹಿಂಜಾವೇಯ ಇಂತಹ ನಿಲುವುಗಳನ್ನು ಖಂಡಿಸಬೇಕು ಮತ್ತು ಪೊಲೀಸರಿಗೆ ದೂರು ನೀಡಬೇಕು (ಪೊಲೀಸರು ಏನು ಮಾಡುವುದಿಲ್ಲ ಎಂದು ನಂಗೂ ಗೊತ್ತಿದೆ, ಆದರೂ). ಊರಿನ ನೆಮ್ಮದಿ ಕಾಪಾಡುವುದು ಆ ಊರಿನ ಬಹುಸಂಖ್ಯಾತರ ಜವಾಬ್ದಾರಿ.
ಅಷ್ಟಕ್ಕೂ ಮುಸ್ಲಿಮರ ಮಣಿ ಸರಕು, ಪಾತ್ರೆ, ಚಪ್ಪಲಿ, ಉಡುಪು, ಆಟಿಕೆಗಳ ಅಂಗಡಿಗಳಿಲ್ಲದ ಜಾತ್ರೆ ಜಾತ್ರೆಯಾಗುವುದಾದರೂ ಹೇಗೆ?

– ಶಶಿಧರ ಹೆಮ್ಮಾಡಿ

ಮಾತಿಗೆ ತಪ್ಪಿದ ಸರ್ಕಾರ

ಕಾರ್ಮಿಕರ ಹೋರಾಟದ ಸಂದರ್ಭದಲ್ಲಿ ಏಪ್ರಿಲ್ 12 ರಂದು ಎಲ್ಲಾ ಇಲಾಖೆಗಳ ಅಧಿಕಾರಿಗಳು, ಸಚಿವರುಗಳೊಂದಿಗೆ ಜಂಟಿ ಸಭೆ ನಡೆಸುವುದಾಗಿ ಭರವಸೆ ನೀಡಿದ್ದ ಮುಖ್ಯಮಂತ್ರಿ ಸಿದ್ದಾರಮಯ್ಯನವರು ತಮ್ಮ ಮಾತಿಗೆ ತಪ್ಪಿದ್ದು ಕಾರ್ಮಿಕರನ್ನು ಕಡೆಗಣಿಸುತ್ತಿರುವ ಬಗ್ಗೆ ಏಪ್ರಿಲ್ 18ರಂದು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಿಐಟಿಯು ನೇತೃತ್ವದಲ್ಲಿ ಸಾವಿರಾರು ಕಾರ್ಮಿಕರ ಪ್ರತಿಭಟನೆಗಳಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿತು.

ರಾಜ್ಯ ಸರ್ಕಾರ ಕಾರ್ಮಿಕ ಮುಖಂಡರೊಂದಿಗೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ ಕಾರ್ಮಿಕರ ಹಕ್ಕೋತ್ತಾಯಗಳನ್ನು ಈ ಕೂಡಲೇ ಚರ್ಚಿಸಬೇಕು, ಅಧಿಸೂಚಿತ ಪರಿಷ್ಕೃತ ಕನಿಷ್ಠ ವೇತನ ಮತ್ತು ಬೋನಸ್ ಕಾಯ್ದೆ ತಿದ್ದುಪಡಿ ಜಾರಿ ಮಾಡಬೇಕು. ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯಗಳ ಸ್ಥಾಪನೆಗಾಗಿ, ಕನಿಷ್ಠ ವೇತನ ಮತ್ತು ವೇತನ ಪಾವತಿ ಕ್ಲೈಮ್ ಸಲ್ಲಿಸಲು ಸೂಕ್ತ ಪ್ರಾಧಿಕಾರದ ಅಧಿಸೂಚನೆ ಹೊರಡಿಸಬೇಕು ಎಂದು ಆಗ್ರಹಿಸಲಾಯಿತು.

ಹಮಾಲಿ ಹಾಗೂ ಆಟೋ ಮತ್ತು ಮನೆಕೆಲಸ ಸೇರಿದಂತೆ ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಪಶ್ಚಿಮ ಬಂಗಾಳದ ಮಾದರಿಯಲ್ಲಿ ಭವಿಷ್ಯ ನಿಧಿ ಮತ್ತು ಪಿಂಚಣಿ ಯೋಜನೆ ಜಾರಿ ಮಾಡಬೇಕು. ಬೆಲೆ ಏರಿಕೆಗೆ ತಕ್ಕಂತೆ ವೈಜ್ಞಾನಿಕವಾಗಿ ಪ್ರತಿ ವರ್ಷ ಕೂಲಿ ಪರಿಷ್ಕರಣೆಯಾಗಬೇಕು. ಮನೆ ನಿವೇಶನಕ್ಕಾಗಿ ಬಜೆಟ್‌ನಲ್ಲಿ ಹೆಚ್ಚಿನ ಹಣ ಮೀಸಲಿಡಬೇಕು. ಕಲ್ಯಾಣ ಮಂಡಳಿಯ ಸಾಮಾಜಿಕ ಭದ್ರತೆ ಯೋಜನೆಗಳಿಗಾಗಿ ಅಗತ್ಯ ಹಣಕಾಸನ್ನು ಬಜೆಟ್‌ನಲ್ಲಿ ನೀಡಬೇಕು ಎಂಬುದು ಮಾತುಕತೆಯಲ್ಲಿ ಚರ್ಚೆಯಾಗಬೇಕಾದ ಇತರ ವಿಷಯಗಳಾಗಿದ್ದವು.

ಸ್ಟಾರ್ಟ್ ಆಫ್ ಕೈಗಾರಿಕೆಗಳಿಗೆ (ನವೋದ್ಯಮ) ಕಾರ್ಮಿಕ ಕಾನೂನುಗಳಿಂದ ವಿನಾಯಿತಿ ನೀಡುವ ಕೇಂದ್ರ ಸರಕಾರದ ನೀತಿಯನ್ನು ಜಾರಿ ಮಾಡಬಾರದು, ಕಾರ್ಮಿಕ ಕಾನೂನುಗಳ ಕಟ್ಟುನಿಟ್ಟಿನ ಜಾರಿಗೆ ಅಗತ್ಯ ಕ್ರಮವಹಿಸಬೇಕು. ಸರಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಅದರಲ್ಲೂ ಕಾರ್ಮಿಕ ಇಲಾಖೆಯಲ್ಲಿ ಮತ್ತು ತತ್ಸಂಭದಿತ ಇಲಾಖೆಗಳಲ್ಲಿ ಅಗತ್ಯ ಸಿಬ್ಬಂದಿಯನ್ನು ಭರ್ತಿ ಮಾಡಬೇಕು ಎಂಬವೂ ಕಾರ್ಮಿಕರ ಹಕ್ಕೊತ್ತಾಯಗಳಲ್ಲಿ ಸೇರಿದ್ದವು.

4 ಸಾರಿಗೆ ನಿಗಮಗಳಿಗೆ ತಕ್ಷಣ ಜಾರಿಯಾಗುವಂತೆ ಆರ್ಥಿಕ ನೆರವನ್ನು ನೀಡಬೇಕು, ಫೆಬ್ರವರಿ–12, 2015 ರಂದು ಮುಖ್ಯಮಂತ್ರಿಗಳು ಒಪ್ಪಿಕೊಂಡಿರುವಂತೆ ಅಂಗನವಾಡಿ ನೌಕರರಿಗೆ ಸೇವಾವಧಿಗೆ ಅನುಗುಣವಾಗಿ ಕನಿಷ್ಠಕೂಲಿಯನ್ನು ಜಾರಿ ಮಾಡಬೇಕು. ಸೇವಾ ಜೇಷ್ಠತೆ ಆಧಾರದಲ್ಲಿ ಮೇಲ್ವಿಚಾರಕಿಯರ ನೇಮಕ ಆಗಬೇಕು, ಬಿಸಿಯೂಟ ನೌಕರರಿಗೆ ಬದುಕಳಿಯುವ ಕೂಲಿ ಮತ್ತು ಸೇವಾ ಭದ್ರತೆ ಕೊಡಬೇಕು ಮುಂತಾದ ಹಕ್ಕೊತ್ತಾಯಗಳ ಬಗ್ಗೆ ಯಾವುದೇ ಪ್ರಗತಿ ಆಗದ್ದನ್ನು ಪ್ರತಿಭಟಿಸಲಾಯಿತು.

ಸರ್ಕಾರ ನಿಗದಿ ಪಡಿಸಿರುವ ಕನಿಷ್ಠ ದರಕ್ಕಿಂತ ಕಡಿಮೆ ದರದಲ್ಲಿ ವಿದೇಶಿ ಬಂಡವಾಳದ ಟ್ಯಾಕ್ಸಿಗಳು ಆರ್.ಟಿ.ಓ ತೀರ್ಮಾನವನ್ನು ಮತ್ತು ಕಾನೂನನ್ನು ಉಲ್ಲಂಘನೆ ಮಾಡುತ್ತಿವೆ. ಕಾಂಪಿಟೇಶನ್ ಆಕ್ಟ್‌ನಲ್ಲಿ ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಕಡಿಮೆ ದರದಲ್ಲಿ ಕಾರುಗಳನ್ನು ಓಡಿಸುವುದರಿಂದ ಕಾಂಪಿಟೇಷನ್ ಆಕ್ಟ್ 2002 ಸೆಕ್ಷನ್ 3(1) ಮತ್ತು 3(2) (ಬಿ) ಸ್ಪಷ್ಟ ಉಲ್ಲಂಘನೆಯಾಗಿರುವುದರ ವಿರುದ್ಧ ರಾಜ್ಯ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಕೊಂಡು ಆಟೋ ಚಾಲಕರಿಗೆ ನ್ಯಾಯ ಒದಗಿಸಬೇಕು ಎಂದೂ ಆಗ್ರಹಿಸಲಾಯಿತು.

ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹದನದ ಬದಲಾಗಿ ತಿಂಗಳ ವೇತನ ನೀಡಬೇಕು ಮತ್ತು ಅವರನ್ನು 45ನೇ ಐಎಲ್‌ಸಿ ತೀರ್ಮಾನದಂತೆ ನೌಕರರೆಂದು ಪರಿಗಣಿಸಿ ವಜಾ ಮಾಡಿರುವ ಹೋರಾಟ ನಿರತ 108 ಅಂಬೂಲೆನ್ಸ್ ನೌಕರರನ್ನು ಕೂಡಲೇ ಮರು ನೇಮಕ ಮಾಡಿಕೊಳ್ಳಬೇಕೆಂದು ಪ್ರತಿಭಟನಾ ಸಂದರ್ಭದಲ್ಲಿ ಆಗ್ರಹಿಸಲಾಯಿತು.

ವಿದ್ಯುತ್ ಕಂಪನಿಗಳು, ಆರೋಗ್ಯ ಹಾಗೂ ಕಂದಾಯ, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆಗಳಲ್ಲಿ, ಬಿಬಿಎಂಪಿ ಮತ್ತು ಬಿಎಸ್‌ಎನ್‌ಎಲ್ ಗಳಲ್ಲಿ ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ಖಾಯಂ ಮಾಡಬೇಕು ಮತ್ತು ತಕ್ಷಣದಿಂದಲೇ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿ ಮಾಡಬೇಕು ಎಂಬವೂ ಕಾರ್ಮಿಕರ ಹಕ್ಕೊತ್ತಾಯಗಳಲ್ಲಿ ಸೇರಿದ್ದವು. •

ಸತ್ಯಮಂಗಲ ಗಾರ್ಮೆಂಟ್ ಕಾರ್ಮಿಕರಿಂದ ಬೃಹತ್ ಪ್ರತಿಭಟನೆ

ಬೆಂಗಳೂರಿನಲ್ಲಿ ನಡೆದ ಗಾರ್ಮೆಂಟ್ ಕಾರ್ಮಿಕರ ಬೃಹತ್ ಬಂಡಾಯದ ಫಲವಾಗಿ ರಾಜ್ಯದಾದ್ಯಂತ ಗಾರ್ಮೆಂಟ್ ಕಾರ್ಖಾನೆ ಇರುವ ಹೆಚ್ಚಿನ ಕಡೆಗಳಲ್ಲಿ ಸ್ವಯಂಸ್ಫೂರ್ತವಾಗಿ ಸೌಹಾರ್ದ ಪ್ರತಿಭಟನೆಗಳು ನಡೆದಿವೆ. ಪಿ.ಎಫ್ ವಂಚನೆ, ಕಿರುಕುಳ ಮತ್ತಿತರ ಹಕ್ಕೊತ್ತಾಯಗಳಿಗಾಗಿ ಪ್ರತಿಭಟನೆ ನಡೆದಿವೆ. ಇಂತಹ ಹಲವು ಪ್ರತಿಭಟನೆಗಳಲ್ಲಿ ಸಿಐಟಿಯು ಮಧ್ಯಪ್ರವೇಶ ಮಾಡಿ ನಾಯಕತ್ವ ಕೊಡಲು ಸಾಧ್ಯವಾಗಿದೆ. ತುಮಕೂರು ಜಿಲ್ಲೆಯ ಸತ್ಯಮಂಗಲ ಸತ್ಯಮಂಗಲ ಕೈಗಾರಿಕಾ ಪ್ರದೇಶದ ಪ್ರತಿಭಟನೆ ಬಗ್ಗೆ ವರದಿ ಇಲ್ಲಿದೆ.



ಇಂತಹ ಪ್ರತಿಭಟನೆಗಳು ಮೈಸೂರು, ನಂಜನಗೂಡು, ಮದ್ದೂರು, ಹಾಸನ, ಗೆದ್ದಲಗೆರೆ, ಮಾಲೂರು, ಹಾಗೂ ಕೋಲಾರದ ಹಲವು ತಾಲೂಕುಗಳಿಂದ ನಡೆದ ವರದಿಗಳು ಬಂದಿವೆ. ಇದು ಗಾರ್ಮೆಂಟ್ ಕಾರ್ಮಿಕರ ಬೃಹತ್ ಬಂಡಾಯದ ಸಂಘಟನೆಯಾಗಿ ಗಟ್ಟಿಗೊಳ್ಳುವ ಶುಭಸೂಚನೆ ನೀಡಿದೆ.

ಸತ್ಯಮಂಗಲ ಕೈಗಾರಿಕಾ ಪ್ರದೇಶದಲ್ಲಿರುವ ಸ್ಟಾರ್ಟರ್ ಗಾರ್ಮೆಂಟ್ಸ್ ಕಾರ್ಖಾನೆಯ ಮಾಲೀಕರು ಕಾರ್ಮಿಕರ ಹಣದಲ್ಲಿ ಕಡಿತ ಮಾಡಿರುವ ಪಿಎಫ್ ಹಣವನ್ನು ಹಾಗೂ ಆಡಳಿತ ಮಂಡಳಿಯ ಪಾಲಿನ ಹಣವನ್ನು ಸಂದಾಯ ಮಾಡದೇ ಇರುವ ಕ್ರಮವನ್ನು ಖಂಡಿಸಿ, ತಿಂಗಳಿಗೆ ಸರಿಯಾಗಿ ಸಂಬಂಳ ಪಾವತಿ ಮಾಡದೇ ಇರುವ ಕ್ರಮ ಮತ್ತು ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡುವುದಿಲ್ಲ ಹಾಗೂ ಹೆಣ್ಣು ಮಕ್ಕಳನ್ನು ಅತ್ಯಂತ ಅಶ್ಲೀಲ ಹಾಗೂ ಅತ್ಯಂತ ಕಿಳುಪದಗಳಿಂದ ನಿಂದಿಸುತ್ತಾರೆ ಎಂದು ಆರೋಪಿಸಿ ಸಾವಿರಾರು ಗಾರ್ಮೆಂಟ್ಸ್ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ದಿನಾಂಕ : 21-04-2016 ರಂದು ಧರಣಿ ನಡೆಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕಾರ್ಮಿಕ ಭವಿಷ್ಯನಿಧಿ ತುಮಕೂರು ಪ್ರಾದೇಶಿಕ ಕಛೇ-ರಿಯ ಆಯುಕ್ತರಾದ ನಾಯಕ್‌ರವರು ಸಮಸ್ಯೆಗಳ ಸುರಿಮಳೆಯನ್ನೆ ಸುರಿಸಿದ ಕಾರ್ಮಿಕರು ತಮಗೆ ಪಿ.ಎಫ್. ನ ನಲ್ಲಿ ಎಷ್ಟು ಹಣವಿದೆ ಎಂಬುದಕ್ಕೆ ಮಾಹಿತಿ ಇಲ್ಲ ಹಾಗೂ ನಮಗೆ ಪಿಎಫ್ ವಿಚಾರದಲ್ಲಿ ವಂಚಿಸಲಾಗುತ್ತಿದೆ ಎಂದು ದೂರಿದರು. ಸಮಸ್ಯೆಯನ್ನು ಸಮಾಧಾನದಿಂದ ಆಲಿಸಿದ ಭವಿಷ್ಯನಿಧಿ ಆಯುಕ್ತರು ಕಾರ್ಮಿಕರು ಪಿ.ಎಫ್. ನಲ್ಲಿ ಅನ್ಯಾಯವಾಗಿದಲ್ಲಿ ಲಿಖಿತ ದೂರು ಸಲ್ಲಿಸಿದಲ್ಲಿ ಕ್ರಮಕೈಗೊಳ್ಳಲಾಗುವುದು ಹಾಗೂ ಆಡಳಿತ ಮಂಡಳಿ ಸಹಕರಿಸಿದಲ್ಲಿ ಪ್ರತಿತಿಂಗಳು ಪ್ರತಿ ಕಾರ್ಮಿಕರ ಹಣ ಎಷ್ಟು ಕಡಿತವಾಗಿದೆ ಎಂಬುದನ್ನು ಮೊಬೈಲುಗಳಿಗೆ ಎಸ್.ಎಂ.ಎಸ್ ಮೂಲಕ ತಿಳಿಸಲಾಗುವುದು ಎಂದರು.

ಪ್ರತಿತಿಂಗಳು 10ನೇ ತಾರೀಖಿನೊಳಗೆ ಸಂಬಂಳ ನೀಡದೆ ಇರುವ ಬಗ್ಗೆ ಹಾಗೂ ಅಶ್ಲೀಲವಾಗಿ ಮತ್ತು ಕಿಳುಪದಗಳಿಂದ ನಿಂದಿಸುವವರ ಮೇಲೆ ಕ್ರಮಕೈಗೊಳ್ಳುವಂತೆ ಜಿಲ್ಲಾ ಕಾರ್ಮಿಕ ಅಧಿಕಾರಿ ನರಸಿಂಹೇಗೌಡ ಕೈಗಾರಿಕೆಗಳ ಉಪನಿರ್ದೇಶಕ ನರೇಂದ್ರಬಾಬು ಪ್ರತಿಭಟನಾಕಾರರ ಅಹವಾಲನ್ನು ಆಲಿಸಿ ಈ ತಿಂಗಳ ಮೇತಿಂಗಳ ಒಳಗೆ ತಪಾಸಣೆ ನಡೆಸಿ ಕಾನೂನು ಉಲ್ಲಂಘನೆಗಳನ್ನು ಪತ್ತೆ ಮಾಡಿ ಪ್ರಕರಣ ದಾಖಲಿಸುವುದಾಗಿ ನುಡಿದರು.

ಸ್ಥಳಕ್ಕೆ ಆಗಮಿಸಿದ ಕಾರ್ಖಾನೆಯ ಮುಖ್ಯ ವ್ಯವಸ್ಥಾಪಕ ಹಾಗೂ ಮಾನವ ಸಂಪನ್ಮೂಲ ಅಧಿಕಾರಿಯೊಂದಿಗೆ ಮುಖಂಡರು ಚರ್ಚೆ ವಾಗ್ವಾದಗಳನ್ನು ನಡೆಸಿದ ನಂತರ ಅಂತಿಮ ತೀರ್ಮಾನಕ್ಕೆ ಬರಲಾಯಿತು. ಎರಡು ತಿಂಗಳ ಒಳಗೆ ಸೆಪ್ಟಂಬರ್ 2015 ರಿಂದ ಬಾಕಿ ಇರುವ ಪಿ.ಎಫ್. ನ್ನು ಪಾವತಿಸುವುದಾಗಿ ಹಾಗೂ ಪ್ರತಿ ತಿಂಗಳು ಸಂಬಂಳವನ್ನು ಶಾಸನಾತ್ಮಕವಾಗಿ ನೀಡುವುದಾಗಿ ಹಾಗೂ ಈ ಹೋರಾಟದ ಕಾರಣವನ್ನು ಬಳಸಿ ಯಾವ ಕಾರ್ಮಿಕರ ಮೇಲೂ ಸೇಡಿನ ಕ್ರಮ ಕೈಗೊಳ್ಳುವುದಿಲ್ಲ ಎಂದು ಭರವಸೆ ನೀಡಿದ ನಂತರ ಪ್ರತಿಭಟನಾಕಾರರು ಪ್ರತಿಭಟನೆಯನ್ನು ಹಿಂದಕ್ಕೆ ಪಡೆದರು.

ಹೋರಾಟದಲ್ಲಿ ಸಿಐಟಿಯುನ ಜಿಲ್ಲಾಧ್ಯಕ್ಷ ಸೈಯದ್ ಮುಜೀಬ್, ಪ್ರಧಾನ ಕಾರ್ಯದರ್ಶಿ ಎನ್. ಕೆ.ಸುಬ್ರಮಣ್ಯ, ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಬಿ. ಉಮೇಶ್, ವಿನಾಯಕ ಸಿಎನ್.ಸಿ.ಯ ಗಿರೀಶ್, ಡಿ.ವೈ.ಎಫ್.ಐ.ನ ಜಿ. ದರ್ಶನ್, ಕಾರ್ಮಿಕ ಮುಖಂಡ ಗಿರೀಶ್ ಮುಂತಾದವರು ನೇತೃತ್ವವಹಿಸಿದ್ದರು. ●

ಬೀದಿಗೆ ಬಿದ್ದ ಬೀಡಿ ಕಾರ್ಮಿಕರ ಪ್ರತಿಭಟನೆ

ದಶಕಗಳಿಂದ ಬೀಡಿ ಉದ್ಯಮವನ್ನೇ ನಂಬಿ ಜೀವನ ಸಾಗಿಸುತ್ತಿದ್ದ ಲಕ್ಷಾಂತರ ಬೀಡಿ ಕಾರ್ಮಿಕರನ್ನು ಕೇಂದ್ರ ಸರ್ಕಾರ ಬೀದಿಗೆ ತಳ್ಳಿದೆ ಎಂದು ಆರೋಪಿಸಿ ಬೀಡಿ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿದರು.

ಕೇಂದ್ರದ ನರೇಂದ್ರಮೋದಿ ಸರ್ಕಾರ ತಂಬಾಕು ನಿಷಿದ್ಧ ಕಾಯ್ದೆಯ ಹೆಸರಿನಲ್ಲಿ ಲಕ್ಷಾಂತರ ಬೀಡಿ ಕಾರ್ಮಿಕರನ್ನು ಬೀದಿಗೆ ತಳ್ಳಿದೆ. ಬೀಡಿ ಕಾರ್ಮಿಕರಿಗೆ ಪರ್ಯಾಯವಾದ ಉದ್ಯೋಗದ ವ್ಯವಸ್ಥೆಯನ್ನು ಮಾಡದೆ ಏಕಾಏಕಿ ಈ ರೀತಿಯ ಕ್ರಮಗಳನ್ನು ಕೈಗೊಂಡಿರುವುದನ್ನು ಬಲವಾಗಿ ಖಂಡಿಸಿದರು.

ರಾಜ್ಯದಲ್ಲಿ ಬೀಡಿ ಕಾರ್ಮಿಕರ ಸೂಕ್ತ ಪರ್ಯಾಯ ಕೆಲಸ ನೀಡಲು ಕೇಂದ್ರ ರಾಜ್ಯ ಸರ್ಕಾರಗಳು ಯಾವುದೇ ಯೋಜನೆ ಕೊಡಿಸದೆ ಧೂಮಪಾನ ನಿಷೇಧವನ್ನು ಕಠಿಣವಾಗಿ ಜಾರಿಗೆ ತರಲು ಹೊರಟಿದೆ. ಇದರಿಂದ ರಾಜ್ಯದಲ್ಲಿ ಹಲವು ದಶಕಗಳಿಂದ ರಾಜ್ಯದ 23 ಜಿಲ್ಲೆಗಳಲ್ಲಿ 10 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಬೀಡಿ ಉದ್ಯಮದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಬೀದಿಗೆ ಬಂದಿದ್ದಾರೆ.

ಕೇಂದ್ರ ಸರ್ಕಾರ ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗದ ವ್ಯವಸ್ಥೆ ಮಾಡದೆ ಬೀಡಿ ಕಾರ್ಮಿಕರನ್ನು ಬೀದಿಗೆ ತಳ್ಳುವ ಕ್ರಮವನ್ನು ಕೈಬಿಡಬೇಕು ಮತ್ತು ತಂಬಾಕು ನಿಷಿದ್ಧ ಕಾಯ್ದೆಯಿಂದ ಕೆಲಸ ಕಳೆದು ಕೊಂಡವರಿಗೆ 2 ಲಕ್ಷ ಪರಿಹಾರ ಕೊಡಬೇಕು 1,000 ಬೀಡಿಗೆ 300ರೂ ಕೂಲಿ, ಪಿ.ಎಫ್ ಮತ್ತು ಮಾಸಿಕ ಪಿಂಚಣಿ 3,000ರೂ ನೀಡಬೇಕು ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತ್ರಿಪಕ್ಷೀಯ ಸಭೆಯನ್ನು ನಡೆಸುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು.

ಸಿಗರೇಟ್ ಹಾಗೂ ಇತರೆ ತಂಬಾಕು ಉತ್ಪನ್ನಗಳ ಕಾಯ್ದೆಯ **(COTPA)** ಹಲವು ಅಂಶಗಳನ್ನು ವಿರೋಧಿಸಿ ಅಖಿಲ ಭಾರತ -ಬೀಡಿ ಮಾಲೀಕರ ಸಂಘ, ಏಪ್ರಿಲ್ 01 ರಿಂದ ಉತ್ಪಾದನೆಯನ್ನು ಸ್ಥಗಿತಗೊಳಿಸಿದೆ. ಬೀಡಿ ಕಾರ್ಮಿಕರಿಗೆ ಕಚ್ಚಾ ವಸ್ತುಗಳನ್ನು ನೀಡದೆ ಕೆಲಸ ನಿರಾಕರಿಸಲಾಗುತ್ತಿದೆ. ಇದರಿಂದಾಗಿ ಬಡ ಬೀಡಿ ಕಾರ್ಮಿಕರು ಕೆಲಸ ಇಲ್ಲದೆ ದುಡಿಮೆ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ, ಮಾಲೀಕರ ಈ ರೀತಿ ಏಕಾ-ಏಕಿ ಕೆಲಸ ನಿರಾಕರಿಸಿರುವುದನ್ನು ಸಿ.ಐ.ಟಿ.ಯು ವಿರೋಧಿಸುತ್ತದೆ.

ಮಾಲಿಕರು ಈ ರೀತಿಯಲ್ಲಿ ಕೆಲಸ ಸ್ಥಗಿತಗೊಳಿಸುತ್ತಿರುವ ಅವಧಿಗೆ ಕನಿಷ್ಠ ವೇತನ ಕಾಯ್ದೆಯಲ್ಲಿ ಮಾಲೀಕರು ದಿನದ ಕೆಲಸಕ್ಕೆ ಅಗತ್ಯವಿರುವ ಕಚ್ಚಾ ವಸ್ತುಗಳನ್ನು ನೀಡದೆ ಇರುವಾಗ ದಿನದ ವೇತನದ ಶೇ. 40 ರಷ್ಟನ್ನು ಖಾತ್ರಿವೇತನವಾಗಿ ನೀಡಬೇಕಾಗುತ್ತದೆ. ಕನಿಷ್ಠ ವೇತನ ಕಾನೂನು ನಿಯಮದ ಆಧಾರದಲ್ಲಿ ನಿಗದಿ ಪಡಿಸಿರುವ ಖಾತ್ರಿ ವೇತನವನ್ನು ಕೆಲಸ ನೀಡದೆ ಇರುವ ದಿನಗಳ ಖಾತ್ರಿ - ವೇತನ ನೀಡುವಂತೆ ಆಗ್ರಹಿಸಲಾಯಿತು.

ಕರ್ನಾಟಕ ರಾಜ್ಯ ಸರ್ಕಾರವು ಬೀಡಿ ಕಾರ್ಮಿಕ ವಿರೋಧಿಯಾಗಿ ವರ್ತಿಸುತ್ತಿದೆ. ಬಡ ಬೀಡಿ ಕಾರ್ಮಿಕರು ವಿಪರೀತ ಬೆಲೆ ಏರಿಕೆಯಿಂದ ಪರಿತಪಿಸುತ್ತಾರೆ. ಆದರೆ 1.04.2015 ರಿಂದ ಪ್ರತಿ ದಿನದ ಕೂಲಿಯಲ್ಲಿ ಹೆಚ್ಚಳವಾಗ ಬೇಕಾಗಿದ್ದ ತುಟ್ಟಿ ಭತ್ಯೆ ರೂ. 18.16ನ್ನು ಪಾವತಿ ಮಾಡುವುದರಿಂದ 12 ತಿಂಗಳುಗಳ ಕಾಲಕ್ಕೆ ವಿನಾಯಿತಿ ನೀಡಿ ಕಾರ್ಮಿಕ ಸಚಿವರು ಕಾನೂನು ಬಾಹಿರ ಆದೇಶ ಹೊರಡಿಸಿದ್ದಾರೆ. ಈ ವಿಚಾರ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಗಿದೆ. ಈ ಅಕ್ರಮ ಆದೇಶವನ್ನು ಹಿಂದಕ್ಕೆ ಪಡೆಯಬೇಕೆಂದೂ ಪ್ರತಿಭಟನೆಯಲ್ಲಿ ಒತ್ತಾಯಿಸಲಾಯಿತು.

ದಕ್ಷಿಣ ಕನ್ನಡ, ತುಮಕೂರು, ದಾವಣಗೆರೆ ಸೇರಿದಂತೆ ಹಲವು ಕಡೆಗಳಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.

ತುಮಕೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್‌ಮುಜೀಬ್, ಪ್ರಧಾನಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ಬೀಡಿ ಕಾರ್ಮಿಕರ ಸಂಘದ ಶಹತಾಜ್, ರಫೀಕ್, ವಿನಾಯಕ ಸಿಎನ್.ಸಿಯ ಗಿರೀಶ್, ಕಾಳೇಶ್ವರಿ ಮುತ್ತುರಾಜ್, ಡಿ.ವೈ.ಎಫ್.ಐ ನಗರಾಧ್ಯಕ್ಷ ಜಿ. ದರ್ಶನ್, ಸೇರಿದಂತೆ ಮುಂತಾದವರು ನೇತೃತ್ವವಹಿಸಿದ್ದರು.

ದಾವಣಗೆರೆಯಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್‌ರವರು ಮಾತನಾಡಿದರು. ಮುಖಂಡರಾದ ಓಬೆದುಲ್ಲಾ, ಮಮ್ತಾಜ್‌ಬಿ, ರಝೀಯಾಬಿ, ಫಿರೋಕ್‌ಬಿ, ಜಿಲ್ಲಾ ಕಾರ್ಯದರ್ಶಿ ಶ್ರೀನಿವಾಸಮೂರ್ತಿ, ರವಿಕುಮಾರ್ ಭಾಗವಹಿಸಿದ್ದರು. ●


ದಾವಣಗೆರೆ


ಬೆಳ್ತಂಗಡಿ


ತುಮಕೂರು

ಈ ವಾರ ಚರಿತ್ರೆಯಲ್ಲಿ

18 ಎಪ್ರಿಲ್ 1991
ಕೇರಳ ಬಾರತದ ಮೊದಲ ಸಂಪೂರ್ಣ ಸಾಕ್ಷರ ರಾಜ್ಯ

ಕೇರಳ ಬಾರತದ ಮೊದಲ ಸಂಪೂರ್ಣ ಸಾಕ್ಷರ ರಾಜ್ಯ ಎಂದು ಘೋಷಿತವಾಗಿ 25 ವರ್ಷಗಳು ಕಳೆದಿವೆ. ತ್ರಿಪುರಾ ಮುಂತಾದ ಸಣ್ಣ ಈಶಾನ್ಯ ರಾಜ್ಯಗಳನ್ನು ಬಿಟ್ಟರೆ ಈ ಸಾಧನೆ ಮಾಡಿದ ಏಕಮಾತ್ರ ಪ್ರಮುಖ ರಾಜ್ಯ ಕೇರಳ. ಸಂಪೂರ್ಣ ಸಾಕ್ಷರತಾ ಚಳುವಳಿ ಕೊಟ್ಟಾಯಂ ಮುನಿಸಿಪಾಲಿಟಿ ಮತ್ತು ಎರ್ನಾಕುಲಂ ಜಿಲ್ಲೆಯಲ್ಲಿ 1980ರ ದಶಕದಲ್ಲೇ ಆರಂಭವಾಯಿತು. ಫೆಬ್ರುವರಿ 4, 1990ರಂದು ದೇಶದ ಮೊದಲ ಸಂಪೂರ್ಣ ಸಾಕ್ಷರ ಜಿಲ್ಲೆ ಎಂದು ಘೋಷಿತವಾಯಿತುಸಿದನ್ನು ಸಾಧಿಸಲು ಸಾವಿರಾರು ಸ್ವಯಂಸೇವಕರು ಕಲಾ ಜಾಥಾ, ಕ್ಲಾಸುಗಳು ಮುಂತಾದವುಗಳ ಮೂಲಕ ಸತತವಾಗಿ ದುಡಿದರು. ಈ ಪ್ರಯೋಗದ ಮಾದರಿಯನ್ನು ತೆಗೆದುಕೊಂಡು ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ ನಂತಹ ಜನವಿಜ್ಞಾನ ಚಳುವಳಿಯ ಬೆಂಬಲದೊಂದಿಗೆ ಇಡೀ ರಾಜ್ಯಕ್ಕೆ ಆ ಅನುಭವವನ್ನು ವಿಸ್ತರಿಸಲಾಯಿತು. ಇದರ ಫಲವಾಗಿ ಸುಮಾರು 14 ತಿಂಗಳುಗಳಲ್ಲಿ ಇಡೀ ರಾಜ್ಯವೇ ಸಂಪೂರ್ಣ ಸಾಕ್ಷರವಾಯಿತು. ಈ ಅನುಭವವನ್ನು ಇಡೀ ದೇಶಕ್ಕೆ ವಿಸ್ತರಿಸಲು ಸಂಪೂರ್ಣ ಸಾಕ್ಷರ ಮಿಶನ್ ಹಾಕಿಕೊಳ್ಳಲಾಯಿತು.

ಉದಾರೀಕರಣ ಚಕ್ರ ಒಂದು ಸುತ್ತು ಪೂರ್ಣಗೊಳಿಸಿದೆ

ಇಂದು 1991ರ ಹೊಸ ಆರ್ಥಿಕ ನೀತಿಯ ರಜತೋತ್ಸವ ವರ್ಷದಲ್ಲಿ ನಾವಿದ್ದೇವೆ. ನಾವು 1991ರಲ್ಲಿ ಅಳವಡಿಸಿಕೊಂಡ ಉದಾರವಾದ–ಖಾಸಗೀಕರಣ–ಮಾರ್ಕೆಟ್ಟೀಕರಣ ನೀತಿಗಳ ಬಗ್ಗೆ ಮರುಚಿಂತನೆ ನಡೆಸಬೇಕಾದ ಕಾಲ ಈಗ ಬಂದಿದೆ. ಇಂದು ಮತ್ತೆ 'ಯಾರಿಗಾಗಿ ಅಭಿವೃದ್ಧಿ' ಅನ್ನುವ ಪ್ರಶ್ನೆಯು ಮುಂಚೂಣಿಗೆ ಬರುತ್ತಿದೆ. ಇಂದು ಸಮಾಜವಾದದ ಬಗ್ಗೆ, ಸಮಾನತೆಯ ಬಗ್ಗೆ, ಸಾಮಾಜಿಕ ನ್ಯಾಯದ ಬಗ್ಗೆ ಸೂಕ್ಷ್ಮವಾದ ಮರುಚಿಂತನೆ ಜಾಗತಿಕವಾಗಿ ಆರಂಭವಾಗಿದೆ. ಥಾಮಸ್ ಪಿಕೆಟ್ಟಿ, ಜೋಸೆಫ್ ಸ್ಟಿಗ್‌ಲಿಡ್ಜ್, ಪಾಲ್ ಕೃಗ್‌ಮನ್, ಪ್ರಭಾತ್ ಪಟ್ನಾಯಿಕ್ ಮುಂತಾದವರು ಅಭಿವೃದ್ಧಿಯಲ್ಲಿ ಸಮಾನತೆಯ ಮಹತ್ವವನ್ನು ಒತ್ತಿ ಹೇಳುತ್ತಿದ್ದಾರೆ.

ಅತಿಥಿ ಅಂಕಣ



– ಪ್ರೊ. ಟಿ.ಆರ್.ಚಂದ್ರಶೇಖರ

ನಮ್ಮ ದೇಶವು 1991ರಲ್ಲಿ ಉದಾರೀಕರಣ, ಖಾಸಗೀಕರಣ, ಮಾರ್ಕೆಟ್ಟೀಕರಣ, ಬಹುರಾಷ್ಟ್ರೀಕರಣಗಳನ್ನು ಒಳಗೊಂಡ ಹೊಸ ಆರ್ಥಿಕ ನೀತಿಯನ್ನು ಅಳವಡಿಸಿಕೊಂಡಿತು. ಇದನ್ನು ಟೀಕಾಕಾರರು ನವ–ವಸಾಹತುಶಾಹಿ, ನವ–ಲಿಬರಲ್ ಪ್ರಣಾಳಿಕೆ ಎಂದು ಕರೆಯುತ್ತಾರೆ. ಈ ಪ್ರಣಾಳಿಕೆಯ ಪರಿಣಾಮವಾಗಿ ಸಾರ್ವಜನಿಕ ಉದ್ದಿಮೆಗಳು, ಸಮಾಜವಾದ, ಕಾರ್ಮಿಕ ಸಂಘಟನೆಗಳು, ಸಾಮಾಜಿಕ ಭದ್ರತೆ, ಸಮಾನತೆ ಮುಂತಾದವು ಅಸಹ್ಯಕರ (ಡರ್ಟಿ) ನುಡಿಗಳಾಗಿ ಬಿಟ್ಟವು. 'ಯಾರಿಗಾಗಿ ಅಭಿವೃದ್ಧಿ' ಎಂಬ ಪ್ರಶ್ನೆಯು ಅಪಹಾಸ್ಯದ, ತಿರಸ್ಕಾರದ ಸಂಗತಿಯಾಗಿ ಬಿಟ್ಟಿತು. ಲಾಭ, ಪೈಪೋಟಿ, ವೈವಿಧ್ಯತೆ, ಗುಣಮಟ್ಟ, ವಿದೇಶಿ ಬಂಡವಾಳ, ಎಮ್‌ಎನ್‌ಸಿಗಳು, ಮಾರುಕಟ್ಟೆ ಮುಂತಾದವು ಆಕರ್ಷಣೀಯ ನುಡಿಗಳಾಗಿಬಿಟ್ಟವು. ಅದರ ಮುಂದುವರಿದ ಭಾಗವಾಗಿ ಇಂದು ನಾವು 'ಬ್ರೈನ್ ಡ್ರೈನ್' ಅನ್ನುವುದನ್ನು 'ಬ್ರೈನ್ ಗೈನ್' ಎಂದು ಕರೆಯುತ್ತಿದ್ದೇವೆ. ಮೇಕ್ ಇನ್ ಇಂಡಿಯಾ, ಸ್ಟ್ಯಾಂಡ್ ಅಪ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿ–ಯಾ, ಡಿಜಿಟಲ್ ಇಂಡಿಯಾ ಮುಂತಾದವು, ಯಾರು ಏನೇ ಹೇಳಿದರೂ, 1991ರ ನೀತಿ ಪ್ರಣಾಳಿಕೆಯ ಸಂತಾನವೇ ಆಗಿವೆ. ವಿದೇಶಿ ಬಂಡವಾಳನ್ನು ಆಹ್ವಾನಿಸುವುದರ ಬಗ್ಗೆ ನಮಗಿಂದು ಯಾವ ಸಂಕೋಚವೂ ಉಳಿದಿಲ್ಲ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ 'ಸ್ವದೇಶಿ' ಎಂದು ಉಗ್ರವಾಗಿ 1990ರ ದಶಕದಲ್ಲಿ ಕೂಗಾಡುತ್ತಿದ್ದ ಜನರು ಇಂದು ಯಾವ ಬಿಡೆಯಿಲ್ಲದೆ 'ವಿದೇಶಿ ಬಂಡವಾಳ'ದ ಜಪ ಮಾಡತೊಡಗಿದ್ದಾರೆ. ದೇಶಭಕ್ತಿ, ರಾಷ್ಟ್ರೀಯತೆ ಬಗ್ಗೆ ಭಾವುಕರಾಗಿ ಉದ್ವೇಗದ ಭಾಷಣ ಮಾಡುತ್ತಿದ್ದವರು ಇಂದು 'ರಕ್ಷಣಾ ಉದ್ದಿಮೆ'ಗಳಲ್ಲೂ ಮತ್ತು ಚಿಲ್ಲರೆ ಮಾರಾಟದಲ್ಲಿಯೂ ವಿದೇಶಿ ಬಂಡವಾಳದ ಪ್ರವೇಶಕ್ಕೆ ಅನುವು ಮಾಡಿಕೊಡುತ್ತಿದ್ದಾರೆ. ಏಕೆಂದರೆ ಅದು 'ಅನಿವಾರ್ಯ' ಎಂಬ ಸಂಗತಿಯಿದೆ ಮತ್ತು 'ಅಧಿಕಾರ' ಎಂಬ ಪವಾಡ ಎಲ್ಲವನ್ನು ಬದಲಿಸಿ ಬಿಡುತ್ತದೆ ಎಂಬುದಕ್ಕೆ ಇಲ್ಲಿದೆ ನಿದರ್ಶನ.

ಈ 1991ರಲ್ಲಿ ಜಾರಿಗೆ ಬಂದ ಮುಕ್ತ ಆರ್ಥಿಕ ನೀತಿಯ ಚಕ್ರವು ಇಂದು ತನ್ನ ಒಂದು ಸುತ್ತನ್ನು ಪೂರ್ಣಗೊಳಿಸಿದಂತೆ ಕಾಣುತ್ತದೆ. ಅದರ ಇತಿಮಿತಿಗಳು ಇಂದು ನಮಗೆ ಗೋಚರವಾಗ ತೊಡಗಿವೆ. ಸಾರ್ವಜನಿಕ ಉದ್ದಿಮೆಗಳು ಅನುಭವಿಸುತ್ತಿದ್ದ ನಷ್ಟದ ಬಗ್ಗೆ, ಅವುಗಳ ಉತ್ಪನ್ನಗಳ ಕಳಪೆ ಗುಣಮಟ್ಟದ ಬಗ್ಗೆ, ಕೆಳಮಟ್ಟದ ಉತ್ಪಾದಕತೆಯ ಬಗ್ಗೆ, ಕಾರ್ಮಿಕ ಸಂಘಟನೆಗಳ 'ಮಾಫಿಯಾ' ಬಗ್ಗೆ ಜಾಗತಿಕವಾಗಿ ಮತ್ತು ಆಂತರಿಕವಾಗಿ ತಜ್ಞರು ಟೀಕೆ ಮಾಡುತ್ತಿದ್ದರು. ಸರ್ಕಾರದ ಉದ್ದಿಮೆ ಎಂದರೆ ನಷ್ಟದ ಉದ್ದಿಮೆ, ಬಿಳಿ ಆನೆ, ಅದಕ್ಷತೆಯ ಕೂಪ ಎಂದೆಲ್ಲ ಹೇಳಲಾಗುತ್ತಿತ್ತು. ಖಾಸಗೀಕರಣ ಅಸ್ತಿತ್ವಕ್ಕೆ ಬಂದು ಇಪ್ಪತ್ತೈದು ವರ್ಷಗಳ ನಂತರ ಖಾಸಗಿ ಉದ್ದಿಮೆಗಳ ಕೊಡುಗೆ ಹೇಗಿದೆ? ಅವುಗಳ ಉತ್ಪನ್ನಗಳ ಗುಣಮಟ್ಟ, ಲಾಭ, ಉದ್ಯೋಗಗಳ ಕೊಡುಗೆ, ಜಿಡಿಪಿಗೆ ಕಾಣಿಕೆ ಮುಂತಾದವುಗಳ ಸ್ಥಿತಿಗತಿ ಬಗ್ಗೆ ಏನು ಹೇಳುವುದು? ರಾಡಿಯಾ ಟೇಪುಗಳ ವೃತ್ತಾಂತ, ಮಲ್ಯ ಅವರ ಬ್ಯಾಂಕುಗಳ ಸಾಲದ ಪುರಾಣ(ಇಂತವರ ಪುರಾಣ ಲೆಕ್ಕವಿಲ್ಲದಷ್ಟಿದೆ!), ಕಲ್ಲಿದ್ದಲು ಗಣಿಗಳ, ಅದಿರು ನಿಕ್ಷೇಪಗಳ, ದೂರವಾಣಿ ಸಂಪರ್ಕ ಜಾಲದ ಲಿಲಾವುಗಳು ಮುಂತಾದ ಕ್ಷೇತ್ರದಲ್ಲಿ ಏನೆಲ್ಲ ಮೋಸ, ಅನ್ಯಾಯ, ಭ್ರಷ್ಟಾಚಾರ, ಸ್ವಜನಪಕ್ಷಪಾತ, ಸಂಚಿತ ನಷ್ಟ ನಡೆದಿದೆ ಎಂಬುದನ್ನು ವಿವರಿಸುವ ಅಗತ್ಯವಿಲ್ಲ. ಈ ಪ್ರಕರಣಗಳಲ್ಲೆಲ್ಲ ಇದ್ದವರು ಖಾಸಗಿ ಉದ್ದಿಮೆಗಾರರೇ!

ನೆಹರೂ ಅವರ ಸಮಾಜವಾದಿ ನೀತಿಯ ಬಗ್ಗೆ ಇಲ್ಲದ ಸಲ್ಲದ ಟೀಕೆಗಳನ್ನು ಮಾಡಲಾಗುತ್ತಿದೆ. ನಮ್ಮ ದೇಶದಲ್ಲಿ ಕಳೆದ 50–60 ವರ್ಷಗಳಿಂದ ಅಭಿವೃದ್ಧಿಗೆ ಸಂಬಂಧಿಸಿದಂತೆ ಏನೂ ನಡೆದಿಲ್ಲ ಎಂದೂ ಹೇಳುವುದಕ್ಕೆ ಸಂಬಂಧಿಸಿದಂತೆ ಆಳುವ ಪಕ್ಷದಲ್ಲಿ ಪೈಪೋಟಿ ನಡೆಯುತ್ತಿದೆ. ಜಾಗತಿಕವಾಗಿ 2008–09ರಲ್ಲಿ ಉಂಟಾದ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳನ್ನು ನಮ್ಮ ದೇಶವು ಸ್ವಲ್ಪಮಟ್ಟಿಗಾದರೂ ತಡೆದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದರೆ ಅದರ ಕೀರ್ತಿಯು 1960 ಮತ್ತು 70ರ ದಶಕದಲ್ಲಿ ನೆಹರೂ ಸರ್ಕಾರ ಕಟ್ಟಿದ ಸಾರ್ವಜನಿಕ ಬೃಹತ್ ಮತ್ತು ಭಾರಿ ಉದ್ದಿಮೆಗಳ ಕೊಡುಗೆ ಎಂಬುದನ್ನು ಮರೆಯಬಾರದು. ಇಂದು ಸೇವಾ ಕ್ಷೇತ್ರದಲ್ಲಿ ಅದ್ಭುತವಾದ ಸಾಧನೆಯನ್ನು ಭಾರತ ಸಾಧಿಸಿಕೊಂಡಿದ್ದರೆ ಅದರಲ್ಲಿ ನೆಹರೂ ಅವರು ನಿರ್ಮಿಸಿದ್ದ ಮೂಲಭೂತ ಸೌಲಭ್ಯಗಳ ಅಡಿಪಾಯದ ಕಾಣಿಕೆ ಇದೆ ಎಂಬುದನ್ನು ನಾವು ಗುರುತಿಸಬೇಕಾಗಿದೆ (ನೆಹರೂ ಅಂದು ಕಟ್ಟಿದ್ದ ಸಾರ್ವಜನಿಕ ಉದ್ದಿಮೆಗೆ ಸಮನಾದ ಒಂದು ಉದ್ದಿಮೆಯನ್ನಾದರೂ ಇಂದು ನಮಗೆ ಕಟ್ಟುವುದು ಸಾಧ್ಯವೇ ಎಂಬುದರ ಬಗ್ಗೆ ಚಿಂತಿಸುವ ಅಗತ್ಯವಿದೆ).

ಇಂದು 1991ರ ಹೊಸ ಆರ್ಥಿಕ ನೀತಿಯ ರಜತೋತ್ಸವ ವರ್ಷದಲ್ಲಿ ನಾವಿದ್ದೇವೆ. ಈ ನೀತಿಯನ್ನು ಅಳವಡಿಸಿಕೊಳ್ಳುವುದು ಅಂದು ಅನಿವಾರ್ಯವಾಗಿತ್ತು ಎಂಬುದು ಅದಕ್ಕೆ ಕೊಡುತ್ತಿರುವ ಒಂದು ಕಾರಣ. ಈ ನೀತಿಯು ಭಾರತಕ್ಕೆ ಮಾತ್ರ ವಿಶಿಷ್ಟವಾಗಿರಲಿಲ್ಲ. ಅದೊಂದು ಜಾಗತಿಕ ಸಂಗತಿಯಾಗಿತ್ತು ಎಂಬುದು ನಿಜ. ಖಾಸಗೀಕರಣ ಅನ್ನುವುದು ಸದ್ಗುಣಗಳ ಕೋಶವೇನಲ್ಲ ಅನ್ನುವುದು ಇಂದು ನಮ್ಮ ಅರಿವಿಗೆ ಬರುತ್ತಿದೆ. ಮುಕ್ತ ಆರ್ಥಿಕ ನೀತಿಯ ಬಗ್ಗೆ ನಾವು 1991ರಿಂದ ಬಂಡವಾಳ ಖಾತೆ ಪರಿವರ್ತನೆ ಬಗ್ಗೆ ಅನುಸರಿಸಿಕೊಂಡು ಬಂದ ಸಾವಧಾನ–ವ್ಯವಧಾನದ ಕ್ರಮಗಳು 2008–09ರಲ್ಲಿನ ಕುಸಿತದ ಬಿಕ್ಕಟ್ಟಿನಿಂದ ನಮ್ಮ ಆರ್ಥಿಕತೆಯನ್ನು ರವಷ್ಟಾದರೂ ರಕ್ಷಿಸಿದವು ಎಂಬುದನ್ನು ಅನೇಕ ಅರ್ಥಶಾಸ್ತ್ರಜ್ಞರು ಗುರುತಿಸಿದ್ದಾರೆ. ನಾಡಿನ ಎಡಪಂಥೀಯ ಚಿಂತಕರು, ವಿದ್ವಾಂಸರು ಈ ಬಗ್ಗೆ ಸರ್ಕಾರಕ್ಕೆ 1991ರಿಂದಲೂ ಎಚ್ಚರಿಕೆ ನೀಡುತ್ತಾ ಬಂದಿರುವುದು ನಮ್ಮ ಮುಂದಿದೆ.

ಮುಕ್ತ ಆರ್ಥಿಕ ನೀತಿಯ ಬಗ್ಗೆ ಮರುಚಿಂತನೆ

ನಾವು 1991ರಲ್ಲಿ ಅಳವಡಿಸಿಕೊಂಡ ಉದಾರವಾದ – ಖಾಸಗೀಕರಣ – ಮಾರ್ಕೆಟ್ಟೀಕರಣ ನೀತಿಗಳ ಬಗ್ಗೆ ಮರುಚಿಂತನೆ ನಡೆಸಬೇಕಾದ ಕಾಲ ಈಗ ಬಂದಿದೆ. ಆರ್ಥಿಕತೆಯ ಎಲ್ಲ ಜವಾಬುದಾರಿಯನ್ನು ಮಾರುಕಟ್ಟೆ ಶಕ್ತಿಗೆ ನೀಡುವುದರಿಂದ ಏನೆಲ್ಲ ಅನಾಹುತಗಳು ಉಂಟಾಗುತ್ತವೆ ಎಂಬುದರ ಬಗ್ಗೆ ಇಂದು ನಮಗೆ ಅರಿವಾಗಿದೆ. ಸಾರ್ವಜನಿಕ ವಲಯವಾಗಲಿ ಅಥವಾ ಖಾಸಗಿ ವಲಯವಾಗಲಿ ತಮ್ಮಷ್ಟಕ್ಕೆ ಪರಿಪೂರ್ಣವಾದ ವ್ಯವಸ್ಥೆಯೇನಲ್ಲ. ಆದರೆ ಮಾರುಕಟ್ಟೆಯು ಉಳ್ಳವರ ಹಿತಾಸಕ್ತಿಯನ್ನು ಕಾಯಬಹುದೇ ವಿನಾ ಉಳಿದವರ ಬದುಕನ್ನು ಸಮೃದ್ಧಗೊಳಿಸಲಾಗದು. ನಮ್ಮದು ಮೂಲತಃ ಶ್ರೇಣೀಕೃತ ಸಮಾಜ. ಅಭಿವೃದ್ಧಿಯು ಇಲ್ಲಿ ಎಲ್ಲ ಸಾಮಾಜಿಕ ವರ್ಗಗಳಿಗೂ ಏಕರೂಪದಲ್ಲಿ ಫಲಗಳನ್ನು ಒದಗಿಸುವುದಿಲ್ಲ. ಇಲ್ಲಿ ಅಭಿವೃದ್ಧಿ ಅನ್ನುವುದನ್ನು ಉಳ್ಳವರು ಗುತ್ತಿಗೆ ಹಿಡಿದುಬಿಟ್ಟಿದ್ದಾರೆ. ವಾಸ್ತವವಾಗಿ ವಿತ್ತೀಯ ಕೊರತೆ, ವಿದೇಶಿ ಖಾತೆಯಲ್ಲಿನ ಕೊರತೆ, ಹಣದುಬ್ಬರ, ಗಗನಸದೃಶವಾಗಿದ್ದ ತೈಲ ಬೆಲೆ ಮುಂತಾದ ಸಮಸ್ಯೆಗಳನ್ನು ಬಿಟ್ಟರೆ 1991ಕ್ಕೆ ಪೂರ್ವದಲ್ಲಿ ಜಿಡಿಪಿಯ ಬೆಳವಣಿಗೆ ಪ್ರಮಾಣ (ಶೇ5) ಉತ್ತಮವಾಗೇ ಇತ್ತು. ನಿಜ, ಹೊಸ ಆರ್ಥಿಕ ನೀತಿಯು ಭಾರತದ ವರಮಾನದಲ್ಲಿ ತೀವ್ರ ಏರಿಕೆಯನ್ನು ತಂದಿದೆ. ಆದರೆ ಹೊಸ ಆರ್ಥಿಕ ನೀತಿಯ ದುಷ್ಪರಿಣಾಮಗಳು ಬಡವರ, ಅಂಚಿನಲ್ಲಿರುವವರ, ದುಡಿಮೆಗಾರರ ಬದುಕನ್ನು ದುಸ್ಥಿತಿಗೆ ತಳ್ಳಿ ಜರ್ಜರಗೊಳಿಸಿ ಬಿಟ್ಟಿವೆ. ಯಾರಿಗಾಗಿ ಅಭಿವೃದ್ಧಿ ಎಂಬ ಪ್ರಶ್ನೆಯನ್ನು ಉದಾರೀಕರಣವು ಅಪ್ರಸ್ತುತವನ್ನಾಗಿಸಿದೆ. ಉಳ್ಳವರಿಗಾಗಿಯೇ ಅಭಿವೃದ್ಧಿ ಅನ್ನುವಷ್ಟರ ಮಟ್ಟಿಗೆ ಪ್ರತಿಷ್ಠಿತರ ಪ್ರತಿಷ್ಠೆ ಬೆಳೆದಿದೆ.

ಇಂದು ಮತ್ತೆ 'ಯಾರಿಗಾಗಿ ಅಭಿವೃದ್ಧಿ' ಅನ್ನುವ ಪ್ರಶ್ನೆಯು ಮುಂಚೂಣಿಗೆ ಬರುತ್ತಿದೆ. ಇಂದು ಸಮಾಜವಾದದ ಬಗ್ಗೆ, ಸಮಾನತೆಯ ಬಗ್ಗೆ, ಸಾಮಾಜಿಕ ನ್ಯಾಯದ ಬಗ್ಗೆ ಸೂಕ್ಷ್ಮವಾದ ಮರುಚಿಂತನೆ ಜಾಗತಿಕವಾಗಿ ಆರಂಭವಾಗಿದೆ. ಥಾಮಸ್ ಪಿಕೆಟ್ಟಿ, ಜೋಸೆಫ್ ಸ್ಟಿಗ್‌ಲಿಡ್ಜ್, ಪಾಲ್ ಕೃಗ್‌ಮನ್, ಪ್ರಭಾತ್ ಪಟ್ನಾಯಿಕ್ ಮುಂತಾದವರು ಅಭಿವೃದ್ಧಿಯಲ್ಲಿ ಸಮಾನತೆಯ ಮಹತ್ವವನ್ನು ಒತ್ತಿ ಹೇಳುತ್ತಿದ್ದಾರೆ. ಥಾಮಸ್ ಪಿಕೆಟ್ಟಿಯ ಅಭಿಜಾತ ಕೃತಿ 'ಕಾಪಿಟಲ್ ಇನ್ ದಿ ಟ್ವಂಟಿಫಸ್ಟ್ ಸೆಂಚುರಿ' (2013) ಯು 'ಯಾರಿಗಾಗಿ ಅಭಿವೃದ್ಧಿ' ಎಂಬ ಪ್ರಶ್ನೆಯ ಬಗ್ಗೆ ತೀವ್ರ ಚರ್ಚೆಯನ್ನು ಹುಟ್ಟು ಹಾಕಿದೆ. ಈ ಕೃತಿಯು ಪ್ರತಿಪಾದಿಸುತ್ತಿರುವ ವಿಕೃತಿಯು ಭಾರತೀಯ ಆರ್ಥಿಕತೆಯಲ್ಲಿ ಇಂದು ಸಂಭವಿಸುತ್ತಿದೆ. ಉದ್ದಿಮೆಗಳ ಲಾಭದ ಪ್ರಮಾಣದಲ್ಲಿ ತೀವ್ರ ಏರಿಕೆ–ಯಾಗುತ್ತಿದೆ. ಮುಂಬಯಿ ಸ್ಟಾಕ್ ಎಕ್ಸಚೇಂಜ್‌ನ ಸೆನ್ಸೆಕ್ಸ್ ಸೂಚ್ಯಂಕ 25000 ದಾಟಿದೆ. ಬಂಡವಾಳ ಹೂಡಿಕೆ ಹೆಚ್ಚಿನ ಪ್ರಮಾಣದಲ್ಲಿ ನಡೆದಿದೆ. ಶತಕೋಟ್ಯಾಧೀಶರ ಸಂಖ್ಯೆ ನೂರರ ಗಡಿ ದಾಟಿ ಮುನ್ನಡೆಯುತ್ತಿದೆ. ಉದ್ದಿಮೆಗಾರರ ಸಭೆ ನಡೆಸಿ ಪ್ರಧಾನಮಂತ್ರಿ ಅವರಿಗೆ ರಕ್ಷಣೆಯ ಭರವಸೆ ನೀಡುತ್ತಿದ್ದಾರೆ (ಸೆಪ್ಟೆಂಬರ್ 8, 2015). ಆದರೆ ರೈತಾಪಿ ವರ್ಗ ಸಹಿಲಸದಳವಾದ ನೋವನ್ನು, ಸಂಕಷ್ಟವನ್ನು, ಕ್ಷಾಮವನ್ನು ಅನುಭವಿಸುತ್ತಿದೆ. ಬೆಳೆಯು ಕೈಗೆ ಬಾರದೆ, ಸಾಲಗಾರರ ಒತ್ತಡ ಸಹಿಸಲಾರದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಾರ್ಮಿಕ ಕಾನೂನುಗಳು ದುಡಿಮೆಗಾರರ ಪರವಾಗಿವೆ ಎಂಬ ಉದ್ದಿಮೆಗಾರರ ವಾದವನ್ನು ಮನ್ನಿಸಿ ಸರ್ಕಾರ ಉದ್ದಿಮೆದಾರರಿಗೆ ಅನುಕೂಲವಾಗುವಂತೆ ಕಾರ್ಮಿಕ ಕಾನೂನುಗಳನ್ನು ಬದಲಾಯಿಸುತ್ತಿದೆ. ದಿನಕ್ಕೆ ಎಂಟು ಗಂಟೆ ದುಡಿಮೆ, ವಾರಕ್ಕೊಂದು ರಜೆ, ಸಾಮಾಜಿಕ ಭದ್ರತೆ, ಉದ್ದಿಮೆಗಳ ನಿರ್ಗಮನಕ್ಕೆ ನಿರ್ಬಂಧನ, ಸಬ್ಸಿಡಿಯಲ್ಲಿ ಕ್ಯಾಟೀನ್ ಮುಂತಾದ ಶ್ರಮ ಸಂಸ್ಕೃತಿ ಪರವಾದ ಶಾಸನಗಳು ಇತಿಹಾಸದ ಪುಟಗಳನ್ನು ಸೇರುತ್ತಿವೆ. ಉತ್ಪಾದನಾ ವಲಯವನ್ನು ಉದ್ದಿಮೆಗಳು ಪ್ರವೇಶಿಸಬಹುದು. ಆದರೆ ಅವು ಅಲ್ಲಿಂದ ನಿರ್ಗಮಿಸಲಿಕ್ಕೆ ಅನೇಕ ಶಾಸನಾತ್ಮಕ ತಡೆಯನ್ನು ಬಹಳ ಹಿಂದಿನಿಂದಲೂ ಹೇರಲಾಗಿತ್ತು. ಈ ಸ್ಥಿತಿಯನ್ನು ಹಣಕಾಸು ಮಂತ್ರಾಲಯದ ಸಲಹೆಗಾರರು ಮಹಾಭಾರತದ 'ಚಕ್ರವ್ಯೂಹ' ಎಂಬ ಪ್ರತೀಕದ ಮೂಲಕ ವರ್ಣಿಸಿದ್ದಾರೆ. ಉದ್ದಿಮೆಗಾರರಿಗೆ ನಿರ್ಗಮನಕ್ಕೆ ಅವಕಾಶ ನೀಡುವ ಬಗ್ಗೆ ಸರ್ಕಾರ ತೀವ್ರ ಚಿಂತನೆ ನಡೆಸಿದೆ. ಆದರೆ ಒಂದು ವೇಳೆ ಉದ್ದಿಮೆಗಳು ಉತ್ಪಾದನಾ ಕ್ಷೇತ್ರದಿಂದ ನಿರ್ಗಮಿಸಿದರೆ ಅಲ್ಲಿನ ಕಾರ್ಮಿಕರ ಗತಿ ಏನಾಗಬೇಕು ಎಂಬುದ ಬಗ್ಗೆ ಆಳುವ ವರ್ಗ ಮಾತನಾಡುತ್ತಿಲ್ಲ. ದುಡಿಮೆಗಾರರ ಸಂದರ್ಭದಲ್ಲಿ ಸಾಮಾಜಿಕ ಭದ್ರತೆ–ಕಾರ್ಮಿಕ ಕಲ್ಯಾಣ ಅನ್ನುವುದೇ ಇಂದು ತಿರಸ್ಕಾರದ ಸಂಗತಿಯಾಗಿದೆ.

ಅಸಮಾನತೆ – ಪಿಕೆಟ್ಟಿ ಪ್ರಣಾಳಿಕೆ

ಥಾಮಸ್ ಪಿಕೆಟ್ಟ್ ಪ್ರತಿಪಾದಿಸುತ್ತಿರುವ ಪ್ರಣಾಳಿಕೆ ಸರಳವಾಗಿದೆ. 'ಎಲ್ಲಿ ಬಂಡವಾಳ ಹೂಡಿಕೆಯ ಮೇಲಿನ ಪ್ರತಿಫಲದ ಪ್ರಮಾಣವು ಆರ್ಥಿಕತೆಯ ವರಮಾನದ ಏರಿಕೆಯ ಪ್ರಮಾಣಕ್ಕಿಂತ ಅಧಿಕವಾಗಿರುತ್ತದೋ ಅಲ್ಲಿ ಅಸಮಾನತೆ ಉಲ್ಬಣಗೊಳ್ಳುತ್ತದೆ' ಎಂಬುದು ಪಿಕೆಟ್ಟಿಯ ಪ್ರಮೇಯವಾಗಿದೆ. ಈ ಪ್ರಕ್ರಿಯೆಯು ಭಾರತದಲ್ಲಿ ಇಂದು ನಡೆಯುತ್ತಿದೆ. ವರ್ಷದಿಂದ ವರ್ಷಕ್ಕೆ ಶತಕೋಟ್ಯಾಧೀಶರುಗಳ ಸಂಖ್ಯೆ ಅಧಿಕವಾಗುತ್ತಿದೆ. ರಾಷ್ಟ್ರದ ಜಿಡಿಪಿಯಲ್ಲಿ ಸೇವಾ ವಲಯದ ಪ್ರಮಾಣ ಶೇ. 60 ದಾಟುತ್ತಿದೆ. ಕೃಷಿ ಮತ್ತು ಉದ್ದಿಮೆಗಳ ಕಾಣಿಕೆ ಕಡಿಮೆಯಾಗುತ್ತಿದೆ. ಬಂಡವಾಳ ಹೂಡಿಕೆಯಲ್ಲಿಯೂ ಏರಿಕೆಯಾಗುತ್ತಿದೆ. ಮಳೆ ಬರಲಿ–ಬಿಡಲಿ, ಬೆಳೆ ಬೆಳೆಯಲಿ–ಬಿಡಲಿ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿ/ಮಾಡಿಕೊಳ್ಳದಿರಲಿ –– ಬಂಡವಾಳಿಗರ ಲಾಭ ಊರ್ಧ್ವಮುಖಿಯಾಗಿ ಬೆಳೆಯುತ್ತಿರುತ್ತದೆ. ಇದು ಅಸಮಾನತೆಯ ಸೂಚಿ. ನಮ್ಮ ಸಂದರ್ಭದಲ್ಲಿ ಅಸಮಾನತೆ ಅನ್ನುವುದು ಉಳಿದ ದೇಶಗಳಲ್ಲಿದ್ದಂತೆ ಸರಳವಾದುದಲ್ಲ. ಮೂಲತಃ ಅಸಮಾನತೆಯ ಸಮಾಜ ನಮ್ಮದು. ಇಲ್ಲಿ ಬಂಡವಾಳಿಗರ ಉತ್ಪಾದನೆ ಮತ್ತು ಅದ–ಕ್ಕೆ ಸಂಬಂಧಿಸಿದ ಪ್ರತಿಫಲ ಅಧಿಕವಾಗಿದ್ದರೆ ಅಲ್ಲಿನ ಅಸಮಾನತೆ ಅಳತೆಗೆ ಮೀರಿದ್ದಾಗಿ ಬಿಡುತ್ತದೆ. ಈ ಬಗೆಯ ಅಸಮಾನತೆಗೆ ಸರ್ಕಾರದ ನೀತಿಗಳು ಪೋಷಕವಾಗಿದ್ದರೆ ಅಲ್ಲಿ ಬಡವರಿಗೆ, ಬಡ ರೈತಾಪಿ ವರ್ಗಕ್ಕೆ, ಕಾರ್ಮಿಕರಿಗೆ ಆತ್ಮಹತ್ಯೆ ಮಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ. ಇದನ್ನು ಬದಲಿಸಬೇಕಾಗಿದೆ. ಮತ್ತೊಮ್ಮೆ ನಾವು ಸಮಾಜವಾದ ಅನ್ನುವ ನುಡಿಯನ್ನು ಬಳಸದಿದ್ದರೂ ಅದರ ಸತ್ವದ ಬಗ್ಗೆ ಗಟ್ಟಿಯಾಗಿ ಮಾತನಾಡಬೇಕಾಗಿದೆ. ಪಿಕೆಟ್ಟಿ, ಸ್ಟಿಗ್‌ಲಿಡ್ಜ್, ಕೃಗ್‌ಮನ್, ಪಟ್ನಾಯಿಕ್ ಅವರುಗಳ ಸಂದೇಶ ಇದಾಗಿದೆ.

'ಉತ್ಪಾದನೆ ಮೊದಲು : ನಂತರ ವಿತರಣೆ' ಅನ್ನುವ ಪ್ರಣಾಳಿಕೆಯು ದುಡಿಮೆಗಾರರಿಗೆ, ಬಡವರಿಗೆ, ವಂಚಿತರಿಗೆ ಮೃತ್ಯುಪಾಶವಾಗಿಬಿಟ್ಟಿದೆ. ಥಾಮಸ್ ಪಿಕೆಟ್ಟಿಯ ಪ್ರಕಾರ ಇವೆರಡೂ ಏಕಕಾಲದಲ್ಲಿ ನಡೆಯಬೇಕು. ಉತ್ಪಾದನೆಯಾದ ಮೌಲ್ಯದಲ್ಲಿ ಬಂಡವಾಳಿಗರಿಗೆ ಹೇಗೆ ಪಾಲು ದೊರೆಯುತ್ತದೋ ಅದೇ ರೀತಿಯಲ್ಲಿ ದುಡಿಮೆಗಾರರಿಗೂ ಪಾಲು ದೊರೆಯಬೇಕು. ಮೊದಲು ಬಂಡವಾಳಿಗರಿಗೆ ಮತ್ತು ತದನಂತರ ದುಡಿಮೆಗಾರರಿಗೆ ಅನ್ನುವುದು ಅಸಮಾನತೆಗೆ ದಾರಿ ಮಾಡಿಕೊಟ್ಟಂತೆ. ಥಾಮಸ್ ಪಿಕೆಟ್ಟಿ ಅವರು ಪ್ರಸಿದ್ಧ ತತ್ವಶಾಸ್ತ್ರಜ್ಞ ಜಾನ್ ರಾಲ್ಸ್‌ನ ಸಾಮಾಜಿಕ ನ್ಯಾಯ ಸಿದ್ಧಾಂತದ ವಾರಸುದಾರರಂತೆ ಸಮಾನತೆ ಮೌಲ್ಯದ ಬಗ್ಗೆ ವಾದ ಮಂಡಿಸುತ್ತಿದ್ದಾರೆ. ಜಾಗತಿಕವಾಗಿ ಅವರ ಕೃತಿಯು ತೀವ್ರ ಚರ್ಚೆಗೆ ವೇದಿಕೆವೊದಗಿಸಿದೆ. ಉದಾರವಾದ, ಖಾಸಗೀಕರಣ, ಮಾರ್ಕೆಟ್ಟೀಕರಣಗಳ ಕಾಲ ಮುಗಿಯಲಿಕ್ಕೆ ಬಂದಿದೆ. ಈ ನೀತಿಯನ್ನು ವಿಕೃತಗೊಳಿಸಿ ಇಂದಿನ ಸರ್ಕಾರವು ಭಾರತದಲ್ಲಿ ಸನಾತನ ಅಸಮಾನತೆಯ ಸಮಾಜವನ್ನು ನಿರ್ಮಿಸುವ ದಾರಿಯಲ್ಲಿ ನಡೆದಿದೆ. ಈ ಸನಾತನ ಅಸಮಾನತೆಗೂ ಮತ್ತು ಬಂಡವಾಳಶಾಹಿ ಅಸಮಾನತೆಗೂ ವ್ಯತ್ಯಾಸವೇನಿಲ್ಲ. ಇಂದು ನಮ್ಮ ಆರ್ಥಿಕತೆಯಲ್ಲಿ ಎರಡೂ ಬಗೆ–ಯ ಅಸಮಾನತೆಗಳು ಕ್ರಿಯಾಶೀಲವಾಗಿವೆ. ಆದ್ದರಿಂದ ನಾವು ಇಂದು ದೊಡ್ಡ ಧ್ವನಿಯಲ್ಲಿ ಸಮಾನತೆ ಮೌಲ್ಯದ ಬಗ್ಗೆ ಮಾತನಾಡಬೇಕು. ರಾಷ್ಟ್ರೀಯತೆ, ದೇಶಪ್ರೇಮ, ಸನಾತನ ಮೌಲ್ಯಗಳು, ಸಂಸ್ಕೃತ, ಪರಂಪರೆ, ಶುದ್ಧತೆ–ಅಶುದ್ಧತೆಗಳ ಹೆಸರಿನಲ್ಲಿ ಅಸಮಾನತೆಯನ್ನು ಗಟ್ಟಿಗೊಳಿಸುವ, ಶ್ರೇಣೀಕರಣವನ್ನು ಅಧಿಕೃತಗೊಳಿಸುವ ಕೆಲಸ ನಡೆದಿದೆ. ಈ ವಿಚಾರಗಳನ್ನು ಪ್ರತಿಪಾದಿಸುವ ಜನರೆಲ್ಲ ಆಳು ವರ್ಗದ ಸಲಹೆಗಾರರಾಗಿ, ಸಮಾಲೋಚಕರಾಗಿ ಕೆಲಸ ಮಾಡುತ್ತಿದ್ದಾರೆ. ನಿಜ ಹೇಳಬೇಕೆಂದರೆ ಈ ಸನಾತನ ಅಸಮಾನತೆ ಮತ್ತು ಬಂಡವಾಳಶಾಯು ಅಸಮಾನತೆ ಪ್ರಣಾಳಿಕೆಯು ಇಂದು ತೀವ್ರ ಸಂಕ್ಷಷ್ಟ ಎದುರಿಸುತ್ತದೆ. ಇದನ್ನು ಸೋಲಿಸುವ ಜವಾಬುದಾರಿ ನಮ್ಮ ಮೇಲಿದೆ. •



ಕಾಶ್ಮೀರ : ನಾಗರಿಕರನ್ನು ಗುಂಡಿಕ್ಕಿ ಕೊಲ್ಲುವ ಭಂಡತನ

ಕಾಶ್ಮೀರ ಕಣಿವೆಯಲ್ಲಿನ ಹಂದ್ವಾರದಲ್ಲಿನ ಘಟನೆ ಈ ಕ್ಲೇಶ ತುಂಬಿದ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಾಡುತ್ತಿರುವ ಸಮಸ್ಯೆಗಳನ್ನು ಎದುರಿಸುವಲ್ಲಿ ರಾಜಕೀಯವಾಗಿ ಮತ್ತು ಆಡಳಿತಾತ್ಮಕವಾಗಿ ವಿಫಲರಾಗಿರುವುದನ್ನು ಮತ್ತೊಮ್ಮೆ ಎತ್ತಿ ತೋರಿದೆ. ಒಬ್ಬ ಸೈನಿಕ ಶಾಲಾ ಬಾಲಕಿಯೊಬ್ಬಳಿಗೆ ಕಿರುಕುಳ ನೀಡಿದನೆಂಬ ಸುದ್ದಿ ಆ ಪಟ್ಟಣದಲ್ಲಿದ್ದ ಸೇನಾ ಬಂಕರಿನ ಹೊರಗೆ ಪ್ರತಿಭಟನೆಗಳಿಗೆ ಕಾರಣವಾಯಿತು. ಭದ್ರತಾ ಪಡೆಗಳು ಇದರ ವಿರುದ್ಧ ಕಠಿಣವಾಗಿ ಪ್ರತಿಕ್ರಿಯಿಸಿದವು.

ಜನಜಂಗುಳಿಯ ಮೇಲೆ ಭದ್ರತಾ ಪಡೆಗಳು ನಡೆಸಿದ ಗೋಲೀಬಾರಿನಲ್ಲಿ ಆಗಲೇ ಮೂರು ವ್ಯಕ್ತಿಗಳು ಸಾವನ್ನಪ್ಪಿದರು. ಇವರಲ್ಲಿ ಒಬ್ಬ 19 ವರ್ಷದ ಉದಯೋನ್ಮುಖ ಕ್ರಿಕೆಟ್ ಆಟಗಾರ ಮತ್ತು ಒಬ್ಬಾಕೆ ಹಿರಿಯ ಮಹಿಳೆ. ಈ ಸಾವುಗಳಿಂದಾಗಿ ಹಂದ್ವಾರ ಪಟ್ಟಣವಿದ್ದ ಕುಪ್ವಾರ ಜಿಲ್ಲೆಯಾದ್ಯಂತ, ಮತ್ತು ಕಾಶ್ಮೀರ ಕಣಿವೆಯಾದ್ಯಂತವೂ ಪ್ರತಿಭಟನೆಗಳು ಭುಗಿಲೆದ್ದವು. ಜಿಲ್ಲೆಯಲ್ಲಿ ಇನ್ನೆರಡು ಸಾವುಗಳು ಸಂಭವಿಸಿದವು. ದ್ರುಗ್‌ಮುಲ್ಲಾದಲ್ಲಿ 18 ವರ್ಷದ ವಿದ್ಯಾರ್ಥಿ ನಥ್ನುಸ ಪ್ರದೇಶದ ಸೇನಾ ಶಿಬಿರದ ಹೊರಗೆ ಕೊಲ್ಲಲ್ಪಟ್ಟ. ಪ್ರತಿಭಟನೆಗಳು ತೀವ್ರಗೊಂಡು ಹಲವು ಸ್ಥಳಗಳಲ್ಲಿ ಕರ್ಫ್ಯೂ ಹೇರಲ್ಪಟ್ಟಿತು, ಕಾಶ್ಮೀರ ಕಣಿವೆಯಲ್ಲಿ ಮೊಬೈಲ್ ಮತ್ತು ಇಂಟರ್ನೆಟ್ ಸೇವೆಗಳನ್ನು ಅಮಾನತು ಗೊಳಿಸಲಾಯಿತು.

ಕಿರುಕುಳಕ್ಕೊಳಗಾದ ಬಾಲಕಿ ನ್ಯಾಯಾಂಗ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾದಳು, ಮತ್ತು ಇದರಲ್ಲಿ ಸೈನಿಕನಾರೂ ಇರಲಿಲ್ಲ, ತನ್ನನ್ನು ಬೆನ್ನಟ್ಟಿ ಬಂದವರು ಇಬ್ಬರು ಸ್ಥಳೀಯ ಯುವಕರು ಎಂದು ಒಂದು ಹೇಳಿಕೆ ನೀಡಿದಳು. ಆದರೆ, ಈ ಹೇಳಿಕೆಯನ್ನು ಜನ ನಂಬುತ್ತಿಲ್ಲ, ಏಕೆಂದರೆ ಆಕೆ ಮತ್ತು ಆಕೆಯ ತಂದೆಯನ್ನು ಎರಡು ದಿನಗಳ ಕಾಲ ಪೋಲೀಸ್ ಕಸ್ಟಡಿಯಲ್ಲಿಡಲಾಗಿತ್ತು, ಹೈಕೋರ್ಟ್ ಆದೇಶದ ನಂತರ ಆಕೆಯನ್ನು ಪೋಲೀಸರು ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಪಡಿಸಿದ್ದರು.

ಐದು ನಾಗರಿಕರನ್ನು, ಮುಖ್ಯವಾಗಿ ಯುವಕರನ್ನು ಗುಂಡಿಕ್ಕಿ ಕೊಂದಿರುವುದು ಸೇನೆಯವರಾಗಲೀ, ಪೋಲೀಸರಾಗಲೀ 2010ರ ಘಟನೆಗಳಿಂದ ಯಾವ ಪಾಟವನ್ನೂ ಕಲಿತಿಲ್ಲ ಎಂಬುದನ್ನು ತೋರಿಸುತ್ತದೆ. ಅಂದು ಸೇನಾಪಡೆ ಒಂದು ಎನ್‌ಕೌಂಟರ್ ನಂತರ ಮೂವರು ಅಮಾಯಕ ಜನರನ್ನು ಕೊಂದಿತ್ತು. ಇದಕ್ಕೆ ಯುವಜನತೆ ಬೃಹತ್ ಸ್ವರೂಪದ ಪ್ರತಿಭಟನೆ ವ್ಯಕ್ತಪಡಿಸಿದರು. ನಾಲ್ಕು ತಿಂಗಳ ಅವಧಿಯಲ್ಲಿ ಕಲ್ಲು ತೂರುತ್ತಿದ್ದ ಯುವಜನರನ್ನು ಎದುರಿಸುವಲ್ಲಿ ಭದ್ರತಾ ಪಡೆಗಳು 118 ಯುವಕರನ್ನು ಗುಂಡಿಕ್ಕಿ ಕೊಂದವು.

ಕಾಶ್ಮೀರ ಕಣಿವೆಯಲ್ಲಿ ಭದ್ರತಾ ಪಡೆಗಳನ್ನು ದಮನಕಾರೀ ಪಡೆಗಳು ಎಂದು ಕಾಣಲಾಗುತ್ತಿದ್ದು, ಮಾನವ ಹಕ್ಕುಗಳ ಉಲ್ಲಂಘನೆಗಳು ಮತ್ತು ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ದಮನದ ವಿರುದ್ಧ ತೀವ್ರ ಆಕ್ರೋಶ ಆಗಾಗ ಭುಗಿಲೇಳುತ್ತಿರುತ್ತದೆ. ಭಾರತದ ಇತರ ಭಾಗಗಳಲ್ಲಿ ತಮ್ಮ ಕೈಮೀರಿ ಹೋಗುವ ಪ್ರತಿಭಟನೆಗಳನ್ನು ಪೋಲೀಸರು ಲಾಠೀ ಪ್ರಹಾರ, ಅಶ್ರುವಾಯು ಮತ್ತು ಜಲಪ್ರಹಾರಗಳ ಮೂಲಕ ಎದುರಿಸುತ್ತಾರೆ. ಆದರೆ ಕಾಶ್ಮೀರದಲ್ಲಿ ನಾಗರಿಕರ ಪ್ರತಿಭಟನೆಗಳನ್ನು, ಉಗ್ರಗಾಮಿಗಳನ್ನು ಮತ್ತು ಭಯೋತ್ಪಾದಕ ಹಿಂಸಾಚಾರವನ್ನು ಎದುರಿಸುವ ರೀತಿಯಲ್ಲೇ ನಿಭಾಯಿಸುವುದು ಭದ್ರತಾ ಪಡೆಗಳಿಗೆ ಒಗ್ಗಿ ಹೋಗಿದೆ.

ಭದ್ರತಾ ಪಡೆಗಳು ಯಾವುದೇ ದಂಡನೆಯ ಭಯವಿಲ್ಲದೆ ಜನತೆಯೊಡನೆ ವರ್ತಿಸುತ್ತಿರುವುದು ಭಾರತೀಯ ಪ್ರಭುತ್ವದ ಬಗ್ಗೆ ಜನತೆಯಲ್ಲಿ ಪರಕೀಯ ಭಾವನೆ ಬೇಳೆಯಲು ಒಂದು ಮುಖ್ಯ ಕಾರಣವಾಗಿದೆ. ಒಂದು ವಿಶ್ವಾಸಾರ್ಹ ತನಿಖೆ ನಡೆಸಿ ಗೋಲೀಬಾರು ಮತ್ತು ಸಾಯಿಸುವುದಕ್ಕೆ ಹೊಣೆಯಾದವರನ್ನು ಬಂಧಿಸಿ ಶಿಕ್ಷೆಗೊಳಪಡಿಸಿದರೆ ಮಾತ್ರವೇ ಜನಗಳ ಸಿಟ್ಟನ್ನು ಸ್ವಲ್ಪ ಮಟ್ಟಿಗೆ ಶಮನ ಮಾಡಲು, ಪರಕೀಯ ಭಾವವನ್ನು ಹೋಗ ಲಾಡಿಸಲು ಸಾಧ್ಯ. ಮೆಹಬೂಬ ಮುಫ್ತಿ ಯವರ ನೇತೃತ್ವದ ಪಿಡಿಪಿ–ಬಿಜೆಪಿ ಸರಕಾರ ಹೇಗೆ ಹಂದ್ವಾರ ಘಟನೆ ಮತ್ತು ನಂತರದ ಬೆಳವಣಿಗೆಗಳನ್ನು ನಿರ್ವಹಿಸುತ್ತದೆ ಎಂಬುದು ಹೊಸ ಸರಕಾರದ ಮೊದಲ ಪ್ರಮುಖ ಪರೀಕ್ಷೆಯಾಗಲಿದೆ.

ಕಣಿವೆಯಲ್ಲಿನ ಕ್ಷೋಭೆಯ ಕೆಲವು ದಿನಗಳ ನಂತರ ಜಮ್ಮುವಿಗೆ ಭೇಟಿ ನೀಡಿದ ಪ್ರಧಾನ ಮಂತ್ರಿಗಳು ವಾಜಪೇಯಿಯವರ ಇಂಸಾನಿಯತ್(ಮಾನವೀಯತೆ), ಜಮ್ಹೂರಿಯತ್(ಪ್ರಜಾಪ್ರಭುತ್ವ) ಮತ್ತು ಕಶ್ಮೀರಿಯತ್(ಕಾಶ್ಮೀರತನ) ಘೋಷಣೆಗಳನ್ನು ಉಚ್ಚರಿಸಿ ಇದು ಸರಕಾರದ ಹಾದಿ ಎಂದು ಜಮ್ಮು ಮತ್ತು ಕಾಶ್ಮೀರದ ಜನತೆಗೆ ಭರವಸೆ ನೀಡಿದ್ದಾರೆ. ಆದರೆ ಹಂದ್ವಾರ ಘಟನೆಯ ನಂತರ ಅಸಂತೃಪ್ತಿಯನ್ನು ಕೇಂದ್ರ ನಿರ್ವಹಿಸಿದ ರೀತಿ ಅಂತಹ ವಿಶ್ವಾಸವನ್ನೇನೂ ಮೂಡಿಸುವುದಿಲ್ಲ. ಕಾಶ್ಮೀರಕ್ಕೆ ಇನ್ನಷ್ಟು ಸೇನಾಪಡೆಗಳನ್ನು, ಅರೆಸೈನಿಕ ಪಡೆಗಳನ್ನು ಕಳುಹಿಸುವುದೇ ಅದಕ್ಕೆ ತೋಚಿದ ಮೊದಲ ಪ್ರತಿಕ್ರಿಯೆ. ಇದು ಮಾನವೀಯತೆ ಮತ್ತು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳು ಇವೆರಡಕ್ಕೂ ತದ್ವಿರುದ್ಧವಾದದ್ದು. ಜಮ್ಮು ಮತ್ತು ಕಾಶ್ಮೀರದಲ್ಲಿ ಈಗಾಗಲೇ ಆರು ಲಕ್ಷ ಸೇನಾ ಮತ್ತು ಅರೆ ಸೇನಾ ಪಡೆಗಳನ್ನು ನಿಲ್ಲಿಸಲಾಗಿದೆ. ಈಗ ನಾಗರಿಕ ಜನತೆಯನ್ನು ದಮನ ಮಾಡುವ ಭದ್ರತಾ ರಚನೆಗಳನ್ನು ಕಳಚಿ ಹಾಕುವುದೇ ಮಾಡಬೇಕಾಗಿರುವ ಕೆಲಸ.

ಸೇನಾಪಡೆ ಯಾವುದೇ ದಂಡನೆಯ ಭಯವಿಲ್ಲದೆ ಕಾರ್ಯಾಚರಣೆ ನಡೆಸಲು ಅನುವು ಮಾಡಿಕೊಡುವ ಸೇನಾ ಪಡೆಗಳ(ವಿಶೇಷ ಅಧಿಕಾರಗಳು) ಕಾಯ್ದೆ (ಎಎಫ್‌ಎಸ್‌ಪಿಎ)ಯನ್ನು ಹಿಂತೆಗೆದು ಕೊಳ್ಳಬೇಕಾಗಿದೆ. ರಾಜ್ಯದ ಗಡಿ ಪ್ರದೇಶಗಳಲ್ಲಿ ಬಿಟ್ಟು ಬೇರೆ ಹೆಚ್ಚಿನ ಕಡೆಗಳಲ್ಲಿ ಅದನ್ನು ತೆಗೆದು ಹಾಕುವುದರೊಂದಿಗೆ ಆರಂಭಿಸಬಹುದು. ಯುಪಿಎ ಸರಕಾರದ ಆಳ್ವಿಕೆಯಲ್ಲಿ ಈ ಪ್ರಸ್ತಾವವನ್ನು ಪರಿಶೀಲಿಸಲಾಯಿತು, ನಂತರ ಕೈಬಿಡಲಾಯಿತು. ಮೋದಿ ಸರಕಾರ ಜಮ್ಮು ಮತ್ತು ಕಾಶ್ಮೀರದ ಎಲ್ಲ ಛಾಯೆಗಳ ಸಕಲ ರಾಜಕೀಯ ಶಕ್ತಿಗಳೊಂದಿಗೆ ಸಂವಾದದ ಪ್ರಕ್ರಿಯೆಯನ್ನು ಪುನರುಜ್ಜೀವನಗೊಳಿಸಬೇಕು. ಈ ಬಗ್ಗೆ ಬಿಜೆಪಿಗೆ ರಕ್ತಗತವಾದ ವೈಷಮ್ಯ ಇದೆ. ಆದರೆ ರಾಜ್ಯದಲ್ಲಿ ಅದು ಮೈತ್ರಿ ಸರಕಾರದಲ್ಲಿ ಇರುವುದರಿಂದ ಈ ಪ್ರಕ್ರಿಯೆಯನ್ನು ಅದು ತಿರಸ್ಕರಿಸುವಂತಿಲ್ಲ. ●

> ಕಾಶ್ಮೀರದಲ್ಲಿ ನಾಗರಿಕರ ಪ್ರತಿಭಟನೆಗಳನ್ನು, ಉಗ್ರಗಾಮಿಗಳನ್ನು ಮತ್ತು ಭಯೋತ್ಪಾದಕ ಹಿಂಸಾಚಾರವನ್ನು ಎದುರಿಸುವ ರೀತಿಯಲ್ಲೇ ನಿಭಾಯಿಸುವುದು ಭದ್ರತಾ ಪಡೆಗಳಿಗೆ ಒಗ್ಗಿ ಹೋಗಿದೆ. ಭದ್ರತಾ ಪಡೆಗಳು ಯಾವುದೇ ದಂಡನೆಯ ಭಯವಿಲ್ಲದೆ ಜನತೆಯೊಡನೆ ವರ್ತಿಸುತ್ತಿರುವುದು ಭಾರತೀಯ ಪ್ರಭುತ್ವದ ಬಗ್ಗೆ ಕಾಶ್ಮೀರಿ ಜನತೆಯಲ್ಲಿ ಪರಕೀಯ ಭಾವನೆ ಬೇಳೆಯಲು ಒಂದು ಮುಖ್ಯ ಕಾರಣವಾಗಿದೆ.ಅವು ಯಾವುದೇ ದಂಡನೆಯ ಭಯವಿಲ್ಲದೆ ಕಾರ್ಯಾಚರಣೆ ನಡೆಸಲು ಅನುವು ಮಾಡಿಕೊಡುವ ಕಾಯ್ದೆ ಎಎಫ್‌ಎಸ್‌ಪಿಎಯನ್ನು ಹಿಂತೆಗೆದು ಕೊಳ್ಳಬೇಕಾಗಿದೆ.



ಪ್ರಕಾಶ ಕಾರಟ್

ಜಾರ್ಖಂಡ್–ಕೋಮುವಾದದ ಕುಲುಮೆ

ಜಾರ್ಖಂಡ್‌ನಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯವು ಒಂದು ಕೋಮುವಾದೀ ಕುಲುಮೆಯಾಗಿ ಪರಿವರ್ತನೆಯಾಗುತ್ತಿದೆ. ರಘುಬರ್ ದಾಸ್ ಸರಕಾರದ ಈ 15 ತಿಂಗಳ ಅವಧಿಯಲ್ಲಿ ಧಾರ್ಮಿಕ ಮೆರವಣಿಗೆಗಳು ಮತ್ತು ಕಾರ್ಯಕ್ರಮಗಳನ್ನು ಕೋಮು ಉದ್ವಿಗ್ನತೆ ಹಬ್ಬಿಸಿ ಹಿಂಸಾಚಾರ ನಡೆಸಲು ಬಳಸಿಕೊಳ್ಳಲಾಗುತ್ತಿದೆ. ಬೊಕಾರೊ ಮತ್ತು ಹಜಾರಿಬಾಗ್‌ನಲ್ಲಿ ರಾಮನವಮಿ ಮೆರವಣಿಗೆಗಳ ಸಂದರ್ಭದಲ್ಲಿ ನಡೆದ ಘಟನೆಗಳು ಇದಕ್ಕೆ ತಾಜಾ ಉದಾಹರಣೆಗಳಾಗಿವೆ.

ಬೊಕಾರೊದಲ್ಲಿ, ಅನುಮತಿ ಇಲ್ಲದಿದ್ದರೂ ಮೆರವಣಿಗೆ ಒಂದು ಮುಸ್ಲಿಂ ಪ್ರದೇಶವನ್ನು ಪ್ರವೇಶಿಸಿತು. ಈ ಸಂದರ್ಭದಲ್ಲಿ ಮುಸ್ಲಿಮರನ್ನು ಅವಹೇಳನ ಮಾಡುವ ಆಕ್ಷೇಪಕಾರಿ ಹಾಡೊಂದನ್ನು ಧ್ವನಿವರ್ಧಕದಲ್ಲಿ ಪ್ರಸಾರ ಮಾಡಲಾಯಿತು. ಹಿಂಸೆಯನ್ನು ಪ್ರಚೋದಿಸುವುದು ಅದರ ಉದ್ದೇಶವಾಗಿತ್ತು. ಹಾಗೆ ನಡೆದ ಘರ್ಷಣೆಯಲ್ಲಿ ಅನೇಕ ಜನರು ಗಾಯಗೊಂಡರು. ಕೆಲವು ಮನೆಗಳಿಗೆ ಕೊಳ್ಳಿಯಿಡಲಾಯಿತು. ಬೊಕಾರೊದಲ್ಲಿ ಕರ್ಫ್ಯೂ ಹೇರಲಾಯಿತು.

ಹಜಾರಿಬಾಗ್ ಜಿಲ್ಲೆಯಲ್ಲಿ ಎರಡು ಘಟನೆಗಳು ನಡೆದವು. ಕೇರಾದಾರಿ ಎಂಬಲ್ಲಿ ರಾಮನವಮಿ ಮೆರವಣಿಗೆ ಮುಸ್ಲಿಂ ಪ್ರದೇಶವೊಂದನ್ನು ಹಾದು ಹೋಗುತ್ತಿದ್ದಾಗ ದಾಳಿ ನಡೆದು 55 ವರ್ಷದ ಪುರುಷನೊಬ್ಬ ಮೃತಪಟ್ಟ. ಆ ಪ್ರದೇಶ ದಿಂದ ಓಡಿಹೋಗಲು ಪ್ರಯತ್ನಿಸಿದ ಯುವಕ ನೊಬ್ಬನ್ನು ಹಿಡಿದು ಅವನ ಎರಡೂ ಕೈಗಳನ್ನು ಕತ್ತರಿಸಲಾಯಿತು. ಎರಡು ದಿನಗಳ ನಂತರ ರೆವಾಲಿ ಎಂಬಲ್ಲಿ 19 ವರ್ಷದ ಯುವಕನೊಬ್ಬನ ಶವ ದೊರಕಿತು.

ಹಜಾರಿಬಾಗ್ ಪಟ್ಟಣದಲ್ಲಿ, ಎಪ್ರಿಲ್ 17ರಂದು ರಾಮನವಮಿ ಮೆರವಣಿಗೆ ವೇಳೆ ಸುಮಾರು 30 ಅಂಗಡಿಗಳಿಗೆ ಬೆಂಕಿಯಿಡಲಾಯಿತು. ಕಲ್ಲು ತೂರಾಟದಲ್ಲಿ ನೂರಾರು ಜನರು ಗಾಯಗೊಂಡರು. ಇಲ್ಲಿ ಕೂಡ ಕರ್ಫ್ಯೂ ಜಾರಿ ಮಾಡಲಾಯಿತು.



ಧಾರ್ಮಿಕ ಮೆರವಣಿಗೆಗಳ ವೇಳೆ ಕೋಮು ಘರ್ಷಣೆ ಮತ್ತು ಹಿಂಸಾಚಾರ ನಡೆಯುವ ವಿಧಾನಕ್ಕೆ ಹಜಾರಿಬಾಗ್ ಜಿಲ್ಲೆಯಲ್ಲಿ 2015ರ ಅಕ್ಟೋಬರ್‌ನಲ್ಲಿ ಮೊಹರಮ್ ಮೆರವಣಿಗೆ ವೇಳೆ ನಡೆದ ಹಿಂಸಾಚಾರ ಈ ಹಿಂದಿನ ಸಾಕ್ಷಿ. ಆಗ ಪೊಲಿಸ್ ಗೋಲೀಬಾರ್‌ನಲ್ಲಿ ಒಬ್ಬ ಮೃತಪಟ್ಟಿದ್ದ. ಜಮ್ಷೆಡ್‌ಪುರದ ಛಾತ್ರಾ ಮತ್ತು ಗಿರಿಧ್‌ನಲ್ಲಿ ಕಳೆದ ವರ್ಷ ಈದ್ ಮೇಳ ಮತ್ತು ರಾಮನವಮಿ ಮೆರವಣಿಗೆಗಳ ವೇಳೆಯೂ ಹಿಂಸಾಚಾರ ನಡೆದಿತ್ತು. ಮನಬಂದಂತೆ ಕೋಮು ಹಿಂಸಾಚಾರ ಉದ್ರೇಕಿಸಲು ಅಲ್ಲಿನ ಆಡಳಿತವು ಆಕ್ರಮಣಕಾರೀ ಹಿಂದುತ್ವವಾದಿ ಸಂಘಟನೆಗಳಿಗೆ ಮುಕ್ತ ಅವಕಾಶ ನೀಡಿತ್ತು.

ಇಂಥ ಸಂಘಟನೆಗಳ ಚಟುವಟಿಕೆಗಳು ಹರಡಿರುವ ಪಿಡುಗು ಲಾತೆಹಾರ್‌ನಲ್ಲಿ ಒಬ್ಬ 13 ವರ್ಷದ ಬಾಲಕ ಸೇರಿದಂತೆ ಇಬ್ಬರು ದನದ ವ್ಯಾಪಾರಿಗಳ ಘೋರ ಹತ್ಯೆಯಲ್ಲಿ ಕಾಣ ಬಂದಿದೆ. ಗೋ ಸಂರಕ್ಷಣೆ ಗುಂಪಿನ ಹೆಸರಿನಲ್ಲಿ ಈ ಅಮಾನುಷ ಕೃತ್ಯ ನಡೆಸಲಾಗಿತ್ತು.

> ಹೇಗೆ ಒಂದು ಸರಕಾರವೇ ಕೋಮು ಧೃವೀಕರಣಕ್ಕೆ ಪ್ರೋತ್ಸಾಹ ನೀಡುತ್ತದೆ ಎನ್ನುವುದಕ್ಕೆ ಜಾರ್ಖಂಡ್ ಒಂದು ಎದ್ದು ಕಾಣುವ ಉದಾಹರಣೆಯಾಗಿದೆ. ಇಂಥ ಪರಿಸ್ಥಿತಿಯಲ್ಲಿ, ಎಲ್ಲಾ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳು ಒಗ್ಗಟ್ಟಿನಿಂದ ಜನರನ್ನು ಅಣಿನೆರೆಯಿಸಿ ಇಂಥ ಅಜೆಂಡಾಗಳನ್ನು ವಿಫಲಗೊಳಿಸುವುದು ಅನಿವಾರ್ಯವಾಗಿದೆ.

ಆಡಳಿತವು ಪಕ್ಷಪಾತದಿಂದ ವರ್ತಿಸುವುದು ರಘುವರ ದಾಸ್ ಸರಕಾರದ ಒಂದು ಕಳವಳಕಾರಿ ವಿದ್ಯಮಾನವಾಗಿದೆ. ಕೋಮು ಹಿಂಸಾಚಾರ ನಡೆಯಲಿದೆ ಎಂಬುದು ಗೊತ್ತಿದ್ದೂ ಮಧ್ಯಪ್ರವೇಶ ಮಾಡಲು ನಿರಾಕರಿಸುವುದು ಅಥವಾ ಅಂಥ ಹಿಂಸಾಚಾರಗಳಿಂದ ಅಲ್ಪಸಂಖ್ಯಾತರನ್ನು ರಕ್ಷಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳದಿರುವುದು ಈ ಸರಕಾರದ ಚಾಳಿಯಾಗಿದೆ.

ಹೇಗೆ ಒಂದು ಸರಕಾರವೇ ಕೋಮು ಧೃವೀಕರಣಕ್ಕೆ ಪ್ರೋತ್ಸಾಹ ನೀಡುತ್ತದೆ ಎನ್ನುವುದಕ್ಕೆ ಜಾರ್ಖಂಡ್ ಒಂದು ಎದ್ದು ಕಾಣುವ ಉದಾಹರಣೆಯಾಗಿದೆ. ಇಂಥ ಪರಿಸ್ಥಿತಿಯಲ್ಲಿ, ಎಲ್ಲಾ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳು ಒಗ್ಗಟ್ಟಿನಿಂದ ಜನರನ್ನು ಅಣಿನೆರೆಯಿಸಿ ಇಂಥ ಅಜೆಂಡಾಗಳನ್ನು ವಿಫಲಗೊಳಿಸುವುದು ಅನಿವಾರ್ಯವಾಗಿದೆ. ●





ಆಳುವ ವರ್ಗವನ್ನು ನಡುಗಿಸಿದ ಗಾರ್ಮೆಂಟ್ಸ್ ಕಾರ್ಮಿಕರ ಬಂಡಾಯ

ಎಸ್.ವರಲಕ್ಷ್ಮಿ

"ನಾವು ಗಾರ್ಮೆಂಟ್ಸ್ ಕಾರ್ಮಿಕರು ಮೇಡಂ, ನಮಗೆ ತುಂಬಾ ಅನ್ಯಾಯವಾಗಿದೆ. ನಮಗೆ ಡಬ್ಬಲ್ ಪಿ.ಎಫ್ (PF) ಇನ್ನು ಮೇಲೆ ಕೊಡಲ್ವಂತೆ. ಅದನ್ನು ಪಡೆಯೋ ತನಕ ಬಿಡಲ್ಲ. ನಾವು ಸತ್ರು ಪರ್ವಾಗಿಲ್ಲ" ಎಂದು ಆಕ್ರೋಶದಿಂದಲೇ ನಮ್ಮ ಬಳಿ AKR ಗಾರ್ಮೆಂಟ್ಸ್ ಕೆಲಸ ಮಾಡುತ್ತಿದ್ದ ಅನುಸೂಯಮ್ಮ ಮಾತನಾಡುತ್ತಿದ್ದರು. ಅಲ್ಲಮ್ಮ ನಿಮಗೆ ಇಷ್ಟು ಪೆಟ್ಟಾಗಿದೆ, ಮತ್ತೆ ಹೋರಾಟ ಮಾಡ್ತೀರಾ ಎಂದು ಕೇಳಿದ್ದಕ್ಕೆ "ಹೌದು ನಮ್ಮ ಹಕ್ಕು ನಾವು ಬಿಡುವುದಿಲ್ಲ ಎಂದು ಹೇಳಿದರು. ಅನುಸೂಯಮ್ಮ ಮೊಣಕಾಲಿಗೆ ಮತ್ತು ಜಾಕಿ ಗಾರ್ಮೆಂಟ್ಸ್‌ನ 20 ವರ್ಷ ವಯಸ್ಸಿನ ಆಶಾಳ ತಲೆಗೆ ತೀವ್ರ ಪೆಟ್ಟಾಗಿ ಬ್ಯಾಂಡೇಜ್ ಕಟ್ಟಿದ್ದರು. ಅದೇ ಕಾರ್ಖಾನೆಯ ಮತ್ತೊಬ್ಬರು ರೋಜಾ ಮತ್ತು ಆದಿತ್ಯಾ ಬಿರ್ಲಾ ಉದ್ಯೋಗ ಪವಿತ್ರಾರವರ ಬಾಯಿಗೆ ಲಾಟಿಯೇಟು ಬಿದ್ದು ಮಾತನಾಡಲು ಆಗುತ್ತಿರಲಿಲ್ಲ.

ಎಪ್ರಿಲ್ 19ರ ಬೆಳಗ್ಗೆ ನಾನು ಮತ್ತು ಗಾರ್ಮೆಂಟ್ಸ್ ಸಂಘಟನೆಯ ಯಶೋದಾ ಹೊಸೂರು ರಸ್ತೆಯ ಬೊಮ್ಮನಹಳ್ಳಿ ಆಸ್ಪತ್ರೆಗೆ ಭೇಟಿ ಕೊಟ್ಟು ಎಪ್ರಿಲ್ 18 ಹೋರಾಟದಲ್ಲಿ ಪೆಟ್ಟು ತಿಂದು ಆಸ್ಪತ್ರೆಗೆ ಆಡ್ಮಿಟ್ ಆದ ಆ ವೀರ ಮಹಿಳೆಯರ ಬಳಿ ಮಾತನಾಡಿ ಅವರ ಹೋರಾಟಕ್ಕೆ ನಮ್ಮ ಬೆಂಬಲವನ್ನು ವ್ಯಕ್ತಪಡಿಸಿ ವಾಪಸ್ಸು ಆದೆವು.

ಕಾರಲ್ಲಿ ವಾಪಸ್ಸು ಬರುತ್ತಿದ್ದ ವೇಳೆಯಲ್ಲಿಯೇ ಪೀಣ್ಯ ದಾಸರಹಳ್ಳಿ ಬಳಿಯಿರುವ ಬಾಂಬೆ ರೆಯಾನ್, FFI ಹಾಗೂ ಮೈಸೂರು ರಸ್ತೆಯಲ್ಲಿ ಗೋಕುಲದಾಸ್ ಹೀಗೆ ಒಂದೊಂದೇ ಕಾರ್ಖಾನೆಗಳಲ್ಲಿ ಕಾರ್ಮಿಕರು ಕೆಲಸವನ್ನು ಸ್ಥಗಿತಗೊಳಿಸಿ ಬೀದಿಗಿಳಿಯುತ್ತಿದ್ದ ಸುದ್ದಿಗಳು ನಿರಂತರವಾಗಿ ಬಂದವು. 11 ಗಂಟೆಯೊಳಗೆ ಮೈಸೂರು ರಸ್ತೆ, ರಾಮನಗರ, ಮದ್ದೂರು, ತುಮಕೂರು ರಸ್ತೆಯ ಗೊರಗುಂ-ಟೆ ಪಾಳ್ಯ, ಕಾಮಾಕ್ಷಿಪಾಳ್ಯ, ಪೀಣ್ಯ ದಾಸರಹಳ್ಳಿ, ಬನ್ನೇರುಘಟ್ಟ ರಸ್ತೆಯಲ್ಲಿರುವ ಎಲ್ಲಾ ಕಾರ್ಖಾನೆಗಳು ಸಂಪೂರ್ಣ ಸ್ಥಗಿತಗೊಂಡು 30 ಸಾವಿರಕ್ಕಿಂತಲೂ ಹೆಚ್ಚು ಮಹಿಳಾ ಕಾರ್ಮಿಕರು ಬೆಂಗಳೂರು ಬರುವ ಎಲ್ಲಾ ರಸ್ತೆಗಳನ್ನು ಆಕ್ರಮಿಸಿ ಕೊಳ್ಳುತ್ತಿದ್ದರು.

ಏಪ್ರಿಲ್ 18ರಂದು ಬನ್ನೇರುಘಟ್ಟ ರಸ್ತೆಯ ಷಾಹಿ ಎಕ್ಸ್‌ಪೋರ್ಟ್‌ನಿಂದ ಮತ್ತು ಅಲ್ಲಿಯ ಸುತ್ತಮುತ್ತ ಇದ್ದ ಕಾರ್ಖಾನೆಗಳಿಂದ ಸ್ವಯಂ ಪ್ರೇರಿತವಾಗಿ ಹೊರಬಂದ ಸುಮಾರು 20 ಸಾವಿರ ಕಾರ್ಮಿಕರು ಬೊಮ್ಮನಹಳ್ಳಿಯ ರಸ್ತೆಯಲ್ಲಿ ನಾಲ್ಕೂವರೆ ಗಂಟೆ ಕುಳಿತು ಬಿಟ್ಟರು. ಟ್ರಾಫಿಕ್ ಜಾಮ್ ಅಂತ ಹೇಳಿ ಪೊಲೀಸರು ಅವರ ಬಲವನ್ನು ಈ ಕಾರ್ಮಿಕರ ಹೋರಾಟದ ಮೇಲೆ ಹರಿಯಬಿಟ್ಟಿದ್ದರು – ಟಿಯರ್ ಗ್ಯಾಸ್, ಲಾಠಿ ಚಾರ್ಜ್ ಮಾಡಿ ಮನಬಂದಂತೆ ಪೊಲೀಸರು ವರ್ತಿಸಿದ್ದರು.

ಸಂಜೆ ಹೋರಾಟ ನಿಂತಿದೆ ಎಂದುಕೊಳ್ಳುತ್ತಿದ್ದಂತೆ ಏಪ್ರಿಲ್ 19ರಂದು ವ್ಯಾಪಕವಾಗಿ ಬೆಂಗಳೂರಿನ ಹೊರ ಭಾಗದ ಎಲ್ಲಾ ಕಾರ್ಖಾನೆಗಳು ಸ್ಥಗಿತಗೊಂಡವು. ಯಾವ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳದ ರಾಜ್ಯದ ಸರಕಾರ ಮತ್ತು ಪೊಲೀಸ್ ಇಲಾಖೆ ಹೋರಾಟಗಾರರನ್ನು ಚದುರಿಸಲು ಪ್ರಯತ್ನಿಸಿದರು. ಪೊಲೀಸರ ಪ್ರಯತ್ನಗಳಿಗೆ ಯಾವುದೇ ರೀತಿಯ ಸೊಪ್ಪನ್ನು ಹಾಕದೆ ಕಾರ್ಮಿಕರನ್ನು ಅದರಲ್ಲೂ ಮಹಿಳಾ ಕಾರ್ಮಿಕರು ತಮ್ಮ ಆಕ್ರೋಶವನ್ನು ವ್ಯಕ್ತ ಮಾಡುತ್ತಿದ್ದರು.

ಇವರ ಆಕ್ರೋಶ ಯಾವ ಮಟ್ಟಿಗಿತ್ತು ಎಂದ-ರೆ, ಪೊಲೀಸರ ಲಾಠಿ, ಬೂಟು, ಟಿಯರ್ ಗ್ಯಾಸ್, ಗುಂಡು ಯಾವುದೂ ಕೆಲಸ ಮಾಡಲಿಲ್ಲ. ಸಹಜವಾಗಿ ಕೆಲ ಹೋರಾಟಗಳಲ್ಲಿ ಪೊಲೀಸರು ಲಾಠಿ ಚಾರ್ಜ್ ಮಾಡಿದ ಕೂಡಲೇ ಜನ ಓಡುತ್ತಾರೆ. ಆದ-ರೆ ಇಲ್ಲಿ ಲಾಠಿ ಚಾರ್ಜ್ ಮಾಡಿದ್ದಷ್ಟು ಜನ ಹೆಚ್ಚಾಗುತ್ತಿದ್ದರು. ಹೋರಾಟಗಾರರೇ ನುಗ್ಗಿ ಪೊಲೀಸರನ್ನು ಅಡಗಿಸುತ್ತಿದ್ದರು. ಇದು ಅಕ್ಷರಶಃ ರಣರಂಗವಾಗಿತ್ತು. ಈ ಎರಡು ದಿನದ ಹೋರಾಟದಿಂದ ಒಟ್ಟು 14 ಪೊಲೀಸವಾಹನ ಭಸ್ಮ, 43 ಪೊಲೀಸರಿಗೆ ಗಾಯ, ಕಾರ್ಮಿಕರು ಸಾರ್ವಜನಿಕರು ಸೇರಿ 84 ಮಂದಿಗೆ ಗಾಯ, ಸಾರಿಗೆ ನಿಗಮದ 10 ಬಸ್ ಆಹುತಿ, ಒಟ್ಟು 95 ಖಾಸಗಿ, ಸರ್ಕಾರಿ ವಾಹನಗಳು ಜಖಂ, ಆಗಿದೆಯೆಂದೂ ರಾಜ್ಯದ ದಿನಪತ್ರಿಕೆಗಳು ವರದಿ ಮಾಡಿವೆ.

ಏನಿದು ಹೊಸ ಪಿ.ಎಫ್ (PF) ನೀತಿ ?

ಕೇಂದ್ರ ಸರ್ಕಾರ ಫೆಬ್ರವರಿ 10 ರಂದು ಜಾರಿಗೆ ತಂದಿದ್ದ ಗೆಜೆಟ್ ನೋಟಿಫಿಕೇಷನ್ No. GS.A.158(E) ನಲ್ಲಿ ಒಟ್ಟು ಶೇಖರಣೆಯಾದ ಪಿ.ಎಫ್ (PF)ನ ಹಣದಲ್ಲಿ ಮೂರನೇ ಎರಡು ಭಾಗದಷ್ಟು ಹಣವನ್ನು ಕಾರ್ಮಿಕನಿಗೆ 58 ವರ್ಷ ಆದನಂತರವೇ ಪಡೆಯತಕ್ಕದ್ದು ಎಂದು ಬದಲಾವಣೆ ಮಾಡಲಾಗಿದೆ. ((ವಿವರಗಳಿಗೆ ಬಾಕ್ಸ್ ನೋಡಿ)

ಈ ಸಮಸ್ಯೆ ಪಿ.ಎಫ್ (PF) ಅಡಿಯಲ್ಲಿರುವ ಸುಮಾರು 42 ಕೋಟಿ ಕಾರ್ಮಿಕರಿಗೆ ಅನ್ವಯವಾಗುತ್ತದೆ.

ಈ ಹೊಸ ನಿಯಮದ ವಿರುದ್ಧವೇ ತೀವ್ರ ಆಕ್ರೋಶ ವ್ಯಕ್ತವಾಗಿರುವುದು.

ಈ ಎಲ್ಲಾ ನಿಯಮಗಳು ಪಿ.ಎಫ್ (PF) ಅಡಿಯಲ್ಲಿರುವ ಎಲ್ಲಾ ಕಾರ್ಮಿಕರಿಗೂ ಇದೆ. ಗಾರ್ಮೆಂಟ್ಸ್ ಕಾರ್ಮಿಕರಿಗೆ ಮಾತ್ರ ಯಾಕಿಷ್ಟು ಆಕ್ರೋಶ? ಇದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಗಾರ್ಮೆಂಟ್ಸ್ ಕಾರ್ಮಿಕರ ಅದರಲ್ಲೂ ಮಹಿಳಾ ಕಾರ್ಮಿಕರ ಪರಿಸ್ಥಿತಿ ಬಗ್ಗೆ ತಿಳಿಯಬೇಕು.



ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರ ಅತೀವ ಶೋಷಣೆ, ಅವರ ಸಾಮಾಜಿಕ-ಆರ್ಥಿಕ ಹಿನ್ನೆಲೆ, ಬದುಕಿನ ಸ್ಥಿತಿ, ಅಲ್ಲಿ ಟ್ರೇಡ್ ಯೂನಿಯನುಗಳ ಮೇಲಿನ ತೀವ್ರ ನಿರ್ಬಂಧಗಳ ಬಗ್ಗೆ ತಿಳಿದುಕೊಳ್ಳಬೇಕು.

ಗಾರ್ಮೆಂಟ್ಸ್ ಮಹಿಳೆಯ ಬದುಕು :

ನೀವು ಬೆಳಿಗ್ಗೆ ಬೆಂಗಳೂರಿಗೆ ಪ್ರವೇಶ ಪಡೆಯುವ ಮೈಸೂರು ರಸ್ತೆ, ಹೂಸೂರು ರಸ್ತೆ, ತುಮಕೂರು ರಸ್ತೆ, ಯಲಹಂಕ ರಸ್ತೆಗಳನ್ನು ನೋಡಿದರೆ ದೊಡ್ಡ ಪ್ರಮಾಣದ ಮಹಿಳೆಯರ ಸಾಲು ಸಾಲಾಗಿ ಇರುವೆಗಳ ತರಹ ಹೋಗುತ್ತಾ ಇರುತ್ತಾರೆ. ಅದೇ ರಸ್ತೆಗಳಲ್ಲಿ ವ್ಯಾನು, ಟೆಂಪೋ, ಆಟೋಗಳಲ್ಲಿ ಜನ ಗುಂಪುಗುಂಪಾಗಿ ಇಳಿಯುತ್ತಾ ಇರುತ್ತಾರೆ. ಕಾರ್ಖಾನೆಗಳ ಮುಂದೆ ಮರದಡಿಯಲ್ಲಿ ಕುಳಿತು ಊಟ ಮಾಡುತ್ತಾ ಇರುತ್ತಾರೆ. ಶ್ರೀರಂಗ ಪಟ್ಟಣದಿಂದ ಹಿಡಿದು ಬಿಡದಿಯ ತನಕ ಜನರು ಮೈಸೂರಿನಿಂದ ಬರುವ ಮತ್ತು ಕುಪ್ಪಂ, ಕೆ.ಜಿ.ಎಫ್, ಬಂಗಾರ ಪೇಟೆಗಳಿಂದ ಬರುವ ಟ್ರೈನುಗಳಲ್ಲಿ, ಹಿಂದೂಪುರ, ಗೌರಿಬಿದನೂರು ದೊಡ್ಡಬಳ್ಳಾಪುರ ತನಕ ಬರುವ ಬೆಳಿಗ್ಗೆ ಜನರಲ್ ಬೋಗಿಗಳಲ್ಲಿ ಪ್ರಯಾಣಿಸುವ ಅತ್ಯಧಿಕ ಪ್ರಯಾಣಿಕರು ಮಹಿಳೆಯರು.

ಇವರು ಟ್ರೈನ್‌ನಲ್ಲಿಯೇ ತಲೆ ಬಾಚಿ ಶೃಂಗರಿಸಿಕೊಳ್ಳುತ್ತಾರೆ, ಅಲ್ಲೇ ತಿಂಡಿ ತಿನ್ನುತ್ತಾರೆ, ಕಾರ್ಖಾನೆಗಳ ಮುಂದಿನ ರಸ್ತೆಯಲ್ಲಿ ಕುಳಿತು ಊಟ ಮಾಡುತ್ತಾರೆ, ರಸ್ತೆಯಲ್ಲಿ ನಡೆದು ಹೋಗುವಾಗಲೇ ತಿಂದುಕೊಂಡು ಹೋಗುತ್ತಾರೆ. ಇವರು ಯಾರು ಗೊತ್ತೇ? ಅವರೇ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ದುಡಿಯುವ ಮಹಿಳೆಯರು. ಇಂದು ಬೆಂಗಳೂರು ಜಾಗತಿಕ ನಗರವಾಗಿ, ಭಾರತ ಸಿದ್ಧ ಉಡುಪುಗಳ ರಫ್ತಿನಲ್ಲಿ 2ನೇ ಸ್ಥಾನವನ್ನು ಪಡೆದುಕೊಂಡಿರುವ ಹಿಂದಿನ ಶಕ್ತಿ.

ಭಾರತದ ಸ್ಥಾನ ಮಾನಕ್ಕೆ ಕಾರಣವಾಗಿರುವ ಈ ಮಹಿಳೆಯರು ಕೃಷಿ ಬಿಕ್ಕಟ್ಟಿನಿಂದ, ಗ್ರಾಮಾಂತರ ಪ್ರದೇಶಗಳ ನಿರುದ್ಯೋಗಕ್ಕೆ ಬಲಿಯಾಗಿ ಬದುಕನ್ನು ಸಾಗಿಸಲು ಸಾಧ್ಯವಾಗದೇ "ಎಷ್ಟೋ ದೂರ ಆದರೂ ಪರವಾಗಿಲ್ಲ, ಒಂದಷ್ಟು ಸಂಬಳ ಸಿಕ್ಕರೆ ಸಾಕು" ಎಂಬ ನಿಸ್ಸಹಾಯಕ ಪರಿಸ್ಥಿತಿಯಲ್ಲಿರುವವರು. ನೀವೇ ಯೋಚಿಸಿ. ಬೆಳಗ್ಗೆ 8 ರಿಂದ 8–30ಕ್ಕೆ ಕಾರ್ಖಾನೆಯಲ್ಲಿರಬೇಕು ಎಂದರೆ 30 ರಿಂದ 100 ಕಿ.ಮಿ. ದೂರದ ಶ್ರೀರಂಗಪಟ್ಟಣ, ಪಾಂಡವಪುರ, ಮಂಡ್ಯ, ಮದ್ದೂರು, ರಾಮನಗರ, ಹಿಂದೂಪುರ, ಗೌರಿಬಿದನೂರು, ದೊಡ್ಡಬಳ್ಳಾಪುರಗಳಿಂದ ಬೆಂಗಳೂರಿನ ಹೊರ ವಲಯದ ಕಾರ್ಖಾನೆಗಳು 30 ರಿಂದ 70 ಕಿಲೋಮೀಟರ್ ದಾರಿ. ಬೆಳಗ್ಗೆ 6 ರಿಂದ 6–30 ರೊಳಗೆ ಟ್ರೈನ್ ಹಿಡಿಯಬೇಕು, 6 ರಿಂದ 6–30 ರೊಳಗೆ ಮನೆ ಬಿಡಬೇಕೆಂದರೆ ಆಕೆ ಎದ್ದು ಅಡುಗೆ ಮಾಡಿ, ಮಕ್ಕಳಿಗೆ ಗಂಡನಿಗೆ ರೆಡಿ ಮಾಡಿ, ಆಕೆ ರೆಡಿಯಾಗಿ ಬರಬೇಕೆಂದರೆ ಕನಿಷ್ಠ ಆಕೆ ಪ್ರತಿ ದಿನ ಬೆಳಗ್ಗೆ 4 ಗಂಟೆಗೆ ಏಳಬೇಕು. ಮತ್ತೆ ರಾತ್ರಿ ಮನೆ ಸೇರುವುದು 8–30 ರಿಂದ 9 ಗಂಟೆಗೆ. ತಿಂಗಳಲ್ಲಿ ಹಬ್ಬದ ದಿನಗಳನ್ನು ಹೊರತು ಪಡಿಸಿದರೆ, ಕೆಲವೊಮ್ಮೆ ಭಾನುವಾರಗಳು ಕೆಲಸ ಮಾಡಬೇಕೆಂದರೆ ಆ ಮಹಿಳೆಯರು ಆರೋಗ್ಯ ಸ್ಥಿತಿ ಏನಾಗಬೇಕು.

ಈ ಕೆಲಸಗಾರರಲ್ಲಿ 15 ವರ್ಷಗಳಿಂದ 45 ವರ್ಷದ ವಯೋಮಾನದವರು ಇರುತ್ತಾರೆ. ಮದುವೆ ಆಗದ ಹೆಣ್ಣು ಮಕ್ಕಳು ಅವರ ಮುಂದಿನ ಜೀವನ, ಸಣ್ಣ ಮಕ್ಕಳಿರುವ ತಾಯಂದಿರು, ಗರ್ಭಿಣಿ ಯಾಗಿರುವ ಮಹಿಳೆಯರು ಸಮಯಕ್ಕೆ ಸರಿಯಾಗಿ, ಊಟ, ನಿದ್ದೆ ಇಲ್ಲದಿದ್ದರೆ ಆರೋಗ್ಯ ಹೇಗೆ? ಇವರ ಮಕ್ಕಳ ಪರಿಸ್ಥಿತಿ ಹೇಗೆ?

ಗಾರ್ಮೆಂಟ್ಸ್ ಮಹಿಳೆಯರ ಅತೀವ ಶೋಷಣೆ :

ಕಾರ್ಮಿಕ ಕಾನೂನುಗಳ ಪ್ರಕಾರ ಕೆಲಸದ ಅವಧಿ 8 ಗಂಟೆ ಆದರೆ ಈ ಕಾರ್ಖಾನೆಗಳಲ್ಲಿ ಕನಿಷ್ಠ 10 ರಿಂದ 12 ಗಂಟೆ ದುಡಿಸಿಕೊಳ್ಳುತ್ತಿದ್ದಾರೆ. ಇಲ್ಲಿ ಕೆಲಸದ ಅವಧಿಗಿಂತ ಕೊಟ್ಟ 'ವರ್ಕ್ ಟಾರ್ಗೆಟ್' ಮುಗಿಸಿ ಹೋಗುವುದು ದೊಡ್ಡ ಸವಾಲು. ಈ ಟಾರ್ಗೆಟ್‌ನ್ನು ಮುಗಿಸಿಯೇ ಹೋಗಬೇಕು. ಅದು ಎಷ್ಟು ಸಮಯವಾದರೂ ಆಗಬಹುದು. ಆ ಹೆಚ್ಚುವರಿ ಸಮಯಕ್ಕೆ ಓ.ಟಿ (ಓವರ್ ಟೈಮ್) ಇಲ್ಲ.

ಪುರುಷ ಮೇಲ್ವಿಚಾರಕರ ಲೈಂಗಿಕ ಕಾಟ ಬೇರೆ. ಅವರ ಜತೆ 'ಸಹಕರಿಸಬೇಕು'. ಅವರು ಎಲ್ಲಿ ಮುಟ್ಟಿದರೂ ಮುಟ್ಟಿಸಿಕೊಳ್ಳಬೇಕು.

ಹೊಸ ಪಿ.ಎಫ್. ನೀತಿ ತಂದ ಬದಲಾವಣೆ

ಮೂಲವೇತನದ ಶೇ. 12 ಮತ್ತು ಅಷ್ಟೇ (ಶೇ. 12) ಮಾಲಿಕರ ಪಾಲು ಒಬ್ಬ ಕಾರ್ಮಿಕನ ಪಿ.ಎಫ್. ಖಾತೆಗೆ ಪ್ರತಿ ತಿಂಗಳು ಜಮಾ ಆಗುತ್ತದೆ.

ಈ ಗೆಜೆಟ್ ನೋಟಿಫಿಕೇಷನ್‌ಗಿಂತ ಮೊದಲು ಒಂದು ಸಂಸ್ಥೆಯ ಕೆಲಸ ಬಿಟ್ಟ ಮೇಲೆ (ಬೇರೆ ಕೆಲಸಕ್ಕೆ ಸೇರುವುದಿಲ್ಲ ಎಂದು ಹೇಳಿದರೆ ಅಥವಾ 3 ತಿಂಗಳು ನಿರುದ್ಯೋಗಿಯಾಗಿದ್ದರೆ) ತನ್ನ ಪಿ.ಎಫ್ (ಕಈ) ಖಾತೆಯಲ್ಲಿ ಜಮಾ ಆಗಿರುವ ಹಣ (ಮತ್ತು ಅದರ ಮೇಲಿನ ಬಡ್ಡಿ) ಸಂಪೂರ್ಣ ಹಣವನ್ನು ಪಡೆಯಬಹುದಿತ್ತು. 10 ವರ್ಷ ಕಡ್ಡಾಯವಾಗಿ ಒಂದೇ ಸಂಸ್ಥೆಯಡಿಯಲ್ಲಿ ಕೆಲಸ ಮಾಡಿದರೆ ಮಾತ್ರ ಪೆನ್ಷನ್‌ಗೆ ಅರ್ಹತೆ ಬರುತ್ತಿತ್ತು

ಈ ನೋಟಿಫಿಕೇಷನ್ ಪ್ರಕಾರ:

- ಕಾರ್ಮಿಕರ ಪಾಲು – ಇದರಲ್ಲಿ ಶೇ. 30 ಹಣ ಪಿಂಚಣಿ ಯೋಜನೆಗೆ ಉಳಿದ ಶೇ.70ನ್ನು ನಿವೃತ್ತಿಯ ಮೊದಲು ಪಡೆಯಬಹುದು
- ಮಾಲಿಕರ ಪಾಲು – ಇದರಲ್ಲಿ ಶೇ. 70 ಹಣ ಪಿಂಚಣಿ ಯೋಜನೆಗೆ ಹೋಗುತ್ತದೆ, ಉಳಿದ ಶೆ. 30 ಹಣವನ್ನು ಕಾರ್ಮಿಕರು ತಮ್ಮ ನಿವೃತ್ತಿ (58) ವಯಸ್ಸಿನ ನಂತರ ಮಾತ್ರವೇ ತೆಗೆಯಲು ಅವಕಾಶ.
- ಒಟ್ಟಾರೆ ಈ ನಿಯಮದ ಪ್ರಕಾರ ಒಬ್ಬ ಕಾರ್ಮಿಕನ ಪಿ.ಎಫ್ ಖಾತೆಯಲ್ಲಿರುವ ಒಟ್ಟು ಹಣದ ಶೇ. 65 ರಷ್ಟು ಹಣ ಕಾರ್ಮಿಕಳಿ/ನಿಗೆ 58ನೇ ವಯಸ್ಸಿನ ವರೆಗೆ ಸಿಗುವುದಿಲ್ಲ, ಗಾರ್ಮೆಂಟ್ ಉದ್ಯಮದಲ್ಲಿ ಈಗ ಇರುವ ಪರಿಸ್ಥಿತಿಯಲ್ಲಿ ಶಾಶ್ವತವಾಗಿ ಕಾರ್ಮಿಕಳಿ/ನಿಗೆ ಸಿಗದೆ ಹೋಗಬಹುದು.



ಇಲ್ಲದಿದ್ದರೆ ಪದೇ ಪದೇ ಸ್ಥಳಗಳನ್ನು, ಕೆಲಸಗಳನ್ನು ಬದಲಾಯಿಸುತ್ತಾರೆ.

ಈ ಕಾರ್ಖಾನೆಗಳಲ್ಲಿ ಕನಿಷ್ಠ 500 ರಿಂದ 1000 ಜನರು ಮಹಿಳಾ ಕಾರ್ಮಿಕರು ಇರುತ್ತಾರೆ. ಇವರಿಗೆ ಶೌಚಾಲಯಗಳು 5 ರಿಂದ 10 ಮಾತ್ರ ಇರುತ್ತವೆ. ಒಬ್ಬ ಮಹಿಳೆ ದಿನಕ್ಕೊಮ್ಮೆ ಮಾತ್ರ ಶೌಚಾಲಯಕ್ಕೆ ಹೋಗಬೇಕು. ಇಲ್ಲದಿದ್ದರೆ ಉತ್ಪಾದನೆಗೆ ಧಕ್ಕೆಯಾಗುತ್ತದೆ ಎಂಬುದು ಮಾಲೀಕರ ತಂತ್ರ. ಮುಟ್ಟಾದ ಮಹಿಳೆಯರ ಪರಿಸ್ಥಿತಿ, ಸಕ್ಕರೆ ಕಾಯಿಲೆಯಿರುವ ಮಹಿಳೆಯರ ಪರಿಸ್ಥಿತಿ ದಿನದಪೂರ್ತಿ ಮೂತ್ರವನ್ನು ತಡೆಯುವ ಮಹಿಳೆಯರ ಪರಿಸ್ಥಿತಿ ಹೇಗಿರಬೇಕು?

ಗಾರ್ಮೆಂಟ್ಸ್ ಕೆಲಸ ಮಾಡುವುದು ಎಂದರೆ ಸದಾ ಧೂಳು ಕುಡಿದುಕೊಂಡೇ ಕೆಲಸ ಮಾಡಬೇಕು. ಅತ್ಯಂತ ಅಮಾನವೀಯ ವಿಷಯ ಎಂದರೆ ಕೆಲಸದ ಸ್ಥಳಕ್ಕೆ ಕ್ಯಾಂಟೀನ್‌ನಿಂದ ಆಡಳಿತ ವರ್ಗದವರಿಗೆ ಟೀ ಕೊಡುತ್ತಾರೆ, ಆದರೆ ಕಾರ್ಮಿಕರಿಗೆ ಇಲ್ಲ. ಹಣ ಕೊಟ್ಟರೂ ಕೆಲಸದ ಸ್ಥಳಕ್ಕೆ ಟೀ ಇಲ್ಲ. ಟೀ ಬೇಕಿದ್ದ-ರೆ ಊಟದ ಸಮಯದಲ್ಲಿ ಕ್ಯಾಂಟೀನ್‌ಗೆ ಹೋಗಿ ಕುಡಿಯಬಹುದು.

ಊಟಕ್ಕೆ ಕೆಲವಡೆ ಪ್ರತ್ಯೇಕ ಸ್ಥಳಗಳು ಇವೆ. ಅದು ಎಲ್ಲಿ ಗೊತ್ತಾ? ಕನಿಷ್ಠ 4 ರಿಂದ 5 ಹಂತದ ಮಹಡಿ ಹತ್ತಿ ಹೊಗಬೇಕು. ಈ ಮಹಡಿಗಳಲ್ಲಿ ಕೆಲಸ ಮಾಡುವ ಮಹಿಳೆಯರು ಮೆಟ್ಟಿಲು ಹತ್ತಿ ಇಳಿದೇ ಕೆಲಸ ಮಾಡಬೇಕು. ಇವರಿಗೆ ಸಿಗುವ ಕೂಲಿ ಈಗಲೂ ಕೂಡಾ ಕೇವಲ 5 ರಿಂದ 6 ಸಾವಿರ ಮಾತ್ರ ಕನಿಷ್ಠ ಕೂಲಿ ಕಾಯ್ದೆಯಡಿಯಲ್ಲಿ 292 ರೂಗಳಿಂದ 272 ರೂಗಳು ಎಂದೂ ಇದ್ದರೂ ಅದು ದಕ್ಕುತ್ತಿಲ್ಲ. 4 ವರ್ಷ ಆದ ಕೂಡಲೇ ಗ್ರಾಜ್ಯುಟಿ ಕೊಡಬೇಕಾಗುತ್ತದೆಂದು ಕೆಲಸದಿಂದ ಕಿರುಕುಳ ಕೊಟ್ಟು ತೆಗೆಯುತ್ತಾರೆ. ಕೆಲವೊಮ್ಮೆ ಕೌಟುಂಬಿಕ ಮತ್ತು ವೈಯಕ್ತಿಕ ಸಮಸ್ಯೆಗಳಿಂದ ಹಾಗೂ ಅತೀವ ಸತತ ಶೋಷಣೆಯಿಂದಾಗಿ ಕೆಲಸ ಬಿಡುವುದೂ ಇದೆ. ಇದು ಗಾಮೆಂಟ್ ಉದ್ಯಮಕ್ಕೆ ವಿಶಿಷ್ಟವಾದದ್ದು. ಈ ರೀತಿ ಕೆಲಸ ಬಿಡುವ ಮಹಿಳಾ ಕಾರ್ಮಿಕರಿಗೆ ದುಡಿಮೆಯ ಅವಧಿಯಲ್ಲಿ ಗಳಿಸಿದ ಪಿ.ಎಫ್. ಹಣವನ್ನು ಪಡೆಯುವುದು ಮುಂದಿನ ಜೀವನಕ್ಕೆ ತಕ್ಷಣದ ಆಧಾರವಾದ್ದರಿಂದ ಬಹಳ ಮುಖ್ಯವಾಗುತ್ತದೆ. ಆದ್ದರಿಂದಲೇ ಪಿ.ಎಫ್. ಹಣದ ಮೂರನೇ ಎರಡು ಭಾಗ ತಮಗೆ ತಕ್ಷಣ ಸಿಗುವುದಿಲ್ಲ ಎಂಬುದು ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದು. ಅದು ಸಿಗುವುದು 58 ವರ್ಷ ಆದ ಮೇಲೆ ಎಂಬ ನಿಯಮ, ಅದು ಎಂದು ಸಿಗುವುದಿಲ್ಲ ಎಂಬ ಆತಂಕಕ್ಕೆ ಕಾರಣವಾಯಿತು.

ಹೆರಿಗೆ ಭತ್ಯೆ ಕಾಯ್ದೆ ಮತ್ತು ಕ್ರೆಶ್ ಸೌಲಭ್ಯ

ಮಾನವ ಸಮಾಜದಲ್ಲಿ 18ನೇ ಶತಮಾನದಲ್ಲಿ ನಡೆದ ಕೈಗಾರಿಕೀಕರಣ, ಮನೆಯಿಂದ ಕಾರ್ಖಾನೆಗೆ ದುಡಿಮೆ ಸ್ಥಳಾಂತರವಾಯಿತು. ಈ ದುಡಿಮೆಗಳಲ್ಲಿ ಮಹಿಳೆಯರು ಮತ್ತು ಪುರುಷರು ಸಮಾನವಾಗಿ ಪಾಲ್ಗೊಂಡರು. ಮಹಿಳೆಗೆ ನೈಸರ್ಗಿಕವಾಗಿ ಬಂದಿರುವ ಹಕ್ಕು ಮಕ್ಕಳಿಗೆ ಜನ್ಮ ನೀಡುವುದು. ಅಮೆರಿಕಾದ ಚಿಕಾಗೋ ನಗರದಲ್ಲಿ ನಡೆದ ಗಾರ್ಮೆಂಟ್ಸ್ ಮಹಿಳೆಯರ ಮೊಟ್ಟ ಮೊದಲ ಹೋರಾಟ, 1888 ರಿಂದ ನಡೆದ ಕಾರ್ಮಿಕರ ಹಕ್ಕುಗಳಿಗಾಗಿ ನಡೆದಂತಹ ಹೋರಾಟಗಳ ಭಾಗವಾಗಿ ಸ್ವಾತಂತ್ರ್ಯ ನಂತರದಲ್ಲಿ ನಮ್ಮ ದೇಶದಲ್ಲಿ 1961ರಲ್ಲಿ ಈ ಕಾಯ್ದೆ ಜಾರಿಗೆ ಬಂದಿದೆ.

ತ್ಯಾಗ-ಬಲಿದಾನಗಳಿಂದ ಕೂಡಿದ ಚಳುವಳಿಗಳಿಂದ ಈ ಸವಲತ್ತು ಬಂದಿದೆ. ಆದರೆ ನವ ಉದಾರೀಕರಣ ನೀತಿಗಳ ಭಾಗವಾಗಿ 'ಲಾಭಗಳಿಸಲು ಎಂತಹ ಶೋಷಣೆ ತಯಾರು' ಅನ್ನುವ ರೀತಿಯ

ಸಾವಿರ ಕೋಟಿಯ ಗಾರ್ಮೆಂಟ್ಸ್ ಉದ್ಯಮ

ಜಾಗತೀಕರಣದ ಭಾಗವಾಗಿ ಇಂದು ಗಾರ್ಮೆಂಟ್ಸ್ ಉದ್ಯಮ ಒಂದು ವಿಶ್ವ ಉದ್ಯಮವಾಗಿ ಕ್ಷಿಪ್ರ ಪ್ರಗತಿ ಸಾಧಿಸುತ್ತದೆ. 19ನೇ ಶತಮಾನದಲ್ಲಿ ಯುರೋಪ್ ಹಾಗೂ ಅಮೆರಿಕಾ ದೇಶಗಳಲ್ಲಿ ಸಾಮೂಹಿಕ ಉತ್ಪಾದನೆಯಾಗಿ ಆರಂಭವಾಯಿತು.

ಭಾರತದಲ್ಲಿ 27% ಹತ್ತಿ ಬೆಳೆಯುವ ಪ್ರದೇಶವಾಗಿತ್ತು. 2ನೇ ವಿಶ್ವ ಮಹಾಯುದ್ಧದ ಸಂದರ್ಭದಲ್ಲಿ ಮಿಲಿಟರಿ ಸಮವಸ್ತ್ರಗಳನ್ನು ಸಿದ್ದಪಡಿಸಲು ಸಿದ್ಧ ಉಡುಪು ಘಟಕಗಳಾಗಿ ಪ್ರಾರಂಭಿಸಲಾಯಿತು. ಈ ಘಟಕಗಳೇ 1960ರಲ್ಲಿ ರಫ್ತು ಮಾಡುವ ಮುಖಾಂತರ ಭಾರಿ ಬೆಳವಣಿಗೆಯನ್ನು ಸಾಧಿಸಿತು. 1980ರಲ್ಲಿ ರಾಷ್ಟ್ರದ ಒಟ್ಟು ರಫ್ತಿನಲ್ಲಿ 50% ರಷ್ಟು ಗಾರ್ಮೆಂಟ್ಸ್ ಕಾರ್ಖಾನೆಗಳ ಉತ್ಪಾದನೆಯಾಗಿದೆ.

ಇಂದು ಜಗತ್ತಿನಲ್ಲಿ 60% ರಿಂದ 70% ಚೈನಾ, ಬಾಂಗ್ಲಾದೇಶ, ಥೈಲ್ಯಾಂಡ್ ಮುಂತಾದ ಏಷ್ಯ ಖಂಡದ ವಿವಿಧ ದೇಶಗಳಿಂದಲೇ ತಯಾರಾಗುತ್ತಿವೆ. ಇಡೀ ಜಗತ್ತಿನ ಹೆಸರಾಂತ ಬ್ರಾಂಡುಗಳು, ಉತ್ಪಾದಕರು, ಸಗಟು ವ್ಯಾಪಾರಿಗಳು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಜಗತ್ತಿನಲ್ಲಿ ಭಾರತ 2ನೇ ಅತಿ ದೊಡ್ಡ ಸಿದ್ಧ ಉಡುಪು ತಯಾರಿಕಾ ದೇಶವಾಗಿದೆ. ಇದರಿಂದಾಗಿ ದೇಶದ ಆರ್ಥಿಕತೆಗೆ ಹೆಚ್ಚಿನ ಕೊಡುಗೆಯನ್ನು ನೀಡುತ್ತದೆ. ಭಾರತದಲ್ಲಿ ಗುಡಗಾಂವ್, ತಿರುಪುರ್, ಬೆಂಗಳೂರು ಮತ್ತು ಚೆನ್ನೈಗಳಲ್ಲಿದೆ. ನಮ್ಮ ರಾಜ್ಯದಲ್ಲಿ 1500ಕ್ಕೂ ಕಾರ್ಖಾನೆಗಳಿವೆ. 8 ಲಕ್ಷಕ್ಕೂ ಅಧಿಕ ಮಹಿಳೆಯರು ದುಡಿಯುತ್ತಾರೆ. ಬೆಂಗಳೂರಿನಲ್ಲಿಯೇ ಅತಿ ಹೆಚ್ಚು (1000) ಮತ್ತು ದೊಡ್ಡ ಕಾರ್ಖಾನೆಗಳಿವೆ, ಮತ್ತು 5 ಲಕ್ಷ ಕಾರ್ಮಿಕರು ದುಡಿಯುತ್ತಾರೆ. ಆದ್ದರಿಂದ ಬೆಂಗಳೂರನ್ನು 'ಗಾರ್ಮೆಂಟ್ಸ್ ಹಬ್' ಎಂದು ಕರೆಯುತ್ತಾರೆ. ಈಗ ಬೆಂಗಳೂರಿನ ಹೊರ ಜಿಲ್ಲೆಗಳಲ್ಲಿ ಈ ಉದ್ಯಮ ಪ್ರಾರಂಭವಾಗಿದೆ.

ಅತ್ಯಂತ ದೊಡ್ಡ ಕಾರ್ಖಾನೆಗಳಾದ ಷಾಹಿ, ಗೋಕುಲ್‌ದಾಸ್ ಎಕ್ಸ್‌ಪೋರ್ಟ್ಸ್, ಟೆಕ್ಸ್‌ಪೋರ್ಟ್ ಓವರಸೀಸ್, ಬಾಂಬೆ ರಯಾನ್ ನಂತಹ ಕಾರ್ಖಾನೆಗಳಲ್ಲಿ ಸರಿ ಸುಮಾರು 30 ರಿಂದ 50 ಸಾವಿರ ಕಾರ್ಮಿಕರು ಇದ್ದಾರೆ. ಇಂತಹ ಕಂಪನಿಗಳ ವಾರ್ಷಿಕ ವಹಿವಾಟು 1000 ಕೋಟಿಗೂ ಅಧಿಕ.

ಮಾಲೀಕರ ವರ್ತನೆ ಈ ವರ್ತನೆಯನ್ನು ಪೋಷಣೆ ಮಾಡುವ ಸರ್ಕಾರಗಳ ನೀತಿಗಳ ಭಾಗವಾಗಿ ಇಂದು ಹಲವಾರು ಮಹಿಳೆಯರಿಗೆ ಹೆರಿಗೆ ರಜೆ ಮತ್ತು ಭತ್ಯೆ ಸಿಗುತ್ತಿಲ್ಲ. ಯಾವ ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಟನೆಗಳು ಇವೆಯೋ ಅಲ್ಲಿ ಮಾತ್ರ ಹೆರಿಗೆ ರಜೆ ಮತ್ತು ಭತ್ಯೆ ಜಾರಿಯಾಗುತ್ತಿದೆ. ಗುತ್ತಿಗೆ, ಹೊರಗುತ್ತಿಗೆ ಫೀಸ್‌ವರ್ಕ್, ಬದಲಿ ಎಂಬ ಹೆಸರಿನಲ್ಲಿ ಮಹಿಳಾ ಕಾರ್ಮಿಕರನ್ನು ದುಡಿಸುತ್ತಿರುವದರಿಂದ ಇಂದು ಲಕ್ಷಾಂತರ ದುಡಿಯುವ ಮಹಿಳೆಯರಿಗೆ ಈ ಸವಲತ್ತು ಸಿಗುತ್ತಿಲ್ಲ. ವಿಶೇಷವಾಗಿ ಗಾರ್ಮೆಂಟ್ಸ್ ಪ್ಯಾಕ್ಟರಿಗಳಲ್ಲಿ ಕೆಲವೇ ಜನರಿಗೆ ಮಾತ್ರ ಈ ಸವಲತ್ತು ಇದೆ. "ಗರ್ಭಿಣಿಯಾಗಿ ಹೆರಿಗೆ ಸಮಯ ಬಂದರೆ ಆಕೆ ಕೆಲಸಕ್ಕೆ ರಾಜಿನಾಮೆ ಕೊಡಬೇಕು. ನಂತರ ಹೊಸ ನೇಮಕಾತಿ". ಹೀಗಾಗಿಯೇ ಕ್ರೆಶ್ ಗೆ ಬಿಡಲು ಹೆಚ್ಚು ಮಕ್ಕಳು ಇರುವುದಿಲ್ಲ. ಈ ರೀತಿ ಕ್ರೆಶ್ ಸವಲತ್ತು ಸಹ ಇರುವುದಿಲ್ಲ.

ಗಾರ್ಮೆಂಟ್ ಉದ್ಯಮದಲ್ಲಿ ಈ ರೀತಿಯ ತೀವ್ರ ರೂಪದ ಶೋಷಣೆ ದಬ್ಬಾಳಿಕೆಯ ವಿರುದ್ಧ ಹುದುಗಿದ್ದ ಆಕ್ರೋಶ, ದುಗುಡ ಅವಮಾನಗಳು ಪಿ.ಎಫ್ (PF)ನ ಪ್ರಕರಣದಲ್ಲಿ ಆಸ್ಫೋಟಗೊಂಡಿದೆ.

ಯಾವುದೇ ಅಸ್ತ್ರಗಳು ಇಲ್ಲದೆ ಮಹಿಳೆಯರು ಪೊಲೀಸರನ್ನು ಎದುರಿಸುತ್ತಿರುವ, ಲಾಠಿಗಳನ್ನು ಕಿತ್ತುಕೊಂಡು ತನಗೆ ಹೊಡೆಯಲು ಬಂದವರನ್ನು ಹೊಡೆಯುವ ಮಹಿಳೆಯರ ಶಕ್ತಿ ಸಾಮರ್ಥ್ಯದ ಹಿಂದೆ ಮಡುಗಟ್ಟಿದ ನೋವು, ಆಕ್ರೋಶಗಳನ್ನು ಈ ಬಂಡವಾಳಶಾಹಿ ಸಮಾಜ ಅರ್ಥಮಾಡಿಕೊಳ್ಳಬೇಕಿದೆ.

ಕಾರ್ಮಿಕ ಸಂಘಟನೆಗಳಿಗೆ ನಿಷೇಧ

ರಾಜ್ಯದಲ್ಲಿ ಬಹುಶಃ ಕಾರ್ಮಿಕ ಸಂಘಟನೆಗಳು ಇಲ್ಲದ ಉದ್ಯಮಗಳೇ ಇಲ್ಲ. ಆದರೆ ಇಂದಿಗೂ ಗಾರ್ಮೆಂಟ್ಸ್ ಕಾರ್ಖಾನೆಗಳು ಸಂಘಗಳನ್ನು ರಚಿಸಲು ಅವಕಾಶಗಳನ್ನು ಕೊಡಲೇ ಇಲ್ಲ.

CITU 1990-2000ರಲ್ಲಿ ಹಲವು ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳನ್ನು ರಚಿಸಿತ್ತು. AITUC ಕೂಡ ಪ್ರಯತ್ನಗಳನ್ನು ನಡೆಸಿತ್ತು. ಸಂಘ ರಚನೆಯಾದ ಕೂಡಲೇ ಮಾಲೀಕರು ಮಾಡುವ ಮೊದಲ ಕೆಲಸ – ಸಂಘ ರಚಿಸಿದ ಪದಾಧಿಕಾರಗಳ ವಜಾ, ಕಾರ್ಖಾನೆಗಳನ್ನು ಮುಚ್ಚುವುದು ಮಾತ್ರವಲ್ಲ ರಾತ್ರೋರಾತ್ರಿ ಕಾರ್ಖಾನೆಗಳನ್ನು ಸ್ಥಳಾಂತರ ಮಾಡುವುದು. ಇದು ನಿರಂತರವಾಗಿ ನಡೆಯುತ್ತಲೇ ಇದೆ. ಆದರೆ ಯಾವ ಕಾರ್ಮಿಕ ಕಾನೂನುಗಳಿಂದಲೂ, ಸರ್ಕಾರಗಳಿಂದಲೂ, ಕಾರ್ಮಿಕ ಇಲಾಖೆಗಳಿಂದಲೂ ಅವರ ಮೇಲೆ ಗಾಮೆಂಟ್ ಕಾರ್ಖಾನೆಗಳ ಕಾನೂನು-ವಿರೋಧಿ ಕಾರ್ಮಿಕ-ವಿರೋಧಿ ನಡವಳಿಕೆ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ.

ಸಾವಿರ ಕೋಟಿಗೂ ಮೀರಿದ ವಹಿವಾಟು ಹೊಂದಿರುವ ರಾಜ್ಯದ ಗಾರ್ಮೆಂಟ್ಸ್ ಉದ್ಯಮ (ವಿವರಗಳಿಗೆ ಬಾಕ್ಸ್ ನೋಡಿ) ಈ ಸಂಪತ್ತನ್ನು ಸೃಷ್ಟಿಸುವ 8 ಲಕ್ಷ ಕಾರ್ಮಿಕರನ್ನು ಈ ರೀತಿ ಬರ್ಬರವಾಗಿ ಏಕೆ ಶೋಷಿಸುತ್ತಾರೆ?

ದೇಶದ ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕರು ಬೀದಿಗಿಳಿದರೆ ಏನಾಗುತ್ತದೇ ಎಂಬುದನ್ನು ಉದಾರೀಕರಣ ತೀವ್ರ ನೀತಿಗಳು ಜಾರಿಯಾಗುವ ಈ ಸಂದರ್ಭದಲ್ಲಿ ಬೆಂಗಳೂರಿನ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಸಾಬೀತು ಪಡಿಸಿದ್ದಾರೆ. ಈ ಹೋರಾಟದಲ್ಲಿ 100 ಸುತ್ತು ಅಶ್ರುವಾಯು ಸಿಡಿತ, 2 ಸುತ್ತು ಗಾಳಿಯಲ್ಲಿ ಗೋಳೀಬಾರು, ಪುರುಷ ಪೊಲೀಸರೇ ಮಹಿಳೆಯರ ಮೇಲೆ ದಾಳಿ ಮಾಡುವ ಮುಖಾಂತರ ಪೊಲೀಸ ದರ್ಪವನ್ನು ಸಾಬೀತು ಮಾಡಲಾಗಿದೆ.



ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಆಸ್ಪತ್ರೆಗೆ ಬೇಟಿ ನೀಡಿ ಕಾರ್ಮಿಕರರೊಂದಿಗೆ ಚರ್ಚಿಸಿದರು

ಕಾರ್ಮಿಕರ ಆಕ್ರೋಶಕ್ಕೆ ತಲೆಬಾಗಿದ ಕೇಂದ್ರ ಸರ್ಕಾರ ಏಪ್ರಿಲ್ 19 ರಂದು ಸಾಯಂಕಾಲ 5 ಗಂಟೆಗೆ ಈ ಆದೇಶವನ್ನು ಆಗಸ್ಟ್ 1 ರ ತನಕ ಮುಂದೂಡಿದೆ ಎಂದು ಹೇಳಿತು. 7-30ಕ್ಕೆ ಈ ಆದೇಶವನ್ನು ಜಾರಿ ಮಾಡುವುದಿಲ್ಲ ಎಂದಿತು. 10 ಗಂಟೆಗೆ ಆದೇಶ ವಾಪಸ್ಸು ಮಾಡಲಾಗುವುದು ಎಂದು ಕೇಂದ್ರ ಕಾರ್ಮಿಕ ಮಂತ್ರಿಗಳಾದ ಬಂಡಾರು ದತ್ತಾತ್ರೇಯರವರು ಪ್ರಕಟಿಸಿದರು. ಇದು ಕಾರ್ಮಿಕರ ಬಂಡಾಯದಿಂದ ಪಡೆದ ಚಾರಿತ್ರಿಕ ಜಯ ಎಂದು ಮೇಲ್ನೋಟಕ್ಕೆ ಅನ್ನಿಸುತ್ತದೆ.

ಬಿಜೆಪಿ ರಾಜಕಾರಣ :

ದೇಶದಲ್ಲಿ 5 ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯುತ್ತಿರುವ ಸಂಧರ್ಭದಲ್ಲಿ ಬೆಂಗಳೂರಿನ ಈ ಹೋರಾಟ ಮತ್ತ ಹೆಚ್ಚು ಜನರಿಗೆ ಗೊತ್ತಿಲ್ಲದ ಈ ಆದೇಶ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂಬುದನ್ನು ಗ್ರಹಿಸಿದೆ. ಮಾತ್ರವಲ್ಲ ಈ ಕಾರ್ಮಿಕರು ಕೂಗುತ್ತಿದ್ದ ಘೋಷಣೆ 'ನರೇಂದ್ರ ಮೋದಿಗೆ ಧಿಕ್ಕಾರ', 'ಕೇಂದ್ರ ಸರ್ಕಾರಕ್ಕೆ ಸರ್ಕಾರಕ್ಕೆ ಧಿಕ್ಕಾರ', 'ಡಬ್ಬಲ್ ಪಿಎಫ್ ಬೇಕೆ ಬೇಕು', 'ಡಬ್ಬಲ್ ಪಿಎಫ್ ವಾಪಸ್ಸು ಪಡೆದ ನರೇಂದ್ರ ಮೋದಿಯವರಿಗೆ ಧಿಕ್ಕಾರ" ಎಂಬ ಘೋಷಣೆಗಳು.

ಅಭಿವೃದ್ಧಿಗಾಗಿ ಮೋದಿ ಎಂಬ ನೀರಿನ ಗುಳ್ಳೆಗಳಂತೆ ಎಬ್ಬಿಸುತ್ತಿರುವ ವಾದಗಳನ್ನೇ ಅಲುಗಾಡಿಸುವಂತಿದ್ದು. ಈ ಚಳುವಳಿಯ ತೀವ್ರತೆ ವಿಸ್ತರಣೆಯಾಗದಂತೆ ತಡೆಯಲು ಇಂದು ಕೇಂದ್ರ ಮಂತ್ರಿಗಳು ಆದೇಶ ವಾಪಸ್ಸು ಪಡೆದಿದ್ದಾರೆ.

ಈ ಚಳುವಳಿ ಇಂದಿನ ಸಂದರ್ಭದಲ್ಲಿ ಹೊಸ ಹಾದಿಯನ್ನು ಹಾಕಿಕೊಟ್ಟಿದೆ. ಈ ಹೊರಾಟದಿಂದ ದೇಶದ ಎಲ್ಲಾ ಪಿಎಫ್ ಅನ್ವಯಿತ ಕಾರ್ಮಿಕರಿಗೆ ಸಹಾಯವಾಗಿದೆ. ಮಾತ್ರವಲ್ಲ ದುಡಿಯುವ ವರ್ಗ ಐಕ್ಯವಾಗಿ ಚಳುವಳಿಗಿಳಿದರೆ ಅದರ ಪರಿಣಾಮದ ಬಗ್ಗೆ ಸಾಬೀತುಪಡಿಸಿದೆ.

ಈ ಚಳುವಳಿಯಲ್ಲಿ ಪಾಲ್ಗೊಂಡ ಪ್ರತಿಯೊಬ್ಬರಿಗೂ 'ಲಾಲ್ ಸಲಾಂ'!

ಕಾರ್ಮಿಕನ ದೃಷ್ಟಿ

ಕುವೆಂಪುರವರ ರೈತನ ದೃಷ್ಟಿ ಕವಿತೆ ಪ್ರೇರಣೆಯಿಂದ
(ಬೆಂಗಳೂರು ಗಾರ್ಮೆಂಟ್ಸ್ ಕಾರ್ಮಿಕರಿಗೆ ಅರ್ಪಣೆ)

ಕೇಂದ್ರ ಸರ್ಕಾರವೊ ರಾಜ್ಯ ಸರ್ಕಾರವೊ
ಯಾರಾದರೆ ಏನು?
ಸಾಮ್ರಾಜ್ಯ ವಾವಗಂ ಸುಲಿಗೆ ಕಾರ್ಮಿಕರಿಗೆ!
ಎಲ್ಲರೂ ಜಿಗಣೆಗಳೇ ನನ್ನ ನೆತ್ತರಿಗೆ!

ಕತ್ತಿ ಕೇಂದ್ರ ಸರ್ಕಾರದಾದ್ದರೆ ಮಾತ್ರ ನೋವೆ?
ರಾಜ್ಯ ಸರ್ಕಾರ ಹದ ಹಾಕಿ ತಿವಿದರೆ ಹೂವೆ?

ಹರಕೆ ಯಾರದು? ಹಬ್ಬವಾರಿಗೊ? ಅದಾವಗಂ
ಬಂಡವಾಳಷಾಹಿಗನಲ್ತೆ ಕುರಿ ಕೊಲೆಗೆ?
ಟೆಂಪರರಿಯಂತೆ, ಪರ್ಮನೆಂಟಂತೆ, ಟ್ರೇನಿಯಂತೆ,
ಸ್ಟ್ರೈಕಂತೆ, ಲಾಕೌಟಂತೆ, ವಿ ಆರ್ ಎಸ್ ಅಂತೆ
ಗರಗಸದಿಂದ
ಸೀಳುವರು ಬೆಲೆಗೆ ಸಾಕೆನಗೆ, ಸಾಕಯ್ಯ
ಬಂಡವಾಳಷಾಹಿ ಪೂಜೆ
ಸಿಡಿಮದ್ದಿನಕ್ಷತೆಗೆ ಗುಂಡು ಚರೆ ಲಾಜೆ.

ನನ್ನ ಬೆವರಿನ ಮೇಲಾಣೆ, ನನ್ನ ಕೌಶಲ್ಯದ
ಮೇಲಾಣೆ ನೆತ್ತರಿಲ್ಲದೆ ಸುಕ್ಕೆ ಸೊರಗಿದೆನ್ನಾಣೆ
ಬಂಡವಾಳಷಾಹಿ ಮೋಹಿನಿಯ ರೂಪಕ್ಕೆ
ಮರುಳಾಗನೆಂದಿಗೂ, ಮಾರ್ಕ್ಸನ ಮೇಲಾಣೆ,
ಲೋಹಿಯಾ ಮೇಲಾಣೆ,

ಬಡ ಕಾರ್ಮಿಕನ ಭವಿಷ್ಯ ನಿಧಿಯ ಹೀರಿ
ಹಿಡಿಸದೋ ಬಂಡವಾಳಷಾಹಿ ಸಿರಿಯ ಕಸ್ತೂರಿ

– ಜಿ.ಟಿ.ನರೇಂದ್ರ ಕುಮಾರ್
20-4-2016

ಗಾರ್ಮೆಂಟ್ ಹುಡುಗಿ ಹೊಲಿದ ಚೆಂದದ ಪೋಷಾಕು

– ಡಾ ಸಬಿತಾ ಬನ್ನಾಡಿ
(ಕೃಪೆ: ಅವಧಿ)

ಎಂಟು ವರ್ಷಗಳ ಹಿಂದಿನ ಮಾತು.

ಕುಪ್ಪಳಿಯಲ್ಲಿ ಲೇಖಕಿಯರು ಮತ್ತು ಚಳುವಳಿಗಾರ್ತಿಯರನ್ನು ಕಲೆಹಾಕಿ ಬೆಂಗಳೂರಿನ 'ನಮ್ಮ ಮಾನಸ' ಪತ್ರಿಕೆಯವರು ಕಮ್ಮಟವೊಂದನ್ನು ಆಯೋಜಿಸಿದ್ದರು. ಅಲ್ಲಿ ಕಾಂ. ವರಲಕ್ಷ್ಮಿ ಗಾರ್ಮೆಂಟ್ ನಲ್ಲಿ ದುಡಿಯುವ ಮಹಿಳೆಯರ ಸಂಕಷ್ಟಗಳನ್ನು ಒಂದೊಂದಾಗಿ ತೆರೆದಿಡತೊಡಗಿದರು. ಅದೇ ಕಮ್ಮಟದಲ್ಲಿ ಇದ್ದ ಗಾರ್ಮೆಂಟ್ ನೌಕರಳೊಬ್ಬಳು (ಹೆಸರು ಮರೆತಿದ್ದಕ್ಕೆ ಕ್ಷಮಿಸಿ ಬಿಡಮ್ಮಾ) ತಮ್ಮ ಹೋರಾಟಗಳನ್ನು, ಅದರ ಪಡಿಪಾಟಲುಗಳನ್ನು ತನ್ನ ಹೃದಯವನ್ನೇ ನಮ್ಮ ಕೈಗೆ ಕೊಟ್ಟಂತೆ ನಿವೇದಿಸಿಕೊಂಡಳು.


ನಾನು ಅಚ್ಚರಿ ಮತ್ತು ನೋವಿನಿಂದ ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದೆ. ಇದೆಲ್ಲಾ ಆದ ಮೇಲೆ ನಾನು ಮಹಿಳಾ ಕಾವ್ಯದ ಮೇಲೆ ಮಾತಾಡಬೇಕಿತ್ತು! ನಾನು ಮಾತಾಡಲೇ ಬೇಕಿತ್ತಾದ್ದರಿಂದ ಮಾತಾಡಿದೆ. ಆದರೆ ಆಶ್ಚರ್ಯವೆಂದರೆ ಅವರೆಲ್ಲರೂ ಆ ಮಾತುಗಳನ್ನು ಉತ್ಸಾಹದಿಂದ ಕೇಳಿಸಿಕೊಂಡರು. ಸಂಜೆ ಕವಿಮನೆ ಕಡೆ ವಾಕಿಂಗ್ ಹೊರಟಾಗ ಆ ಗಾರ್ಮೆಂಟ್ ನೌಕರ ಹುಡುಗಿ ನನ್ನೊಂದಿಗೆ ಹೆಜ್ಜೆಹಾಕಿದಳು. ನಾನು ಇನ್ನಷ್ಟು ಅವಳ ಕತೆ ಕೇಳಿಸಿಕೊಂಡೆ. ಆಗ ಇದ್ದಕ್ಕಿದ್ದಂತೆ ಆ ಹುಡುಗಿ, ಮೇಡಂ, 'ನೀವು ಚೆನ್ನಾಗಿ ಮಾತಾಡ್ತೀರಿ. ನಿಮಗೆ ಗೊತ್ತಿರ್ಲಿಕ್ಕಿಲ್ಲ, ನಿಮ್ಮ ಮಾತಿನ ಪರಿಣಾಮ ಏನು ಅಂತ. ನಮ್ಮಂತವರು ನಮ್ಮ ಅನುಭವ ಹೇಳಬಹುದು. ಆದರೆ ನಿಮ್ಮಂತವರ ಥರ ಮನಸ್ಸು ಮುಟ್ಟುವ ಹಾಗೆ ಹೇಳೋದಕ್ಕೆ ಆಗುವುದಿಲ್ಲ. ನೀವು ನಮ್ಮ ಪರವಾಗಿ ಮಾತಾಡಿದರೆ ನಮಗೆಲ್ಲಾ ಉಪಕಾರ ಆಗುತ್ತೆ' ಅಂದಳು. ನನಗೆ ಏನು ಹೇಳಬೇಕೆಂದೇ ಗೊತ್ತಾಗಲಿಲ್ಲ.

ಅಲ್ಲಿಂದ ಮನೆಗೆ ಬಂದ ಮೇಲೆ ಮೂರು ದಿನಗಳ ಕಾಲ ನನಗೆ ಈ ಮಾತುಗಳೇ ಹಗಲಿರುಳು ಕಾಡತೊಡಗಿತು. ನಾನು ಅವರಿಗಾಗಿ ಏನು ಮಾಡಲಿ? ನಾನು ಅವರೊಂದಿಗೆ ಚಳುವಳಿಯಲ್ಲಿ ಸೇರಲಾಗುವುದಿಲ್ಲ ಎಂಬುದು ನನಗೆ ತಿಳಿದಿದೆ. ಆದರೆ ನನ್ನ ಬೆಂಬಲವನ್ನು ಅವರಿಗೆ ಹೇಗಾದರೂ ಕೊಡಬೇಕು, ಏನಾದರೂ ಮಾಡಬೇಕು ಅನ್ನಿಸಿತು. ಅದು ನನ್ನಿಂದ ಕವನವೊಂದನ್ನು ಬರೆಸಿತು. ಇದನ್ನು ವೈಯಕ್ತಿಕವಾಗಿ ಕೆಲವರಿಗೆ ತೋರಿಸಿದಾಗ ಅಷ್ಟೇನೂ ಒಳ್ಳೆಯ ಪ್ರತಿಕ್ರಿಯೆ ಬರಲಿಲ್ಲ. ನಾನು 'ನಮ್ಮ ಮಾನಸ'ಕ್ಕೆ ಕಳಿಸಿದೆ.

ಅಲ್ಲಿಂದ ಅದನ್ನು ಮಾಧವಿ ಭಂಡಾರಿ, ಸಬೀಹಾ ಭೂಮಿಗೌಡ ಹೀಗೆ ಬೇರೆ ಬೇರೆಯವರು ಎತ್ತಿಕೊಂಡರು. ಒಂದು ದಿನ ಅದು ಗಾರ್ಮೆಂಟ್ ನೌಕರರ ಪತ್ರಿಕೆ 'ಸೂಜಿ ದಾರ'ದಲ್ಲಿ ಪ್ರಕಟವಾಯಿತು. ಅದರಲ್ಲಿ ಅವರು ತಮ್ಮದೇ ಅನುಭವಕ್ಕೆ ಧ್ವನಿ ಕೊಟ್ಟಿದ್ದಕ್ಕೆ ಕೃತಜ್ಞತೆ ಬೇರೆ ತಿಳಿಸಿದ್ದರು.

ಹೀಗೆ ಕೊನೆಯ ಪಕ್ಷ ತಮ್ಮೆಡೆಗೆ ಜನ ಗಮನ ಹರಿಸಿದರೂ ಸಾಕು ಎಂಬಂತೆ ಸೊಪ್ಪಾದ ಜನ ಅವರು. ಅವರ ಪುಡಿಗಾಸು ಕೂಡ ಅವರಿಗೇ ಸಿಗದಂತೆ ಮಾಡುವ ನಮ್ಮ ರಾಕ್ಷಸತನಕ್ಕೆ ಒಂದು ಮಿತಿ ಬೇಡವೇ? ಒಮ್ಮೇಲೇ ಭುಗಿಲೆದ್ದು ಹೋರಾಡಿ ಒಂದು ಗೆಲುವು ಪಡೆದಿದ್ದೀರಿ. ನಿಮ್ಮ ಹೋರಾಟದ ಹಾದಿ ಇನ್ನೂ ದೂರ ಇದೆ ಎಂಬುದನ್ನು ಹೇಳುವ ಪ್ರಯತ್ನವಾಗಿ ಈ ಕವಿತೆ ಇದೆ. ನಿಮ್ಮ ಹೋರಾಟಕ್ಕೆ ನಮ್ಮ ಬೆಂಬಲ ಇದೆ ಗೆಳೆಯರೇ.

ಗಾರ್ಮೆಂಟ್ ಹುಡುಗಿಯ ಅನುಭವಕ್ಕೆ ದನಿ ನೀಡಿ 10/06/2008 ರಲ್ಲಿ ನಾನು ಬರೆದ ಕವಿತೆ ಅವರಿಗೆ ಸಾಥ್ ನೀಡುವುದಕ್ಕಾಗಿ ಮತ್ತೊಮ್ಮೆ : ●



ಗಾರ್ಮೆಂಟ್ ಹುಡುಗಿ ಹೊಲಿದ ಚೆಂದದ ಪೋಷಾಕು

ಬಟ್ಟೆಯ ಕತ್ತರಿಸುವ ಕತ್ತರಿ
ಅವಳ ಕನಸುಗಳ ಕತ್ತರಿಸುತ್ತದೆ
ಜೋಡಿಸಿ ಹೊಲಿವ ಕೈಗಳು
ಮತ್ತೊಂದು ಕನಸ ಹೊಲಿಯುತ್ತದೆ

ಮೇಲ್ವಿಚಾರಕನ ಸೂಜಿಗಣ್ಣು
ಅವಳು ಕತ್ತೆತ್ತದಂತೆ ಚುಚ್ಚುತ್ತದೆ
ಅರೆಹೊಟ್ಟೆಯ ನಿಶ್ಶಕ್ತಕಾಲು
ಸೆಟೆದುಕೊಳದಂತೆ
ವೇಗವಾಗಿ ತುಳಿಯುತ್ತದೆ

ಒತ್ತರಿಸಿ ಬರುವ ಬಾಯಾರಿಕೆಯೂ
ಜಿಪ್ ಏರಿಸಿದೆ
ಜಲಬಾಧೆ ತೀರಿಸಿಕೊಳಲೂ
ಬೇಕು ಒಪ್ಪಿಗೆಯ ಪತ್ರ
ನೀರೆಲ್ಲ ನಿರಿಗೆಯಾಗಿ
ಪೋಷಾಕು ಸಿಂಗಾರಗೊಳುತ್ತದೆ.

ಎಳೆಹಸುಳೆಯ ತಾಯಂದಿರು
ಹಾಲುಣಿಸಲು ಹಂಬಲಿಸಿದರೆ
ನಾಳಿನ ಪಾಳಿಯ ಸೂರಿಲ್ಲ
ಸೋರಿ ಹೋಗುವ ಎದೆಹಾಲು
ಬೆಳ್ಳನೆ ಲೇಸ್ಗಳಾಗಿ
ಕತ್ತಸುತ್ತ ಚೆಲುವ ಬಲೆಯಾಗಿಸುತ್ತಾಳೆ.

ದಿನದ ಟಾರ್ಗೆಟ್ ಮುಗಿಸಿ
ನಿಟ್ಟುಸಿರಿಡಲು ಕಾತರಿಸುತ್ತಾಳೆ
ಮೇಲ್ವಿಚಾರಕನ ಹದ್ದಿನ ಕಣ್ಣಿಗೆ
ತೋಳದ ದಾಹ
ನಿಮಿರಿದ ಮೈಮುಳ್ಳುಗಳ
ದುಂಡಗಾಗಿಸಿ ಬಟನ್ ಗಳ
ಪೋಣಿಸುತ್ತಾಳೆ

ಹೃದಯ ಮೊಂಬತ್ತಿಯಾಗಿ
ಉರಿಯುತ್ತಿದೆ
ಕಪ್ಪು ಮಸಿಯ ಮೇಲೆ ರಕ್ತಗೆಂಪಿನ
ಚಿತ್ತಾರದ ಅಂಗಿ ರಟ್ಟಿನ ಪೆಟ್ಟಿಗೆಯಲಿ
ಬೆಚ್ಚಗೆ ಗಡಿದಾಟಿದೆ

ಮನೆಗೆ ತೆರಳುವ ಹಾದಿಯಲಿ ಅತ್ತು
ಕಪ್ಪಾದ ಆಗಸದ ಬಟ್ಟೆ
ಹರಿದು ಚುಕ್ಕೆಯಂತೆ ಚೂರಾಗಿದೆ.
ನಾಳೆ ಅವುಗಳನೆಲ್ಲಾ ಹೊಲಿದು
ಒಗೆದು ನೀಲಿ ಹಾಕಿ ಒಣಹಾಕಲು
ಅವಳು ತಯಾರಿ ನಡೆಸುತ್ತಾಳೆ.

ಬಟ್ಟೆಯ ಕತ್ತರಿಸುವ ಕತ್ತರಿ
ಅವಳ ಕನಸುಗಳನ್ನು ಕತ್ತರಿಸುತ್ತವೆ
ಜೋಡಿಸಿ ಹೊಲಿವ ಕೈಗಳು
ಮತ್ತೊಂದು ಕನಸನ್ನು ಹೊಲಿಯುತ್ತವೆ. ●

ನೌಕರರ ಭವಿಷ್ಯ ನಿಧಿ ತಿದ್ದುಪಡಿಗಳು: ಸರಕಾರ ಪಾಠ ಕಲಿಯಬೇಕು–ಸಿಐಟಿಯು

ನೌಕರರು ತಮ್ಮ ಭವಿಷ್ಯ ನಿಧಿಯಿಂದ ಹಣವನ್ನು ಹಿಂತೆಗೆದುಕೊಳ್ಳುವ ನಿಯಮಗಳನ್ನು ತಿದ್ದುಪಡಿ ಮಾಡಿ ಹೊರಡಿಸಿರುವ ಅಧಿಸೂಚನೆಯನ್ನು ಸರಕಾರ ಹಿಂತೆಗೆದು ಕೊಳ್ಳಬೇಕಾಗಿ ಬಂದಿದೆ. ಈ ವಿಷಯದಲ್ಲಿ ನೌಕರರ ಭವಿಷ್ಯ ನಿಧಿ ಸಂಘಟನೆ(ಇಪಿಎಫ್ಒ)ಯ ಕೇಂದ್ರೀಯ ಟ್ರಸ್ಟಿಗಳ ಮಂಡಳಿಯಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಅವುಗಳ ಪ್ರತಿನಿಧಿಗಳ ಮಾತನ್ನು ಕೇಳಲು ಕೂಡ ಸರಕಾರ ಸಿದ್ಧವಿರಲಿಲ್ಲ. ಈಗ ದೇಶದ ವಿವಿಧ ಭಾಗಗಳಲ್ಲಿ, ಅದರಲ್ಲೂ ಬೆಂಗಳೂರು ಮತ್ತು ವಿಶಾಖಪಟ್ಟಣದಲ್ಲಿ ಕಾರ್ಮಿಕರ ಪ್ರತಿಭಟನೆಗಳಿಂದಾಗಿ ಆ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕಾಗಿ ಬಂದಿದೆ. ಇದರಿಂದ ಸರಕಾರ ಪಾಟ ಕಲಿಯಬೇಕಾಗಿದೆ ಎಂದು ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಹೇಳಿದೆ.

ಕಳೆದ ವರ್ಷದ ಕೇಂದ್ರ ಬಜೆಟಿನಲ್ಲಿ ಸರಕಾರ ಇಪಿಎಫ್ಒದಲ್ಲಿ ಪಾವತಿ ಮಾಡಲು ಯಾರೂ ಕೇಳಿಲ್ಲ ಎನ್ನಲಾದ ಹಣವನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಸ್ತಾವವನ್ನು ಇಟ್ಟಿತ್ತು. ಈ ವರ್ಷದ ಬಜೆಟಿನಲ್ಲಿ ಇಪಿಎಫ್ಒ ವಂತಿಗೆಗಳ ಮೇಲೆ ತೆರಿಗೆ ಹಾಕುವ ಪ್ರಸ್ತಾವವನ್ನು ಇಟ್ಟಿತು. ದೇಶದ ಹಲವೆಡೆ ಇದಕ್ಕೆ ವ್ಯಕ್ತಗೊಂಡ ಭಾರೀ ಪ್ರತಿಭಟನೆಗಳನ್ನು ನೋಡಿ ಈ ಪ್ರಸ್ತಾವವನ್ನು ಹಿಂತೆಗೆದು ಕೊಂಡಿತು ಎಂಬುದನ್ನು ನೆನಪಿಸಿರುವ ಸಿಐಟಿಯು ಇವೆಲ್ಲ ನೌಕರರ ಭವಿಷ್ಯ ನಿಧಿ ಎಂಬುದನ್ನೇ ಕಳಚಿ ಹಾಕುವ ಸರಕಾರದ ಧೋರಣೆಯ ಭಾಗವಾಗಿರುವ ಕ್ರಮಗಳು ಎಂದು ಅಭಿಪ್ರಾಯ ಪಟ್ಟಿದೆ.

ಮಾರ್ಚ್ 29, 2016 ರಂದು ನಡೆದ ಕೇಂದ್ರೀಯ ಟ್ರಸ್ಟಿಗಳ ಮಂಡಳಿಯ ಸಭೆಯಲ್ಲಿ ಎಲ್ಲ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಈ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕು, ಇಲ್ಲವೇ ನೌಕರರಿಗೆ ತಮ್ಮ ಹಣವನ್ನು ಹಿಂತೆಗೆದುಕೊಳ್ಳುವ ಅಥವ ಇಪಿಎಫ್ಒದಲ್ಲೇ ಮುಂದುವರೆಸುವುದರ ಬಗ್ಗೆ ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಬೇಕು ಎಂದು ಆಗ್ರಹಿಸಿದ್ದರು. ಅದನ್ನು ಮರೆಮಾಚಿ ಈಗ ಸರಕಾರ ಫೆಬ್ರುವರಿ 10ರ ತಿದ್ದುಪಡಿಗಳನ್ನು ಕೆಲವು ಕಾರ್ಮಿಕ ಸಂಘಗಳೇ ಸೂಚಿಸಿದ ಪ್ರಕಾರ ಮಾಡಲಾಯಿತು ಎಂದು ಜನರಲ್ಲಿ ತಪ್ಪು ಭಾವನೆ ಉಂಟುಮಾಡುವ ಪ್ರಯತ್ನ ನಡೆಸಿದೆ ಎಂದು ಸಿಐಟಿಯು ಟೀಕಿಸಿದೆ.

ಭವಿಷ್ಯ ನಿಧಿ ಖಾತೆಯಿಂದ ಅಂತಿಮವಾಗಿ ಹಣ ತೆಗೆದುಕೊಳ್ಳಲು ಬಿಡದಿರುವುದು ಕಾರ್ಮಿಕರಿಗೆ ಹಲವು ತೊಂದರೆಗಳನ್ನು ಉಂಟು ಮಾಡುತ್ತದೆ, ಅದರಲ್ಲೂ ಯಾವುದೇ ಉದ್ಯೋಗ ಭದ್ರತೆ ಮತ್ತು ಕಾನೂನುಬದ್ಧ ಸೌಲಭ್ಯಗಳಿಲ್ಲದ ಉದ್ಯೋಗಗಳಲ್ಲಿ– ಗಾರ್ಮೆಂಟ್ ವಲಯದಲ್ಲಿ ಆಕ್ರೋಶ ಭುಗಿಲೇಳಲು ಇದೇ ಕಾರಣ.

ಸರಕಾರ ಈ ಬೇಡದ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವಂತೆ ಮಾಡಿರುವ ಕಾರ್ಮಿಕರನ್ನು ಸಿಐಟಿಯು ಅಭಿನಂದಿಸಿದೆ. ಕಾರ್ಮಿಕರ ಮೇಲೆ ಯಾವುದೇ ರೀತಿಯ ಪರಿಣಾಮ ಬೀರುವ ಯಾವುದೇ ಧೋರಣೆಯನ್ನು ಅಂಗೀಕರಿಸುವ ಮೊದಲು ಕಾರ್ಮಿಕ ಸಂಘಗಳೊಡನೆ ಸರಿಯಾದ ಸಮಾಲೋಚನೆ ನಡೆಸಬೇಕು ಎಂಬ ಬೇಡಿಕೆಯನ್ನು ಈ ಹಿನ್ನೆಲೆಯಲ್ಲಿ ಸಿಐಟಿಯು ಪುನರುಚ್ಚರಿಸಿದೆ. ●

ಬೆಂಗಳೂರಿನಲ್ಲಿ ಕಾರ್ಮಿಕರ ಪ್ರತಿಭಟನೆ – ಸಿಪಿಐ(ಎಂ) ಬೆಂಬಲ

ಕಾರ್ಮಿಕರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಭವಿಷ್ಯನಿಧಿ ನಿಯಮಗಳಿಗೆ ಕೇಂದ್ರ ಸರ್ಕಾರ ತಿದ್ದುಪಡಿ ಮಾಡಿರುವುದನ್ನು ಸಿಪಿಐ(ಎಂ) ರಾಜ್ಯ ಸಮಿತಿ ಖಂಡಿಸುತ್ತದೆ. ಹಾಗೂ ಹಳೆಯ ನಿಯಮಗಳನ್ನೇ ಪುನಃ ಊರ್ಜಿತಗೊಳಿಸುವಂತೆ ಒತ್ತಾಯಿಸುತ್ತಿರುವ ಹೋರಾಟನಿರತ ಕಾರ್ಮಿಕರನ್ನು ಬೆಂಬಲಿಸುತ್ತದೆ.

ಸಿದ್ಧಉಡುಪು ಕಾರ್ಮಿಕರ ಸ್ವಯಂ ಪ್ರೇರಿತ ಪ್ರತಿಭಟನೆ ಕಳೆದ ಎರಡು ದಿನಗಳಿಂದ ಬೊಮ್ಮಸಂದ್ರ ಮತ್ತು ಮದ್ದೂರು ಪ್ರದೇಶಗಳಲ್ಲಿ ನಡೆದಿದೆ. ಕೇಂದ್ರ ಸರ್ಕಾರದ ಕ್ರಮ ತಕ್ಷಣದಿಂದಲೇ ಈ ಯುವ ಮಹಿಳಾ ಕಾರ್ಮಿಕರನ್ನು ಹಾನಿಗೊಳಪಡಿಸುತ್ತದೆ. ಸಾಮಾನ್ಯವಾಗಿ ಅವರು ವಿವಾಹದ ನಂತರ ಉದ್ಯೋಗವನ್ನು ತ್ಯಜಿಸುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ತೀವ್ರವಾದ ಶೋಷಣೆಯಿಂದಾಗಿ ಅವರು ಬೇಗನೇ ಉದ್ಯೋಗ ತ್ಯಜಿಸುತ್ತಾರೆ.


ಭವಿಷ್ಯ ನಿಧಿಯಲ್ಲಿ ಮಾಲೀಕರ ದೇಣಿಗೆ ಕಾರ್ಮಿಕರಿಗೆ ಪಾವತಿಯಾಗುವುದನ್ನು ಅವರಿಗೆ ನಿವೃತ್ತಿಯ ಅಂದರೆ 58ವರ್ಷ ವಯಸ್ಸಾಗುವವರೆಗೂ ತಡೆಹಿಡಿಯುವುದು, ಈ ಕಾರ್ಮಿಕರಿಗೆ ಮಾರಕವಾಗಿ ಪರಿಣಮಿಸಲಿದೆ.

ಇತರ ಕಾರ್ಮಿಕರೂ ಸಹ ಈ ಸಮಸ್ಯೆಯನ್ನು ಕೈಗೆತ್ತಿಕೊಳ್ಳುತ್ತಿದ್ದು, ಹೋರಾಟದ ಅಲೆಗಳು ಬೆಂಗಳೂರಿನ ಇತರೆ ಪ್ರದೇಶಗಳಿಗೂ ವ್ಯಾಪಿಸುತ್ತಿವೆ.

ಮೋದಿ ಸರ್ಕಾರ ಕಾರ್ಮಿಕರ ಪ್ರತಿಭಟನೆಯಿಂದ ಈ ಆದೇಶವನ್ನು ತಡೆಹಿಡಿಯಬೇಕಾಗಿ ಬಂದಿದೆ. ಮಾತ್ರವಲ್ಲ ಕಾರ್ಮಿಕ ಕಾನೂನುಗಳ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ಕೈಬಿಡಬೇಕಾಗಿದೆ. ಇದಕ್ಕಾಗಿ ಸಪ್ಟೆಂಬರ್ 2, 2016ರಂದು ಅಖಿಲ ಭಾರತ ಮುಷ್ಕರವನ್ನು ಆಯೋಜಿಸಲಾಗಿದೆ. ಸಿಪಿಐ(ಎಂ) ಪಕ್ಷವು ಈ ಹೋರಾಟವನ್ನು ಯಶಸ್ವಿಗೊಳಿಸಿ ದೇಶಾದ್ಯಂತ ಕಾರ್ಮಿಕರಿಗೆ ಲಾಭಮಾಡಿಕೊಟ್ಟ ಬೆಂಗಳೂರಿನ ಕಾರ್ಮಿಕರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಕರ್ನಾಟಕ ಸರ್ಕಾರ ಈ ಹೋರಾಟದ ಗಂಭೀರತೆಯನ್ನು ಮನಗಂಡು ಕನಿಷ್ಟ ಕೂಲಿ ಸಲಹಾ ಸಮಿತಿ ಶಿಫಾರಸು ಮಾಡಿರುವ ಕನಿಷ್ಟ ಕೂಲಿಯನ್ನು ನಿಗದಿಪಡಿಸುವಲ್ಲಿ ತನ್ನ ಕಾರ್ಮಿಕ ವಿರೋಧಿ ಧೋರಣೆಯನ್ನು ಕೈಬಿಡಬೇಕು.

ಹೋರಾಟಗಾರರ ಮೇಲಿನ ಪೋಲೀಸ್ ದೌರ್ಜನ್ಯವನ್ನು ಸಿಪಿಐ(ಎಂ) ಖಂಡಿಸುತ್ತದೆ. ಸಾರ್ವಜನಿಕ ಆಸ್ತಿಯನ್ನು ಹಾನಿಗೊಳಿಸದಂತೆ ಎಚ್ಚರವಹಿಸಬೇಕು ಎಂದು ಕಾರ್ಮಿಕರಿಗೆ ಕರೆ ನೀಡುತ್ತದೆ. ●



ಕ್ಯಾಸ್ಟ್ರೋ ಕಥೆ-9

ವಿಫಲವಾದ ಮೊಂಕಾಡಾ ದಾಳಿ

ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

ಹವಾನಾದಿಂದ ಬಂದವರನ್ನೆಲ್ಲಾ ಮೊದಲಿಗೆ ಸ್ಯಾಂಟಿಯಾಗೊದ ಅತಿಥಿ ಗೃಹಗಳಲ್ಲಿ ಉಳಿಸಲಾಗಿತ್ತು. ಅವರು ಬಂದಿದ್ದ ಕಾರುಗಳನ್ನು ಸಿಬೋನಿ ಫಾರ್ಮ್‌ನಲ್ಲಿ ಅಡಗಿಸಿಡಲಾಗಿತ್ತು. ಶಸ್ತ್ರಾಸ್ತ್ರಗಳನ್ನು ಫಾರ್ಮ್‌ನಲ್ಲಿದ್ದ ಬಾವಿಯಲ್ಲಿ ಇಡಲಾಗಿತ್ತು. ಮತ್ತು ಹೆಚ್ಚಿನ ಶಸ್ತ್ರಾಸ್ತ್ರಗಳು ಹವಾನಾದಿಂದ ದಾಳಿಗಿಂತ ಕೊಂಚ ಮೊದಲು ಬರುವಂತೆ ಯೋಜಿಸಲಾಗಿತ್ತು. ಇವುಗಳಲ್ಲಿ ಬೆಲ್ಜಿಯಂ ಶಾಟ್‌ಗನ್‌ಗಳು, ಅಮೇರಿಕನ್ ಸೆಮಿ-ಆಟೊಮ್ಯಾಟಿಕ್ ಒ_೧ ಹಗುರ ರೈಫಲ್‌ಗಳು ಮತ್ತು ಬೋಲ್ಟ್-ಆಕ್ಷನ್ ಸ್ಪ್ರಿಂಗ್‌ಫೀಲ್ಡ್‌ಗಳು, .45 ಕ್ಯಾಲಿಬರ್ ಥಾಂಪ್ಸನ್ ಸಬ್‌ಮೆಷೀನ್‌ಗನ್, ಮುಂತಾದ ಶಸ್ತ್ರಗಳನ್ನು ಕಲೆಹಾಕಿದ್ದರು. ಇವುಗಳಲ್ಲಿ 9 ಶಾಟ್‌ಗಳ ತೋಟಾ ಹೊಂದಿದ್ದ ಬೆಲ್ಜಿಯಂ ಶಾಟ್‌ಗನ್‌ಗಳನ್ನು ಹೆಚ್ಚು ಇಷ್ಟಪಡುತ್ತಿದ್ದರು. ಕೆಲವೇ ಸೆಕೆಂಡುಗಳಲ್ಲಿ ಐದು ತೋಟಾಗಳನ್ನು ಇದರಲ್ಲಿ ಬಳಸಬಹುದಾಗಿತ್ತು. ಮತ್ತು ಒಂದು ಶಾಟ್‌ನಿಂದ 9 ಗುಂಡುಗಳನ್ನು ಹಾರಿಸಬಹುದಾಗಿತ್ತು. ಹತ್ತಿರದಿಂದ ದಾಳಿ ಮಾಡುವಾಗ ಮೆಷೀನ್‌ಗನ್‌ಗಳಿಗಿಂತ ಇದು ಅನುಕೂಲಕರವಾಗಿತ್ತು. ಬಹುತೇಕ ಈ ಆಯುಧಗಳನ್ನು ಹವಾನಾ ಮತ್ತು ಸ್ಯಾಂಟಿಯಾಗೋದ ಬಂದೂಕು ಅಂಗಡಿಗಳಿಂದ ಖರೀದಿಸಿದ್ದರು. ಮೊಂಕಾಡಾ ಬ್ಯಾರಕ್‌ನಲ್ಲಿ 1500 ಬಟಿಸ್ಟಾ ಸೈನಿಕರಿದ್ದರು. ಮೊದಲೇ ಯೋಜಿಸಿದ ಹಾಗೆ 120 ಜನ ದಾಳಿ ನಡೆಸಲು ಸಜ್ಜಾದರು. ಇವರೆಲ್ಲರೂ ಬಟಿಸ್ಟಾ ಸೈನ್ಯದ ಸಾರ್ಜೆಂಟ್ ಹಂತದ ಸೈನಿಕರ ಯೂನಿಫಾರಂಗಳನ್ನು ಧರಿಸಿದ್ದರು. ಈ ಬಟ್ಟೆಗಳಲ್ಲಿ ಹೆಚ್ಚಿನವನ್ನು ಫಿಡೆಲ್‌ನ ಮನುಷ್ಯನೊಬ್ಬ ಹವಾನಾದ ಮುಖ್ಯ ಬ್ಯಾರಕ್‌ಗಳಿಂದ ಕದ್ದು ತಂದಿದ್ದ. ಇವೆಲ್ಲವನ್ನೂ ಸಂಘಟಿಸುವಾಗ ನಿರೀಕ್ಷೆ ಮಾಡದ ಮೂಲಗಳಿಂದೆಲ್ಲಾ ಸಹಾಯ ಹರಿದು ಬರುತ್ತದೆ ಎಂದು ಫಿಡೆಲ್ ನೆನಪಿಸಿಕೊಳ್ಳುತ್ತಾರೆ. 25ರ ರಾತ್ರಿ ಎಲ್ಲರೂ ಸಿಬೋನಿ ಫಾರ್ಮ್‌ನಲ್ಲಿ ಸೇರಿದರು. ಅಲ್ಲಿ ಅವರಿಗೆ ಮಾಡಬೇಕಾದ ಕೆಲಸಗಳ ನಿರ್ದೇಶನ ನೀಡಲಾಯಿತು.

ಮೂರು ಗುಂಪುಗಳು

ಫಿಡೆಲ್ ತಮ್ಮ ಬಳಿಯಿದ್ದ 120 ಜನರನ್ನು ಮೂರು ಗುಂಪುಗಳಾಗಿ ವಿಭಜಿಸಿದರು. ಇದರಲ್ಲಿ ಐದು ಜನ ವಿವಿ ವಿದ್ಯಾರ್ಥಿಗಳು ಹಿಂದೆ ಸರಿದರು. ಉಳಿದವರ ಪೈಕಿ ಒಂದು ಗುಂಪು ಬ್ಯಾರಕ್‌ಗಳ ಹಿಂದಿದ್ದ ಆಸ್ಪತ್ರೆಯನ್ನು ವಶಪಡಿಸಿಕೊಳ್ಳುವುದು. ಅದಕ್ಕಾಗಿ ತಂಡದ ಎರಡನೇ ಸ್ಥಾನದಲ್ಲಿದ್ದ ಅತ್ಯಂತ ಬುದ್ಧಿವಂತ ಹುಡುಗ ಅಬೆಲ್‌ನನ್ನು ನಿಯೋಜಿಸಲಾಯಿತು. ಜೊತೆಗೆ ಮೆಲ್ಬಾ ಹರ್ನಾಂದೇಜ್ ಮತ್ತು ಹೇದೀ ಸಂತಮೇರಿಯಾ ಎಂಬ ಹುಡುಗಿಯರನ್ನು ಮತ್ತು ಡಾ|ಮರಿಯೋ ಮುನೋಜ್ ಇವರನ್ನು ಕಳುಹಿಸಲಾಯಿತು. ಈ ಗುಂಪಿನಲ್ಲಿ ಗಾಯಾಳುಗಳಾದವರಿಗೆ ಚಿಕಿತ್ಸೆ ನೀಡಲು ಇಂತಹ ಯೋಜನೆ ರೂಪಿಸಲಾಯಿತು. ಎರಡನೇ ತಂಡವು ಆಡೆನ್ಸಿಯಾ ಕಟ್ಟಡ, ಪೆಲೇಶಿಯೋ ಡಿ ಜಸ್ಟೀಷಿಯಾ ಬಹುಮಹಡಿ ಕಟ್ಟಡಗಳನ್ನು ವಶಪಡಿಸಿಕೊಳ್ಳಲು ತೀರ್ಮಾನಿಸಲಾಯಿತು. 90 ಜನರ ಮೂರನೇ ಗುಂಪು ಫಿಡೆಲ್ ನೇತೃತ್ವದಲ್ಲಿ ಗಾರ್ಡ್ ಪೋಸ್ಟ್, ಜನರಲ್ ಸ್ಟಾಫ್ ಕಛೇರಿಗಳು ಮತ್ತು ಬ್ಯಾರಕ್‌ಗಳನ್ನು ವಶಪಡಿಸಿಕೊಳ್ಳುವ ತೀರ್ಮಾನವನ್ನು ವಿವರಿಸಲಾಯಿತು.

ಗಾಢನಿದ್ರೆಯಲ್ಲಿರುವ ಬಟಿಸ್ಟಾನ ಸೈನಿಕರನ್ನು ಅವರ ಶಯನಗೃಹಗಳ ಹಿಂದಿನ ಭಾಗಕ್ಕೆ ನೂಕುವುದು. ಅವರಿಗೆ ಬಟ್ಟೆ ಧರಿಸಲೂ ಕೂಡಾ ಅವಕಾಶ ಕೊಡದಂತೆ ಕಾರ್ಯನಿರ್ವಹಿಸುವುದು. ಅವರೆಲ್ಲರನ್ನೂ ಹಿಂಬದಿಯಲ್ಲಿ ನಿಭಾಯಿಸುತ್ತಲೇ ಶಸ್ತ್ರಾಶ್ತ್ರಗಳನ್ನು ವಶಪಡಿಸಿಕೊಳ್ಳುವುದು. ಇವೆಲ್ಲವೂ ಬೆಳಕು ಹರಿಯುವ ಮೊದಲೇ ನಸುಕಿನ ಜಾವದಲ್ಲಿ ನಡೆದು ಹೋಗುವಂತೆ ಯೋಜಿಸಲಾಗಿತ್ತು. ಯೋಜನೆಯಂತೆ ಮುಂಜಾನೆ 4.45 ಗಂಟೆಗೆ ಸಿಬೋನಿ ಫಾರ್ಮ್‌ನಿಂದ ಹೊರಟು 5.15 ಕ್ಕೆ ಸರಿಯಾಗಿ ದಾಳಿ ಮಾಡಿದರು. ಈ ದಾಳಿಗೆ ಸ್ವಲ್ಪ ಪ್ರಮಾಣದ ಬೆಳಕೂ ಬೇಕಾಗಿತ್ತು. ಕ್ಯೂಬಾ ಪೂರ್ವದಲ್ಲಿ ಸೂರ್ಯ ಹವಾನಾಗಿಂತ ಇಪ್ಪತ್ತು ನಿಮಿಷಗಳು ಮೊದಲು ಉದಯಿಸುತ್ತಾನೆಂಬುದನ್ನು ಊಹಿಸಿದ್ದರು. ಇಂತಹ ಸಣ್ಣ ಸಣ್ಣ ವಿಚಾರಗಳನ್ನು ಅತ್ಯಂತ ಜಾಗ್ರತೆಯಿಂದ ಲೆಕ್ಕ ಮಾಡಿದ್ದರು.

ಮೊದಲ ತಪ್ಪು

ಸಿಬೋನಿಯಿಂದ ಸ್ಯಾಂಟಿಯಾಗೊಗೆ ಒಂದರ ಹಿಂದೆ ಒಂದರಂತೆ ನಸುಕಿನಲ್ಲಿ ಕಾರುಗಳು ಹೊರಟವು. ಮೊದಲ ಕಾರಿನಲ್ಲಿ ರಾಮಿರಿಟೋ ವಾಲ್ಡೆಸ್, ಜೀಸಸ್ ಮಾಂಟೇನ್, ರೆನಾಟೋ ಗ್ವಿಟಾರ್ಟ್ ಮತ್ತಿತರರು ಇದ್ದರು. ಫಿಡೆಲ್ ಮತ್ತು ಉಳಿದ ಕಾರುಗಳು ಅವರಿಗಿಂತ ಎಂಬತ್ತು ಗಜಗಳ ಹಿಂದೆ ಬರುತ್ತಿದ್ದರು. ಮೊದಲ ಕಾರು ಪ್ರವೇಶ ದ್ವಾರವನ್ನು ತಲುಪುತ್ತಿದ್ದಂತೆ ಕಾರಿನಿಂದ ಜಿಗಿದು ಯೋಜಿಸಿದಂತೆ ಗಾರ್ಡ್‌ಗಳನ್ನು ನಿಶಸ್ತ್ರಗೊಳಿಸಿ ತಮ್ಮ ನಿಯಂತ್ರಣಕ್ಕೆ ಪಡೆಯುತ್ತಿರುವಾಗಲೇ ಸುಮಾರು 20 ಗಜಗಳ ಅಳತೆಯಲ್ಲಿ ಇಬ್ಬರು ಶಸ್ತ್ರಸಜ್ಜಿತ ಸೈನಿಕರು ದ್ವಾರದ ಹೊರಗಿನ ಬೀದಿಯಲ್ಲಿ ನಡೆದು ಬರುತ್ತಿದ್ದರು. ಗಾರ್ಡ್ ಪೋಸ್ಟ್ ಬಳಿ ಏನೋ ನಡೆಯುತ್ತಿದೆ ಎಂಬುದನ್ನು ಗ್ರಹಿಸಿದ ಅವರು ರಾಮಿರಿಟೋ ಮತ್ತಿತರರ ಮೇಲೆ ಗುಂಡು ಹಾರಿಸಲು ಸಿದ್ಧವಾದರು ಅಥವಾ ಆ ರೀತಿ ಫಿಡೆಲ್‌ಗೆ ಕಂಡರು. ಒಂದು ಕ್ಷಣ ಗೊಂದಲಕ್ಕೊಳಗಾದ ಫಿಡೆಲ್ ಹಿಂಬದಿಯಿಂದ ಅವರ ಬಳಿಗೆ ಕಾರನ್ನು ನುಗ್ಗಿಸಿ ಅವರನ್ನು ನಿಶಸ್ತ್ರಗೊಳಿಸಬೇಕೆಂದು ತೀರ್ಮಾನಿಸಿದರು. ಹತ್ತಿರಕ್ಕೆ ಹೋಗುತ್ತಿದ್ದಂತೆ ಶಬ್ದ ಬಂದ ಕಡೆ ಸೈನಿಕರು ಹಿಂದಿರುಗಿ ನೋಡಿ ಬಂದೂಕುಗಳನ್ನು ಇವರತ್ತ ಗುರಿ ಮಾಡಿದರು. ಹತ್ತಿರ ಹೋದ ಫಿಡೆಲ್ ಕಾರಿನಿಂದ ಧುಮುಕಿದರು. ಅವರೆಲ್ಲರೂ ತಾವು ಬ್ಯಾರಕ್‌ನೊಳಗೆ ಇದ್ದಂತೆ ಭಾವಿಸಿದರು. ಆದರೆ ಅವರು ಇನ್ನೂ ಪ್ರವೇಶ ದ್ವಾರವನ್ನೇ ದಾಟಿರಲಿಲ್ಲ. ಹಬ್ಬದ ಕಾರಣಕ್ಕಾಗಿ ವಿಶೇಷವಾಗಿ ಬ್ಯಾರಕ್‌ನ ಹೊರಗಿನ ಬೀದಿಯನ್ನು ಕಾಯಲು ಸೈನಿಕರನ್ನು ನೇಮಿಸಲಾಗಿತ್ತು. ಈ ಸಂಗತಿಯನ್ನು ಫಿಡೆಲ್ ಅಂದಾಜು ಮಾಡಲು ಆಗಿರಲೇ ಇಲ್ಲ. ಹೀಗಾಗಿ ತಪ್ಪು ಅಂದಾಜಿನಿಂದ ಎಲ್ಲರೂ ತಮ್ಮ ಬಂದೂಕುಗಳ ಸಮೇತ ಕಾರಿನಿಂದ ಜಿಗಿದಿದ್ದರು. ಈ ರಭಸದಲ್ಲಿ ಫಿಡೆಲ್ ಜೊತೆಗಿದ್ದವನೊಬ್ಬ ತನ್ನ ಬಂದೂಕಿನಿಂದ ಮೊದಲ ಗುಂಡನ್ನು ಹಾರಿಸಿದ. ಅದು ನಿಶ್ಯಬ್ದ, ನಿರಾಳ ರಾತ್ರಿಯ ಮೌನವನ್ನು ಸೀಳಿಹಾಕಿತು. ನಂತರ ಎಲ್ಲರೂ ಗುಂಡು ಹಾರಿಸಲು ಪ್ರಾರಂಭಿಸಿದರು. ಬಟಿಸ್ಟಾ ಸೈನಿಕರಿಗೆ ಇಷ್ಟು ಅವಕಾಶ ಸಾಕಾಗಿತ್ತು. ಸೈರನ್‌ಗಳು ಮೊಳಗಿದವು. ಬಂದೂಕಿನ ಗುಂಡುಗಳು, ಸೈರನ್‌ಗಳ ಶಬ್ದಕ್ಕೆ ಕಿವಿಗಳು ಕಿತ್ತು ಹೋಗತೊಡಗಿದವು. ಯೋಜನೆಯ ಪ್ರಕಾರ ಅವರೆಲ್ಲರೂ ಒಂದೇ ರೀತಿ ಕಾಣುತ್ತಿದ್ದ ತಾವು ವಶಪಡಿಸಿಕೊಳ್ಳಬೇಕಾದ ಕಟ್ಟಡ ಇದೇ ಎಂದು ತಪ್ಪಾಗಿ ಭಾವಿಸಿ ಆಸ್ಪತ್ರೆಯ ಕಟ್ಟಡವನ್ನು ಹೊಕ್ಕರು.

ಬ್ಯಾರಕ್‌ಗಳ ಸಂಕೀರ್ಣದಲ್ಲಿ ನಡೆಯಬೇಕಾದ ದಾಳಿಗಳು ಹೊರಗಡೆ ನಡೆಯಲಾರಂಭಿಸಿತು.

> **ಫಿಡೆಲ್ ತಮ್ಮ ಬಳಿಯಿದ್ದ 120 ಜನರನ್ನು ಮೂರು ಗುಂಪುಗಳಾಗಿ ವಿಭಜಿಸಿದರು. ಒಂದು ಗುಂಪು ಬ್ಯಾರಕ್‌ಗಳ ಹಿಂದಿದ್ದ ಆಸ್ಪತ್ರೆಯನ್ನು ವಶಪಡಿಸಿಕೊಳ್ಳುವುದು. ಎರಡನೇ ತಂಡವು ಆಡೆನ್ಸಿಯಾ ಕಟ್ಟಡ, ಪೆಲೇಶಿಯೋ ಡಿ ಜಸ್ಟೀಷಿಯಾ ಬಹುಮಹಡಿ ಕಟ್ಟಡಗಳನ್ನು ವಶಪಡಿಸಿಕೊಳ್ಳಲು ತೀರ್ಮಾನಿಸಲಾಯಿತು. 90 ಜನರ ಮೂರನೇ ಗುಂಪು ಫಿಡೆಲ್ ನೇತೃತ್ವದಲ್ಲಿ ಗಾರ್ಡ್ ಪೋಸ್ಟ್, ಜನರಲ್ ಸ್ಟಾಫ್ ಕಛೇರಿಗಳು ಮತ್ತು ಬ್ಯಾರಕ್‌ಗಳನ್ನು ವಶಪಡಿಸಿಕೊಳ್ಳುವ ತೀರ್ಮಾನವನ್ನು ವಿವರಿಸಲಾಯಿತು. ಈ ದಾಳಿಯಲ್ಲಿ ಐದು ಜನ – ಗಿಲ್ಡೋ ಫ್ಲೀಟಾಸ್, ಫ್ಲೋರ್ಸ್ ಬೆಟನ್‌ಕೋರ್ಟ್, ಕಾರ್ಮೆಲೋ ನೋ, ರೆನಾಟೋ ಗ್ವಿಟಾರ್ಟ್ ಮತ್ತು ಪೆಡ್ರೊ ಮರೆರೊ ಮರಣ ಹೊಂದಿದರು. ಮತ್ತು ನಂತರದಲ್ಲಿ ಐವತ್ತಾರು ಜನರು ಕೊಲೆಯಾದರು.**



ಯೋಜನೆ ಪೂರ್ತಿ ದಾರಿ ತಪ್ಪಿತು. ಈ ಸಂದರ್ಭದಲ್ಲಿ ಕಾವಲು ಸೈನಿಕರು ಅಲ್ಲಿಂದ ನಾಪತ್ತೆಯಾಗಿದ್ದರು. ಆಸ್ಪತ್ರೆಯನ್ನು ತಪ್ಪಾಗಿ ಪ್ರವೇಶಿಸಿದ್ದ ಜನರನ್ನು ಹೊರತರಲು ಫಿಡೆಲ್ ಕೂಡಲೇ ಓಡಿದರು. ಅತ್ಯಂತ ವೇಗವಾಗಿ ಸಾಧ್ಯವಾದಷ್ಟು ಜೊತೆಗಾರರನ್ನು ಪುನರ್ ಸಂಘಟಿಸಿದರು. ಈಗಾಗಲೇ ಗಾರ್ಡ್ ಪೋಸ್ಟ್ ಇವರ ವಶದಲ್ಲಿ ಇದ್ದುದರಿಂದ ಇದಕ್ಕೆ ಅನುಕೂಲವಾಯಿತು. ಆದರೆ ಆಶ್ಚರ್ಯಕರ ರೀತಿಯಲ್ಲಿ ದಾಳಿ ಮಾಡಬೇಕೆಂಬುದರ ಮೊನಚು ಮತ್ತು ಅನುಕೂಲಗಳು ಕಳೆದುಹೋಗಿತ್ತು. ಪುನರ್‌ಸಂಘಟಿಸಿದ ಕಾರುಗಳನ್ನು ಜನರಲ್ ಸ್ಟಾಫ್ ಕಛೇರಿಗಳ ಕಡೆಗೆ ನುಗ್ಗಿಸಲು ಫಿಡೆಲ್ ಪ್ರವೃತ್ತರಾಗಿರುವಾಗಲೇ ಕಾರೊಂದು ವೇಗವಾಗಿ ಹಿಂದೆ ಚಲಿಸಿ ಫಿಡೆಲ್ ಕಾರಿಗೆ ಡಿಕ್ಕಿ ಹೊಡೆಯಿತು. ಮತ್ತೊಮ್ಮೆ ಫಿಡೆಲ್ ಕಾರಿನಿಂದ ಜಿಗಿದು ಹೊರಬರಬೇಕಾಯಿತು. ಏನೂ ಮಾಡಲಾಗದ ಸ್ಥಿತಿ ಉದ್ಭವವಾಯಿತು. ಇಷ್ಟರೊಳಗೆ ಬಟಿಸ್ಟಾ ಸೈನಿಕರು ಶಸ್ತ್ರಸಜ್ಜಿತರಾಗಿ ದಾಳಿಗೆ ಸಿದ್ಧರಾಗಲು ಕಾಲಾವಕಾಶ ದೊರೆಯಿತು. ಗುಂಡಿನ ಮೊರೆತ ಹೆಚ್ಚಾಯಿತು. ತಮ್ಮ ಯೋಜನೆ ಫಲಿಸಲು ಸಾಧ್ಯವಿಲ್ಲ ಎಂದು ಫಿಡೆಲ್‌ಗೆ ಖಾತ್ರಿಯಾಯಿತು.

61 ಗೆರಿಲ್ಲಾಗಳು ಹುತಾತ್ಮರಾದರು

ಫಿಡೆಲ್ ಗಾರ್ಡ್ ಪೋಸ್ಟ್‌ನ ಹತ್ತಿರದ ಬೀದಿಯ ಮಧ್ಯದಲ್ಲಿದ್ದರು. ತಮ್ಮ ಹುಡುಗರಿಗೆ ಹಿಮ್ಮೆಟ್ಟಲು ಕರೆಕೊಟ್ಟರು. ಇವರ ಬಳಿ .22 ಕ್ಯಾಲಿಬರ್ ರೈಫಲ್ ಇತ್ತು. ಬೀದಿಗೆ ನೇರವಾಗಿ ಎದುರಿನ ಕಟ್ಟಡದ ಮೇಲಿನಿಂದ ಮೆಷೀನ್‌ಗನ್ ಇವರ ಕಡೆ ಗುರಿಯಿಟ್ಟು ದಾಳಿ ಮಾಡಲು ಸೈನಿಕರು ಪ್ರಯತ್ನಿಸುತ್ತಿರುವುದನ್ನು ಕಂಡ ಫಿಡೆಲ್ ಆ ಕಡೆಗೆ ತಮ್ಮ ರೈಫಲ್‌ನಿಂದ ಗುಂಡು ಹಾರಿಸುತ್ತಲೇ ತಮ್ಮ ಜನರು ಕಾರುಗಳಿಗೆ ಹತ್ತಿಕೊಳ್ಳಲು ಹೇಳುತ್ತಿದ್ದರು. ಕೊನೆಯ ಕಾರಿನಲ್ಲಿ ತಾವು ಹತ್ತಬೇಕೆನ್ನುವಾಗ ಮತ್ತೊಬ್ಬ ಉಳಿದುಕೊಂಡ. ಫಿಡೆಲ್ ಅವನನ್ನು ಕಾರಿಗೆ ಹತ್ತಿಸಿ ತಾವು ಆಚೆ ಉಳಿದುಕೊಂಡರು. ನಡು ರಸ್ತೆಯಲ್ಲಿ ಒಂಟಿಯಾಗಿ ಬಂದೂಕು ಹಿಡಿದು ನಿಂತರು. ಸಾಯುವ ಯೋಚನೆಯನ್ನೇ ಹತ್ತಿರ ಸುಳಿಯಗೊಡದಂತೆ ನಿಂತುಬಿಟ್ಟರು. ಆಗ ಆಶ್ಚರ್ಯಕರವಾಗಿ ಮತ್ತೊಂದು ಕಾರು ಸೀದಾ ಇವರ ಬಳಿ ಬಂದು ಇವರನ್ನು ಎಳೆದು ಒಳಗೆ ಕೂರಿಸಿಕೊಂಡು ಹೊರಟಿತು. ತಮ್ಮ ತಂಡದಲ್ಲಿದ್ದ ಸಂತಾನಾ ಎಂಬ ಮನುಷ್ಯ ಸ್ವಯಂಪ್ರೇರಿತನಾಗಿ ಈ ಕಾರ್ಯವನ್ನು ಮಾಡಿದ ಬಗ್ಗೆ ಫಿಡೆಲ್ ನೆನಪಿಸಿಕೊಳ್ಳುತ್ತಾರೆ. ಈ ಘಟನೆಗಳೆಲ್ಲಾ ಅರ್ಧ ಗಂಟೆಗಿಂತ ಕಡಿಮೆ ಅವಧಿಯಲ್ಲಿ ನಡೆದುಹೋದವು. ಹೊರಗೆ ಬಂದ ಕಾರನ್ನು 'ಎಲ್‌ಕ್ಯಾನಿ'ಗೆ ಹೋಗಲು ಫಿಡೆಲ್ ಹೇಳಿದರು. ಆದರೆ ಚಾಲಕನಾಗಿದ್ದವನಿಗೆ ಅದು ಗೊತ್ತಿರಲಿಲ್ಲ. ಮೊಂಕಾಡಾ ದಾಳಿ ವಿಫಲವಾಗಿದ್ದರಿಂದ ಕನಿಷ್ಟ ಎಲ್-ಕ್ಯಾನಿಯಲ್ಲಿದ್ದ ಸಣ್ಣ ಬ್ಯಾರಕ್‌ಗಳನ್ನಾದರೂ ವಶಪಡಿಸಿಕೊಳ್ಳಬೇಕೆಂದು ಫಿಡೆಲ್ ಬಯಸಿದ್ದರು. ಆ ಮೂಲಕ ಬಯಾಮೊದಲ್ಲಿ ದಾಳಿ ನಡೆಸುತ್ತಿದ್ದವರಿಗೆ ಸ್ಥೈರ್ಯ ತುಂಬುವುದು ಅವರ ಉದ್ದೇಶವಾಗಿತ್ತು. ಆದರೆ ಇಲ್ಲಿನ ವೈಫಲ್ಯದಿಂದ ತಮ್ಮ ಸಂಗಡಿಗರನ್ನು ಮತ್ತೆ ದಾಳಿಗೆ ಸಜ್ಜುಗೊಳಿಸುವ ಪರಿಸ್ಥಿತಿ ಕಾಣಲಿಲ್ಲ.

ಈ ದಾಳಿಯಲ್ಲಿ ಐದು ಜನ – ಗಿಲ್ಡೋ ಫ್ಲೀಟಾಸ್, ಫ್ಲೋರ್ಸ್ ಬೆಟನ್‌ಕೋರ್ಟ್, ಕಾರ್ಮೆಲೋ ನೋ, ರೆನಾಟೋ ಗ್ವಿಟಾರ್ಟ್ ಮತ್ತು ಪೆಡ್ರೊ ಮರೆರೊ ಮರಣ ಹೊಂದಿದರು. ಮತ್ತು ನಂತರದಲ್ಲಿ ಐವತ್ತಾರು ಜನರು ಕೊಲೆಯಾದರು. ದಾಳಿಯಲ್ಲಿ ಸತ್ತವರಲ್ಲಿ ಬಹುತೇಕ ಮೊದಲ ಕಾರಿನಲ್ಲಿದ್ದರು. ಉಳಿದವರು ನಂತರ ಎಲ್-ಕ್ಯಾನಿಯ ಬದಲಿಗೆ ಸಿಬೋನಿಗೆ ಬಂದು ತಲುಪಿದರು. ಅಲ್ಲಿನ ವಾತಾವರಣ ತುಂಬಾ ಬಿಗಿಯಾಗಿತ್ತು. ಕೆಲವರು ತಮ್ಮ ಯೂನಿಫಾರ್ಮ್‌ಗಳನ್ನು ಕಳಚಿ ಹಾಕಿದರು. ಕೆಲವರು ತಮ್ಮ ಬಂದೂಕುಗಳನ್ನು ಒಡೆದು ಹಾಕಿದರು. ಅವರಲ್ಲಿ ಪುನರ್ ಚೈತನ್ಯವನ್ನು ತುಂಬುವ ಕೆಲಸಕ್ಕೆ ಫಿಡೆಲ್ ಮುಂದಾದರು. ಏಕೆಂದರೆ ಫಿಡೆಲ್ ಶರಣಾಗುವ ಯಾವ ಪರಿಸ್ಥಿತಿಯನ್ನೂ ಯೋಚಿಸಲು ಸಿದ್ಧವಿರಲಿಲ್ಲ. ಫಿಡೆಲ್ ಯುದ್ಧವನ್ನು ಮುಂದುವರೆಸಲು ತೀರ್ಮಾನಿಸಿದರು. ಅಂತೂ ಇಂತೂ ಕೊನೆಗೆ ಇಪ್ಪತ್ತು ಜನರನ್ನು ಒಂದುಗೂಡಿಸಿದರು. ಅವರ ಬಳಿಯಿದ್ದ ಶಸ್ತ್ರಾಸ್ತ್ರಗಳು ಎದುರು-ಬದುರು ಹೋರಾಟಕ್ಕೆ ಉಪಯೋಗವಾಗುತ್ತಿತ್ತೇ ಹೊರತು ಮತ್ತೊಂದು ಯುದ್ಧ ನಡೆಸಲು ಉಪಯೋಗಕ್ಕೆ ಬರುತ್ತಿರಲಿಲ್ಲ. ಬೆಟ್ಟಗಳ ಸಾಲಿನ ಮತ್ತೊಂದು ಬದಿಗೆ ಹೋಗಿ ತಾವು ಮೊಂಕಾಡಾದಲ್ಲಿ ಪ್ರಾರಂಭಿಸಿದ ಹೋರಾಟವನ್ನು ಮುಂದುವರೆಸುವ ಕುರಿತು ಯೋಚಿಸಿದ ಫಿಡೆಲ್ ತಮ್ಮ ಜೊತೆಗಾರರೊಂದಿಗೆ ಸುಮಾರು 3000 ಅಡಿ ಎತ್ತರದ ಬೆಟ್ಟ ಹತ್ತಲು ತೀರ್ಮಾನಿಸಿದರು. ಆದರೆ ಇವರು ಅಲ್ಲಿಗೆ ಹೋಗುವ ಮೊದಲೇ ಬಟಿಸ್ಟಾನ ಪಡೆಗಳು ಅಲ್ಲಿಗೆ ಬಂದು ಎತ್ತರದ ಸ್ಥಳಗಳನ್ನು ಹಿಡಿದು ಬಿಟ್ಟಿದ್ದರು. ಅವರ ಬಳಿ ವಾಹನಗಳಿದ್ದವು. ಹೆದ್ದಾರಿಗಳನ್ನು ಬಳಸಿ ವೇಗವಾಗಿ ಬಂದಿದ್ದರು.

ಫಿಡೆಲ್ ಜೊತೆಗಿದ್ದವರಲ್ಲಿ ಹಲವರು ಗಾಯಗೊಂಡಿದ್ದರು, ಉಳಿದವರು ಸುಸ್ತಾಗಿದ್ದರು ಮತ್ತು ಹಗಲಲ್ಲಾಗಲೀ, ರಾತ್ರಿಯಲ್ಲಾಗಲೀ ಬಲವಂತದ ಪಯಣ ಮಾಡುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ. ಆ ಪ್ರದೇಶದಿಂದ ಮೊದಲು ಆಚೆ ಬರಬೇಕಿತ್ತು. ಆದರೆ ಮಾರ್ಗದರ್ಶಕರಿರಲಿಲ್ಲ, ಮಾಹಿತಿಯಿರಲಿಲ್ಲ. ನೀರು, ಊಟ ಅಥವಾ ಇತರೆ ಯಾವುದೇ ಕನಿಷ್ಟ ಸೌಲಭ್ಯಗಳಿರಲಿಲ್ಲ. ಬಟಿಸ್ಟಾನ ಸೈನಿಕ ಪಡೆಗಳು ಖೈದಿಗಳನ್ನು ಅತ್ಯಂತ ಅಘಾತಕಾರಿ ರೀತಿಯಲ್ಲಿ ಹಿಂಸಿಸುತ್ತಾರೆ ಮತ್ತು ನಂತರ ಪ್ರತಿಯೊಬ್ಬರನ್ನೂ ಕೊಂದು ಹಾಕುತ್ತಾರೆಂಬುದರಲ್ಲಿ ಅನುಮಾನವೇ ಇರಲಿಲ್ಲ. ಈ ರೀತಿಯಾಗಿ ಹಿಂದೆ ಹಲವು ಬಾರಿ ನಡೆದಿತ್ತು. ಇದೇ ಸಂದರ್ಭಕ್ಕೆ ಓರಿಯೆಂಟೆ ಪ್ರಾಂತ್ಯವೂ ಸೇರಿದಂತೆ ದೇಶದಾದ್ಯಂತ ಜನರಲ್ಲಿ ಅಸಮಾಧಾನದ ಹೊಗೆಯಾಡುತ್ತಿತ್ತು. ಮೊಂಕಾಡಾ ದಾಳಿಯ ಅಳಿದುಳಿದವರನ್ನು ಕಾಪಾಡಲು ಸ್ಯಾಂಟಿಯಾಗೊದ ಆರ್ಚ್‌ಬಿಷಪ್ ಮತ್ತಿತರರು ಪ್ರಾರಂಭಿಸಿದರು. ●

ರಫ್ತುಗಳಲ್ಲಿ ಸತತ 16ನೇ ತಿಂಗಳ ಇಳಿಕೆ, ಉದ್ಯೋಗ ನಿರ್ಮಾಣ 7 ವರ್ಷಗಳಲ್ಲೇ ಅತಿ ಕಡಿಮೆ–'ಅಚ್ಚೇದಿನ್' ಭ್ರಮೆ ಮಾತ್ರ ಇಳಿದಿಲ್ಲ

ದೇಶದ ಒಟ್ಟು ರಫ್ತಿನಲ್ಲಿ ಸತತ 16ನೇ ತಿಂಗಳಲ್ಲೂ ಇಳಿಕೆಯಾಗಿದೆಯೆಂದು ವರದಿಯಾಗಿದೆ. ಡಿಸೆಂಬರ್2014ರಲ್ಲಿ 25.39 ಬಿಲಿಯ ಡಾಲರುಗಳಿಮದ ಮಾರ್ಚ್ 2016ರಲ್ಲಿ ಅದು 22.71 ಬಿಲಿಯ ಡಾಲರುಗಳಿಗೆ ಇಳಿದಿದೆ ಎಂದು ವಾಣಿಜ್ಯ ಮತ್ತು ಉದ್ದಿಮೆ ಇಲಾಖೆ ಪ್ರಕಟಿಸಿರುವ ಅಂಕಿ–ಅಂಶಗಳು ಹೇಳುತ್ತಿವೆ. 2008–09 ರ ಅಂತರ್ರಾಷ್ಟ್ರೀಯ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲೂ ಇಂತಹ ಸತತ ಇಳಿಕೆ ಕಂಡಿದ್ದರೂ ಅದು 9 ತಿಂಗಳ ವರೆಗೆ ಮಾತ್ರ ಇತ್ತು. ವಾಣಿಜ್ಯ ಸರಕುಗಳು ಮತ್ತು ಸೇವೆಗಳ ರಫ್ತಿನಲ್ಲಿ ಅತಿ ಹೆಚ್ಚು ಇಳಿಕೆ ಉಂಟಾಗಿದೆ. ಇಂಜಿನಿಯರಿಂಗ್ ಸರಕುಗಳ ರಫ್ತಿನಲ್ಲಿ 11.29ಶೇ. ಇಳಿಕೆಯಾಗಿದೆ.



ಮೇಕ್ ಇನ್ ಇಂಡಿಯಾ ಇತ್ಯಾದಿಗಳು ಇವೆಂಟ್‌ಗಳಾಗಿಯಷ್ಟೇ ಉಳಿದಿರುವುದನ್ನು ಇದು ಖಚಿತ ಪಡಿಸುತ್ತಿದೆ.

ಅಚ್ಛೇ ದಿನ್ ಮಂತ್ರ ಜಪಿಸುತ್ತಲೇ ಈ ಸರಕಾರ ಭಾರತವನ್ನು ಹಿಂದಕ್ಕೆ ತಳ್ಳುತ್ತಿದೆ, ಈಗಿನ ರಫ್ತು ಬೆಳವಣಿಗೆ 63 ವರ್ಷಗಳಲ್ಲೇ ಅತಿ ಕಡಿಮೆ ಎಮದು ಸಿಪಿಐ(ಎಂ) ಪ್ರಧಾನ ಮಂತ್ರಿ ಸೀತಾರಾಮ್ ಯೆಚೂರಿ ಟಿಪ್ಪಣಿ ಮಾಡಿದ್ದಾರೆ.

ಈ ನಡುವೆ ಪ್ರಮುಖ ವಲಯಗಳಲ್ಲಿ ಉದ್ಯೋಗ ನಿರ್ಮಾಣದಲ್ಲಿ ಬೆಳವಣಿಗೆಯ ಪ್ರಮಾಣ ಕೂಡ 2015ರಲ್ಲಿ ಕಳೆದ ಏಳುವ ವರ್ಷಗಳಲ್ಲೇ ಅತಿ ಕೆಳಗಿನ ಮಟ್ಟವನ್ನು ತಲುಪಿದೆ ಎಂದು ಕಾರ್ಮಿಕ ಮಂತ್ರಾಲಯದ ಅಡಿಯಿರುವ ಲೇಬರ್ ಬ್ಯುರೊ ಸರ್ವೆ ಹೇಳುತ್ತಿದೆ(ಪಿಟಿಐ, ಎಪ್ರಿಲ್ 15). 2015ರಲ್ಲಿ ಕೇವಲ 1.35 ಲಕ್ಷ ಉದ್ಯೋಗಗಳು ನಿರ್ಮಾಣವಾದವು. ಈ ಹಿಂದಿನ ಸರ್ವೆಗಳ ಪ್ರಕಾರ ಉದ್ಯೋಗಾವಕಾಶಗಳ ಹೆಚ್ಚಳ ಹೀಗಿತ್ತು:2014: 4.21 ಲಕ್ಷ; 2013: 4.19ಲಕ್ಷ; 2012: 3.21ಲಕ್ಷ; 2011: 9.29ಲಕ್ಷ; 2010: 8.7ಲಕ್ಷ ಮತ್ತು 2009: 12.8ಲಕ್ಷ.

2015ರ ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ 20 ಸಾವಿರ ಉದ್ಯೋಗಗಾವಕಾಶಗಳು ಮುಚ್ಚಿದವು ಎಂದೂ ಈ ಸರ್ವೆಯಿಂದ ಕಂಡು ಬಂದಿದೆ.

ಆದರೂ ಕೇಂದ್ರ ಗೃಹ ಮಂತ್ರಿಗಳು 'ಅಚ್ಛೇ ದಿನ್' ಭ್ರಮೆ ತೋರಿಸುತ್ತಲೇ ಇದ್ದಾರೆ. ಅವರದೇ ಸರಕಾರದ ವಾಣಿಜ್ಯ ಮಂತ್ರಾಲಯ ಮತ್ತು ಕಾರ್ಮಿಕ ಮಂತ್ರಾಲಯದ ಅಡಿಯಿರುವ ಲೇಬರ್ ಬ್ಯರೊದ ಪ್ರಕಟಣೆಗಳ ಎರಡೇ ದಿನಗಳ ನಂತರ ನರೇಂದ್ರ ಮೋದಿ ಸರಕಾರದ ಆರ್ಥಿಕ ಧೋರಣೆಗಳು ಸದ್ಯದಲ್ಲೇ ಪಲ ನೀಡಲಿವೆ, ಭಾರತ ಒಂದು ಜಾಗತಿಕ ಆರ್ಥಿಕ ಶಕ್ತಿಯಾಗಲಿದೆ ಎಂದಿದ್ದಾರೆ. ನಿಜ ಇದನ್ನು ಅವರು ಹೇಳಿದ್ದು ತಮ್ಮ ಕಾರ್ಯಕರ್ತರಿಗೆ, ಬಹುಶಃ ಅವರ ಉತ್ಸಾಹ ಕುಂದದಿರಲಿ ಎಂದು.

ಕುರುಡರ ನಡುವೆ ಒಕ್ಕಣ್ಣನೇ ರಾಜ!


ಅತ್ತ ರಿಝರ್ವ್ ಬ್ಯಾಂಕ್ ಗವರ್ನರ್ ಈ ರೀತಿಯ ಹೇಳಿಕೆಗಳು ಕುರುಡರ ನಡುವೆ ಒಕ್ಕಣ್ಣನೇ ರಾಜ ಎನ್ನುವ ಕತೆ ಎಂದು ಟಿಪ್ಪಣಿಮಾಡಿದ್ದಾರೆ. ಇದರಿಂದ ಭಾರತ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಎಂದು ಬೆನ್ನು ತಟ್ಟಿಕೊಳ್ಳುತ್ತಿರುವ, ಈ ವೇಳೆಗೆ ವಾಶಿಂಗ್ಟನ್‌ನಲ್ಲಿ ಐಎಂಎಫ್ ಸಭೆಯಲ್ಲಿದ್ದ ಹಣಕಾಸು ಮಂತ್ರಿಗಳು ಕುಪಿತರಾಗಿದ್ದಾರೆ. ವಾಣಿಜ್ಯ ಮಂತ್ರಿಗಳು ಕೂಡ ಗವರ್ನರ್ ಸಾಹೇಬರು ಇನ್ನೂ ಉತ್ತಮ ಪದಗಳನ್ನು ಬಳಸ ಬಹುದಿತ್ತು ಎಂದಿದ್ದಾರೆ.

ಗವರ್ನರ್ ಸಾಹೇಬರು ತಾವು ಆ ಪದ ಬಳಸಿದ್ದಕ್ಕಾಗಿ ಕ್ಷಮೆ ಕೇಳಿದ್ದಾರೆ. ಆದರೆ ಹಾಗೆ ಕ್ಷಮೆ ಕೇಳಿದ್ದು ಹಣಕಾಸು ಮಂತ್ರಿಗಳು ಅಥವ ವಾಣಿಜ್ಯ ಮಂತ್ರಿಗಳಲ್ಲಿ ಅಲ್ಲ, ಕಣ್ಣಿನ ದೋಷವಿರುವ ವಿಕಲ ಚೇತನರಲ್ಲಿ.

ಭಾರತ ಅತ್ಯಂತ ವೇಗದಲ್ಲಿ ಬೆಳೆಯುತ್ತಿರುವ ಆರ್ಥಿಕ ವ್ಯವಸ್ಥೆ ಎಂಬ ಭಾವೋದ್ವೇಗ ಬೇಡ, ಭಾರತ ಇನ್ನೂ ಬಹಳ ದೂರ ಸಾಗಬೇಕಾಗಿದೆ, ಅಲ್ಲಿಗೆ ತಲುಪುವ ಮೊದಲೇ ತಲುಪಿ ಬಿಟ್ಟಿದ್ದೇವೆ ಎಂದು ಹೇಳಿಕೊಳ್ಳುವುದು ಬೇಡ ಎಂದು ಅಚ್ಛೇದಿನ್ ಗೃಹ ಮಂತ್ರಿಗಳಿಗೆ, ಹಣಕಾಸು ಮಂತ್ರಿಗಳಿಗೆ ಮತ್ತು ಅವರಂತಹ ಇತರರಿಗೆ ಪರೋಕ್ಷವಾಗಿ ಸಲಹೆ ಮಾಡಿದ್ದಾರೆ.

ಭಾರತದ ತಲಾ ಆದಾಯ ಬ್ರಿಕ್ಸ್ ದೇಶಗಳಲ್ಲೇ ಅತೀ ಕಡಿಮೆ ಎಂದು ನೆನಪಿಸಿರುವ ಅವರು "ನಾವಿನ್ನೂ ತಲಾ ಆದಾಯದ ದೃಷ್ಟಿಯಲ್ಲಿ ಜಗತ್ತಿನ ದೊಡ್ಡ ಕಡುಬಡತನದ ದೇಶಗಳಲ್ಲಿ ಒಂದಾಗಿದ್ದೇವೆ, ನಮ್ಮ ಪ್ರತಿಯೊಬ್ಬ ನಾಗರಿಕನ ಕಾಳಜಿಗಳನ್ನು ನಿಭಾಯಿಸಲು ಇನ್ನೂ ಬಹಳ ದೂರ ಸಾಗಬೇಕಾಗಿದೆ' ಎಂದಿದ್ದಾರೆ.

ಭಾರತ ಮತ್ತು ಚೇನಾವನ್ನು ಹೋಲಿಸುತ್ತ 1960ರ ದಶಕದಲ್ಲಿ ನಮಗಿಂತ ಚಿಕ್ಕದಿದ್ದ ಚೇನಾದ ಆರ್ಥಿಕ ಈಗ ಮಾರ್ಕೆಟ್ ವಿನಿಮಯ ದರಗಳ ಪ್ರಮಾಣದಲ್ಲಿ ನಮಗಿಂತ ಐದು ಪಟ್ಟು ದೊಡ್ಡದಾಗಿದೆ, ಸರಾಸರಿ ಚೇನೀ ನಾಗರಿಕ ಸರಾಸರಿ ಭಾರತೀಯನಿಗಿಂತ ನಾಲ್ಕು ಪಟ್ಟು ಶ್ರೀಮಂತನಾಗಿದ್ದಾನೆ ಎಂದೂ ಅವರು ನೆನಪಿಸಿದರು.




ಮಾಲೇಗಾಂವ್ ಸ್ಫೋಟ: ಆಪಾದಿತರೆಂಬ ಹಣೆಪಟ್ಟಿಯಿಂದ 10 ವರ್ಷಗಳಾದರೂ ಮುಕ್ತಿಯಿಲ್ಲ

ಭಯೋತ್ಪಾದನೆಗೆ ಧರ್ಮ ಇಲ್ಲ ಎಂದು ಈಗ ಪ್ರಧಾನ ಮಂತ್ರಿಗಳೂ ಹೇಳುತ್ತಿದ್ದರೂ, 'ಅಚ್ಛೇ ದಿನ್'ಗಳಲ್ಲಿ ಈ ಹೇಳಿಕೆಗೂ ತದ್ವಿರುದ್ಧ ಅರ್ಥವಿರಬಹುದೇ ಎಂಬ ಸಂದೇಹ ಬಲಗೊಳ್ಳುತ್ತಿದೆ. ಮಾಲೇಗಾಂವ್ ಸ್ಫೋಟ 37 ಜನಗಳನ್ನು ಬಲಿ ತೆಗೆದುಕೊಂಡು 10 ವರ್ಷಗಳಾಗುತ್ತಿವೆ. ಆದರೆ ಇನ್ನೂ ಚಾರ್ಜ್‌ಶೀಟ್ ಹಾಕಿಲ್ಲ. ತನಿಖೆಯನ್ನು ಎನ್‌ಐಎ(ರಾಷ್ಟ್ರೀಯ ತನಿಖಾ ಸಂಸ್ಥೆ)ಗೆ ವಹಿಸಿದ ಮೇಲೆ ಇದು ಕೇಸರೀ ಭಯೋತ್ಪಾದಕರ ಕೃತ್ಯ ಎಂಬ ಸಂದೇಹ ಬಂದು ಆ ಬಗ್ಗೆ ತನಿಖೆ ಇನ್ನೇನು ಪೂರ್ಣಗೊಳ್ಳುವುದಿತ್ತು. ಈ ನಡುವೆ ಮೋದಿ ಸರಕಾರ ಅಧಿಕಾರ ವಹಿಸಿಕೊಂಡ ನಂತರ ಮಾಲೇಗಾಂವ್, ಸಮ್ಝೌತ ಎಕ್ಸ್‌ಪ್ರೆಸ್, ಮಕ್ಕಾ ಮಸೀದಿ ಮತ್ತು ಅಜ್ಮೇರ್ ದರ್ಗ ಸ್ಫೋಟಗಳೆಲ್ಲ ಕೇಸರೀ ಭಯೋತ್ಪಾದಕರಿಂದ ನಡೆದವುಗಳು ಎಂಬ ಬಗ್ಗೆ ತನಿಖೆಗಳನ್ನು ನಿಧಾನಗೊಳಿಸಲು ಒತ್ತಡ ಬಂತು ಎಂಬುದನ್ನು ಎನ್‌ಐಎ ಪರವಾಗಿ ತನಿಖೆಯಲ್ಲಿ ಭಾಗವಹಿಸಿದ್ದ ವಕೀಲೆ ರೋಹಿಣಿ ಸಾಲ್ಯಾನ್ ರಾಜೀನಾಮೆಯ ನಂತರದ ಘಟನೆಗಳು ಸಾಬೀತು ಮಾಡಿವೆ. ಈಗ ಎನ್‌ಐಎ ಚಾರ್ಜ್‌ಶೀಟ್ ಹಾಕಲು ಇನ್ನೂ ಒಂದು ತಿಂಗಳ ಅವಧಿ ಕೇಳಿದೆ.

ಈ ನಡುವೆ ಮಾಲೇಗಾಂವ್ ಸ್ಫೋಟದ ಕೇಸಿನಲ್ಲಿ ಆರಂಬದಲ್ಲಿ ಮಹಾರಾಷ್ಟ್ರದ ಎಟಿಎಸ್ ಬಂಧಿಸಿದ್ದ ಒಂಭತ್ತು ಮಂದಿಗೂ ಈ ಸ್ಫೋಟಕ್ಕೂ ಯಾವುದೇ ಸಂಬಂಧವಿರುವ ಬಗ್ಗೆ ಸಾಕ್ಷ್ಯಗಳು ಏನೂ ಇಲ್ಲ ಎಂದು 2014ರಲ್ಲೇ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ತಿಳಿಸಿದ್ದರೂ, ಜುಲೈ 2015ರಲ್ಲಿ ಸ್ವತಃ ಎನ್‌ಐಎ ಮಹಾನಿರ್ದೇಶಕರು ಇವರೆಲ್ಲ 'ಅಮಾಯಕರು' ಎಂದು ಕಂಡು ಬಂದಿದೆ ಎಂದು ಇಕನಾಮಿಕ್ ಟೈಮ್ಸ್ ಪತ್ರಿಕೆಗೆ ಹೇಳಿದ್ದರೂ, ಅವರೆಲ್ಲ ಇನ್ನೂ ಆಪಾದಿತರಾಗಿಯೇ ಕೋರ್ಟಿಗೆ ಅಲೆಯಬೇಕಾಗಿ ಬಂದಿದೆ. ಎನ್‌ಐಎ ಅವರನ್ನು ಬಿಡುಗಡೆ ಮಾಡಬೇಕೆಂದು ನ್ಯಾಯಾಲಯದ ಮುಂದೆ ಹೇಳಲು ಹಿಂದೇಟು ಹಾಕುತ್ತಲೇ ಇದೆ. ಇವರೆಲ್ಲರೂ ಮುಸ್ಲಿಮರು ಎಂದು ಬೇರೆ ಹೇಳಬೇಕಾಗಿಲ್ಲ.

ಎಪ್ರಿಲ್ 12ರಂದು ಎನ್‌ಐಎ ವಕೀಲರು ಅವರನ್ನು ಈಗಲೇ ಬಿಡುಗಡೆ ಮಾಡುವಂತಿಲ್ಲ, ಏಕೆಂದರೆ ಮಹಾರಾಷ್ಟ್ರದ ಎಟಿಎಸ್ ಅವರ ಬಗ್ಗೆ ಏನು ಸಾಕ್ಷ್ಯ ಸಂಗ್ರಹಿಸಿದೆ ಎಂದು ನ್ಯಾಯಾಲಯ ನೋಡಬೇಕಾಗುತ್ತದೆ ಎಂದು ಸಬೂಬು ನೀಡಿದ್ದಾರಂತೆ. ವಾಸ್ತವವಾಗಿ ಮಹಾರಾಷ್ಟ್ರದ ಎಟಿಎಸ್‌ನಿಂದ ಇದನ್ನು ಎನ್‌ಐಎಗೆ ವರ್ಗಾಯಿಸಿದ ಮೇಲೆ ಎನ್‌ಐಎ ಮಹಾನಿರ್ದೇಶಕರು ಅವರ 'ಸಾಕ್ಷ್ಯ'ಗಳನ್ನು ನೋಡಿದ ನಂತರವೇ ಅವರು ಅಮಾಯಕರು ಎಂದು ಹೇಳಿರಬೇಕಲ್ಲವೇ?

ಆದರೆ 'ಅಚ್ಛೇ ದಿನ್'ಗಳ ತರ್ಕವೇ ಬೇರೆ ಎಂದು ಈಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಒಂಭತ್ತು ಮಂದಿಯಲ್ಲಿ ಇಬ್ಬರು ಆಗಲೇ ಸತ್ತಿದ್ದಾರೆ. ಉಳಿದವರು ಎಪ್ರಿಲ್ 25ರಂದಾದರೂ ತಮ್ಮ ಬದುಕನ್ನು ಅಸ್ತವ್ಯಸ್ತಗೊಳಿಸಿರುವ ಆಪಾದನೆಗಳು ಸುಳ್ಳು ಎಂದು ಕೊನೆಗೂ ತೀರ್ಪು ಬರುವುದೇ ಎಂದು 'ಅಲ್ಲಾ'ನ ಮೇಲೆ ಭಾರ ಹಾಕಿ ಕಾಯುತ್ತಿದ್ದಾರಂತೆ. ಏಕೆಂದರೆ ಎನ್‌ಐಎ ವಕೀಲರು ಮಹಾರಾಷ್ಟ್ರ ಎಟಿಎಸ್ ಮತ್ತು ಹಿಂದುತ್ವ ಮಂದಿಯ ವಕೀಲರೊಂದಿಗೆ ತಿರುಗಾಡುತ್ತಿರುವುದನ್ನು ನೋಡುತ್ತಿರುವ ತಮಗೆ ಎನ್‌ಐಎ ಮೇಲೆ ವಿಶ್ವಾಸ ಉಳಿದಿಲ್ಲ ಎನ್ನುತ್ತಾರೆ ಇವರು.



ವ್ಯಂಗ್ಯಚಿತ್ರ ಕೃಪೆ: ಗೋಕುಲ್, ಡೆಕ್ಕನ್ ಕ್ರಾನಿಕಲ್


ಅಂಬೇಡ್ಕರ್ ಜಯಂತಿ ಆಚರಣೆಗೂ ಶರತ್ತುಗಳು

ಡಾ.ಬಿ.ಆರ್. ಅಂಬೇಡ್ಕರ್‌ರವರನ್ನು ಸ್ವಾಧೀನಪಡಿಸಿಕೊಳ್ಳಲು ಅವರ ರ್‍ಯಾಡಿಕಲ್ ಚಿಂತನೆಗಳನ್ನು ಮೂಲೆಗುಂಪು ಮಾಡಬೇಕೆಂಬುದು ನಮ್ಮ ಹೊಸ ಆಳುವ ಮಂದಿಯ ಹುನ್ನಾರ ಎಂಬುದನ್ನು ದೇಶದ ಗಮನಕ್ಕೆ ತಂದದ್ದು ಐಐಟಿ ಮದ್ರಾಸಿನ ಅಂಬೇಡ್ಕರ್ ಪೆರಿಯಾರ್ ಸ್ಟಡಿ ಸರ್ಕಲ್(ಎಪಿಎಸ್‌ಸಿ) ಕುರಿತಂತೆ ಹೆಚ್‌ಆರ್‌ಡಿ ಮಂತ್ರಾಲಯದ ವರ್ತನೆಯಿಂದ. ಕೊನೆಗೂ ದೇಶವ್ಯಾಪಿಯಾಗಿ ಬಂದ ಪ್ರತಿಭಟನೆಗಳಿಂದಾಗಿ ಅದು ಹಿಂದೆ ಸರಿಯಬೇಕಾಯಿತು. ಈಗ ಅಂಬೇಡ್ಕರ್‌ರವರ 125 ನೇ ಜಯಂತಿಯ ಸಂದರ್ಭದಲ್ಲಿ ಈ ಸರಕಾರದ ಪ್ರಧಾನ ಮಂತ್ರಿಗಳೇ ತಾನು ಅಂಬೇಡ್ಕರ್ ಅವರ ಭಕ್ತ ಎಂದು ಸಾರಿದ ನಂತರವೂ ಎಪಿಎಸ್‌ಸಿ ವಿರುದ್ಧ ಪಕ್ಷಪಾತವನ್ನು ಮುಂದುವರೆಸಿರುವುದು ಆ ಭಯ ಜೆಎನ್‌ಯು, ಹೆಚ್‌ಸಿಯು ಪ್ರಕರಣಗಳ ನಂತರ ಬಹುಶಃ ಇನ್ನೂ ತೀವ್ರವಾಗಿರುವುದನ್ನು ತೋರಿಸುತ್ತದೆ.

ಎಪಿಎಸ್‌ಸಿ ಸಹಜವಾಗಿಯೇ ಅಂಬೇಡ್ಕರ್ ಅವರ 125ನೇ ಜಯಂತಿಯನ್ನು ಗಂಬೀರವಾಗಿಯೇ ಆಚರಿಸಲು ನಿರ್ಧರಿಸಿ "ಧಾರ್ಮಿಕ ರಾಷ್ಟ್ರೀಯತೆಯಿಂದ ಅಂಬೇಡ್ಕರ್ ಐಡಿಯಾಲೊಜಿಯ ವಿಮೋಚನೆ" ಎಂಬ ವಿಚಾರ ಸಂಕಿರಣವನ್ನು ಐಐಟಿ ಆವರಣದಲ್ಲಿರುವ ಸಭಾಂಗಣದಲ್ಲಿ ನಡೆಸಲು ನಿರ್ಧರಿಸಿತು. ಪ್ರಮುಖ ಭಾಷಣಕಾರರಾಗಿ ಮುಂಬೈಯ ಪ್ರಖ್ಯಾತ ಜಾತ್ಯಾತೀತ ಬುದ್ಧಿಜೀವಿ ಪ್ರೊ. ರಾಮ್ ಪುನಿಯಾನಿ ಅವರನ್ನು ಆಹ್ವಾನಿಸಲಾಗಿತ್ತು. ಇದಕ್ಕೆ ಐಐಟಿ ಆಡಳಿತ ಶರತ್ತುಗಳ ಮೇಲೆ ಅನುಮತಿಯನ್ನೂ ನೀಡಿತು. ಒಂದು ಶರತ್ತೆಂದರೆ ಕರಪತ್ರಗಳನ್ನು ಹಂಚಬಾರದು! ಇದು 'ಪರಿಸರಕ್ಕೆ ಹಾನಿಕರ'ವಂತೆ. ಆದರೆ ವಿಚಾರ ಸಂಕಿರಣದ ದಿನ ಸಭಾಂಗಣದ ದ್ವಾರದಲ್ಲಿ ಭದ್ರತಾ ಸಿಬ್ಬಂದಿ ಹಾಜರಾದರು. ಐಐಟಿ ಗುರುತು ಪತ್ರ ಇದ್ದವರು ಮಾತ್ರ ಪ್ರವೇಶಿಸಬಹುದು ಎಂದು ನಿರ್ಬಂಧಿಸಿದರು. ಐಐಟಿ ಆಡಳಿತವನ್ನು ಈ ಬಗ್ಗೆ ಕೇಳಿದಾಗ ಇಂತಹ ಶರತ್ತು ಸಾಮಾನ್ಯವಾಗಿ ತಾವು ಹಾಕುವುದಾಗಿ ತಿಳಿಸಿದರು. ಆದರೆ ಇತ್ತೀಚೆಗೆ ಇದೇ ಸಭಾಂಗಣದಲ್ಲಿ ಎರಡು ಸಭೆಗಳು ನಡೆದಿದ್ದವು. ಆಗ ಈ ರೀತಿ ಗುರುತುಪತ್ರಗಳನ್ನು ಕೇಳಿರಲಿಲ್ಲ. ಕೊನೆಗೆ ಎಪಿಎಸ್‌ಸಿ ಅದೇ ಸಭಾಂಗಣದ ಹೊರಗೇ ವಿಚಾರಸಂಕಿರಣವನ್ನು ಮುಂದುವರೆಸಿತು. ಐಐಟಿ ವಿದ್ಯಾರ್ಥಿಗಳು ಮಾತ್ರವಲ್ಲ, ಹೊರಗಿನಿಂದ ಬಂದ ಆಸಕ್ತರೂ ಒಂದು ಗಂಟೆಗೂ ಹೆಚ್ಚು ಕಾಲ ಪುನಿಯಾನಿಯವರ ಭಾಷಣವನ್ನು ಕೇಳಿದರು. ಎಪಿಎಸ್‌ಸಿಗೆ ಇಂತಹ ಕಿರುಕುಳಗಳು ಈಗ ಸಾಮಾನ್ಯವಾಗಿ ಬಿಟ್ಟಿದೆಯಂತೆ. ●

ತಿಪ್ಪರಲಾಗಗಳ ದಿನಗಳು

ಇವೀಗ ಆಳುವವರ ತಿಪ್ಪರಲಾಗದ ದಿನಗಳು ಎಂಬುದನ್ನು ಈ ತಿಂಗಳ ಎರಡು ಘಟನೆಗಳು ಮತ್ತೆ ದೃಢಪಡಿಸಿವೆ. ಮೊದಲ ಘಟನೆ, ಪಿಎಫ್ ತಿದ್ದುಪಡಿಯನ್ನು ಹಿಂತೆಗೆದುಕೊಂಡಿರುವುದು. ಕೇಂದ್ರ ಕಾರ್ಮಿಕ ಸಂಘಟನೆಗಳು ವಿರೋಧಿಸಿದ್ದರೂ ಹೊರಡಿಸಿಯೇ ಬಿಟ್ಟ ಈ ಕುರಿತ ಪ್ರಕಟಣೆಯನ್ನು ಬೆಂಗಳೂರು ಮತ್ತು ವಿಶಾಖಪಟ್ಟಣದಲ್ಲಿ ಕಾರ್ಮಿಕರು ಬೀದಿಗಿಳಿದ ನಂತರ ಹಿಂತೆಗೆದುಕೊಳ್ಳಲಾಗಿದೆ.(ಈ ಬಗ್ಗೆ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಸಿಐಟಿಯು ಹೇಳಿಕೆಯನ್ನು ನೋಡಿ).



ವ್ಯಂಗ್ಯಚಿತ್ರ ಕೃಪೆ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಎರಡನೇಯದು, ಈಗ ಲಂಡನಿನಲ್ಲಿರುವ ಕೊಹಿನೂರ್ ರತ್ನ ಬ್ರಿಟಿಶರು ಭಾರತದಿಮದ ಕದ್ದದ್ದೂ ಅಲ್ಲ, ಅವರು ಬಲವಂತದಿಂದ ಒಯ್ದದ್ದೂ ಅಲ್ಲ, ಪಂಜಾಬಿನ ಆಳರಸರು ಈ ಸ್ಟ್ ಇಂಡಿಯಾ ಕಂಪನಿಗೆ 'ಕೊಡುಗೆ'ಯಾಗಿ ನೀಡಿದ್ದು, ಅದನ್ನು ಹಿಂದೆ ಕೇಳುವಂತಿಲ್ಲ ಎಂದು ನ್ಯಾಯಾಲಯದ ಎದುರು ಸರಕಾರದ ವಕೀಲರು ಹೇಳಿಕೆ ನೀಡಿದರೆ, ಮರುದಿನವೇ ಮೋದಿ ಸರಕಾರದ ಸರಕಾರದ ಸಂಸ್ಕೃತಿ ಮಂತ್ರಾಲಯ ಇದನ್ನು ಹಿಂದೆ ತರಲು ಸರಕಾರ ಸಕಲ ಪ್ರಯತ್ನ ನಡೆಸುತ್ತದೆ ಎಂದು ಹೇಳಿಕೆ ನೀಡಿತು. ವಾಸ್ತವವಾಗಿ, ಆಂಗ್ಲೊ–ಸಿಖ್ ಯುದ್ಧದಲ್ಲಿ ಸೋತ ಪಂಜಾಬಿನ ಆಳರಸರಿಂದ ಬ್ರಿಟಿಶ್ ವಸಾಹತುಶಾಹಿಗಳು ಯುದ್ಧದಕ್ಕೆ ಪರಿಹಾರವಾಗಿ ಇದನು ಡಿಮಾಮಡ್ ಮಾಡಿ ಪಡೆದಿದ್ದರು ಎನ್ನುತ್ತಾರೆ ಇತಿಹಾಸಕಾರರು. ಆದರೆ ವಸಾಹತುಶಾಹಿ ಎಂಬ ಪರಿಕಲ್ಪನೆಯೇ ಇಲ್ಲದ, ವಸಾಹತುಶಾಹೀ–ವಿರೋಧಿ ಸಮರದಲ್ಲಿ ಭಾಗವಹಿಸಿದ ಮಂದಿಯಿಂದ ಇಂತಹ ತಿಪದಪರಲಾಗ ಆಶ್ಚರ್ಯ ಉಂಟುಮಾಡಬೇಕಲ್ಲ.

ಅಂಬೇಡ್ಕರ್‌ರವರ ರ್‍ಯಾಡಿಕಲ್ ಆರ್ಥಿಕ ಕಣ್ಣೋಟ



ಕೆ.ಎಂ.ನಾಗರಾಜ್

ಸಾಮಾಜಿಕ ಸ್ತರದಲ್ಲಿ/ಸಂಬಂಧಗಳಲ್ಲಿ ಆಮೂಲಾಗ್ರ ಬದಲಾವಣೆ ತರಲು ಡಾ। ಅಂಬೇಡ್ಕರ್ ಒಲವುಳ್ಳವರಾಗಿದ್ದರೆಂಬುದು ಅವರ ಮೇರು ಕೃತಿ 'ಜಾತಿ ವಿನಾಶ' ಮತ್ತು ಇತರೆ ಅನೇಕ ಲೇಖನಗಳ ಮೂಲಕ ಹಾಗೂ ಅವರ ನಾಯಕತ್ವದಲ್ಲಿ ನಡೆದ ಅನೇಕ ಹೋರಾಟಗಳ ಮೂಲಕ ಎಲ್ಲರಿಗೂ ತಿಳಿದಿದೆ. ಆದರೆ, ಅವರು ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆಯೂ ಆಮೂಲಾಗ್ರ ಬದಲಾವಣೆ ತರಲು ಒಲವುಳ್ಳವರಾಗಿದ್ದರೆಂಬುದನ್ನು ಅವರ ಅನುಯಾಯಿಗಳೂ ಸೇರಿದಂತೆ ಸ್ಥಾಪಿತ ಹಿತಾಸಕ್ತರು ಮರೆಮಾಚುತ್ತಾರೆ.

ಸಂವಿಧಾನ ಸಭೆಯ ಮೊಟ್ಟ ಮೊದಲನೆಯ ಸಭೆಯಲ್ಲಿ, ಪಂಡಿತ್ ನೆಹರೂ 'ಸಂಕಲ್ಪಗಳ ನಿರ್ಣಯ'ವನ್ನು ಮಂಡಿಸಿದಾಗ ಡಾ। ಅಂಬೇಡ್ಕರ್ ಹೀಗೆ ಉತ್ತರ ಕೊಟ್ಟಿದ್ದರು:

"ಈ ನಿರ್ಣಯದಲ್ಲಿ, ನ್ಯಾಯ ಪಾಲನೆ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ಹಲವು ಪ್ರಸ್ತಾಪಗಳಿವೆ. ನೆಹರೂ ಅವರಿಂದ ಮಂಡನೆಯಾಗಿರುವುದರಿಂದ ಈ ಪ್ರಸ್ತಾಪಗಳ ವಾಸ್ತವಿಕತೆಯ ಬಗ್ಗೆಯಾಗಲಿ ಅಥವಾ ಪ್ರಾಮಾಣಿಕತೆಯ ಬಗ್ಗೆಯಾಗಲಿ ನನಗೆ ಯಾವುದೇ ಸಂಶಯವಿಲ್ಲ. ಆದರೆ, ಈ ಅಂಶಗಳು ನಿಜಕ್ಕೂ ಸಾಕಾರಗೊಳ್ಳಬೇಕೆಂದಾದರೆ, ಅದಕ್ಕೆ ನೆರವಾಗುವ ಕಾನೂನು ಕಟ್ಟುಪಾಡುಗಳ ಅಂಶವೂ ಈ ನಿರ್ಣಯದಲ್ಲಿ ಅಡಕವಾಗಿರುತ್ತವೆ ಎಂದು ನಾನು ನಿರೀಕ್ಷಿಸಿದ್ದೆ. ಈ ದೃಷ್ಟಿಕೋನದಿಂದ ನೋಡಿದಾಗ, ಈ ದೇಶದಲ್ಲಿ, ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ಎಲ್ಲರಿಗೂ ದೊರಕುವಂತಾಗಲು, ಕೈಗಾರಿಕೆಗಳನ್ನು ಮತ್ತು ಭೂಮಿಯನ್ನು ರಾಷ್ಟ್ರೀಕರಣ ಮಾಡುವ ಉದ್ದೇಶಗಳನ್ನು ನಿರ್ಣಯದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕಿತ್ತು. ಸಮಾಜವಾದಿ ಮಾದರಿಯ ಅರ್ಥವ್ಯವಸ್ಥೆಯನ್ನು ಹೊಂದಿಲ್ಲದ ಒಂದು ದೇಶವು ಹೇಗೆ ತನ್ನ ಜನತೆಗೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ಒದಗಿಸುವ ಉದ್ದೇಶ ಈಡೇರಿಸಲು ಸಾಧ್ಯ ಎಂಬುದು ನನಗೆ ಅರ್ಥವಾಗುತ್ತಿಲ್ಲ".

ಉದ್ದಿಮೆಗಳು ಮತ್ತು ಭೂಮಿಯ ರಾಷ್ಟ್ರೀಕರಣಕ್ಕೆ ಕರೆ

ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾಗುವ ಮೊದಲು, ಮಾರ್ಚ್15, 1947ರಂದು, ಒಂದು ಚಾರಿತ್ರಿಕ ಮನವಿ ಪತ್ರವನ್ನು ಡಾ। ಅಂಬೇಡ್ಕರ್ ಅವರು ಸಂವಿಧಾನ ಸಭೆಗೆ ಸಲ್ಲಿಸಿದ್ದರು. ಪರಿಶಿಷ್ಟ ಜಾತಿಗಳಿಗೆ ರಕ್ಷಣೆ ಒದಗಿಸುವ ಅಂಶಗಳನ್ನು ಒಳಗೊಂಡ ಈ ದಸ್ತಾವೇಜನ್ನು (ಮನವಿ ಪತ್ರ) 'ರಾಜ್ಯಗಳು ಮತ್ತು ಅಲ್ಪಸಂಖ್ಯಾತರು' ಎಂಬ ಹೆಸರಿನಿಂದ ಕರೆಯುತ್ತಾರೆ. ಈ ದಸ್ತಾವೇಜಿನ ಒಂದು ಅತ್ಯಂತ ರ್‍ಯಾಡಿಕಲ್ ಭಾಗವೆಂದರೆ ಆರ್ಥಿಕ ಶೋಷಣೆಯ ವಿರುದ್ಧ ರಕ್ಷಣೆ ಕುರಿತಾದ್ದು. ಇದರಲ್ಲಿ ಆರ್ಥಿಕ ಶೋಷಣೆಯ ವಿರುದ್ಧ ಪ್ರಭುತ್ವವು ಜನರಿಗೆ ಯಾವ ರೀತಿಯಲ್ಲಿ ರಕ್ಷಣೆ ಒದಗಿಸಬೇಕು ಎಂಬ ಪರಿಕಲ್ಪನೆಯ ವಿವರಗಳಿವೆ. ಈ ಬಹು ಮಹತ್ವದ ಭಾಗವನ್ನು ಸಂವಿಧಾನ ಸಭೆ ಕಡೆಗಣಿಸಿತು. ಅದರಲ್ಲಿ ಆಶ್ಚರ್ಯವೇನಿಲ್ಲ ಎನ್ನುತ್ತಾರೆ ಡಾ.ಅಶೋಕ ಧವಳೆ. ಸಂವಿಧಾನ ಸಭೆಯ ವರ್ಗ ಸಂಯೋಜನೆ ಹಾಗಿತ್ತು.

ಡಾ.ಅಂಬೇಡ್ಕರ್ ಆ ದಸ್ತಾವೇಜಿನಲ್ಲಿ ಭಾರತ ಅಮೆರಿಕಾದಂತೆ ಹಲವು ಸಂಸ್ಥಾನಗಳ ಒಂದು ಒಕ್ಕೂಟ ಎಂಬ ಪರಿಕಲ್ಪನೆಯೊಂದಿಗೆ 'ಭಾರತದ ಸಂಯುಕ್ತ ಸಂಸ್ಥಾನಗಳು' ಎನ್ನುತ್ತ ಹೀಗೆ ಬರೆದಿದ್ದರು:

"ಭಾರತದ ಸಂಯುಕ್ತ ಸಂಸ್ಥಾನ ಸಂವಿಧಾನದ ಕಾನೂನಿನ ಒಂದು ಭಾಗವಾಗಿ ಹೀಗೆ ಘೋಷಿಸುತ್ತದೆ–

1. ಪ್ರಮುಖವಾಗಿರುವ, ಅಥವ ಪ್ರಮುಖವೆಂದು ಘೋಷಿಸಲ್ಪಡುವ ಉದ್ದಿಮೆಗಳು ಪ್ರಭುತ್ವದ ಒಡೆತನದಲ್ಲಿ ಇರುತ್ತವೆ ಮತ್ತು ಅವನ್ನು ಪ್ರಭುತ್ವ ನಡೆಸುತ್ತದೆ.
2. ಪ್ರಮುಖವಲ್ಲದ ಉದ್ದಿಮೆಗಳು, ಆದರೆ ಮೂಲ ಉದ್ದಿಮೆಗಳು ಪ್ರಭುತ್ವದ ಒಡೆತನದಲ್ಲಿ ಇರುತ್ತವೆ ಮತ್ತು ಅವನ್ನು ಪ್ರಭುತ್ವ ನಡೆಸುತ್ತದೆ.
3. ವಿಮೆ ಪ್ರಭುತ್ವದ ಏಕಸ್ವಾಮ್ಯದಲ್ಲಿರುತ್ತದೆ.
4. ಕೃಷಿಯು ಪ್ರಭುತ್ವ ಉದ್ದಿಮೆಯಾಗಿರುತ್ತದೆ.
5. ಪ್ರಭುತ್ವ ಇಂತಹ ಉದ್ದಿಮೆಗಳಲ್ಲಿ, ವಿಮೆಯಲ್ಲಿ ಮತ್ತು ಕೃಷಿ ಭೂಮಿಯಲ್ಲಿ ಖಾಸಗಿ ವ್ಯಕ್ತಿಗಳು ಹೊಂದಿರುವ ಹಕ್ಕುಗಳನ್ನು ಸ್ವಾಧೀನ ಪಡಿಸಿಕೊಳ್ಳುತ್ತದೆ..

....

9. ಕೃಷಿ ಉದ್ದಿಮೆಯು ಈ ಕೆಳಗಿನಂತೆ ಸಂಘಟಿಸಲ್ಪಡುತ್ತದೆ:

(ಅ) ಪ್ರಭುತ್ವ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಸ್ಟಾಂಡರ್ಡ್ ಅಳತೆಯ ಹೊಲಗಳಾಗಿ ವಿಭಜಿಸಿ ಅವನ್ನು ಹಳ್ಳಿಗಳ ನಿವಾಸಿಗಳಿಗೆ ಗೇಣಿದಾರರಾಗಿ (ಕುಟುಂಬಗಳ ಗುಂಪುಗಳು) ಈ ಕೆಳಗಿನ ಶರತ್ತುಗಳ ಮೇಲೆ ಸಾಗುವಳಿ ಮಾಡಲು ಕೊಡುತ್ತದೆ : * ಆ ಹೊಲವನ್ನು ಸಾಮೂಹಿಕ ಹೊಲವಾಗಿ ಸಾಗುವಳಿ ಮಾಡಬೇಕು. * ಸರಕಾರ ನೀಡುವ ನಿಯಮಗಳು ಮತ್ತು ನಿರ್ದೇಶನಗಳ ಪ್ರಕಾರ ಸಾಗುವಳಿ ಮಾಡಬೇಕು, * ಆ ಹೊಲದ ಮೇಲೆ ಸೂಕ್ತವಾಗಿ ಹಾಕುವ ಲೆವಿಗಳನ್ನು ಪಾವತಿ ಮಾಡಿದ ನಂತರ ಉಳಿಯುವ ಉತ್ಪನ್ನಗಳನ್ನು ನಮೂದಿಸಿದ ರೀತಿಯಲ್ಲಿ ಗೇಣಿದಾರರು ಹಂಚಿಕೊಳ್ಳಬೇಕು.

(ಆ) ಭೂಮಿಯನ್ನು ಹಳ್ಳಿಯವರಿಗೆ ಜಾತಿ, ಮತಗಳ ಭೇದವಿಲ್ಲದೆ, ಭೂಮಾಲಕ, ಗೇಣಿದಾರ ಮತ್ತು ಭೂಹೀನ ಶ್ರಮಿಕ ಇಲ್ಲದ ರೀತಿಯಲ್ಲಿ ಕೊಡಲಾಗುವುದು.

(ಇ) ಸಾಮೂಹಿಕ ಹೊಲಗಳ ಸಾಗುವಳಿಗೆ ನೀರು, ಉಳುಮೆಯ ಪ್ರಾಣಿಗಳು, ಸಲಕರಣೆಗಳು, ಗೊಬ್ಬರ, ಬೀಜಗಳು ಇತ್ಯಾದಿಗಳನ್ನು ಪೂರೈಸುವ ಮೂಲಕ ಹಣಕಾಸು ಒದಗಿಸಲು ಪ್ರಭುತ್ವ ಬಾಧ್ಯವಾಗಿರುತ್ತದೆ.


10. ಈ ಯೋಜನೆಯನ್ನು ಎಷ್ಟು ಸಾಧ್ಯವೋ ಅಷ್ಟು ಬೇಗನೇ, ಯಾವುದೇ ರೀತಿಯಲ್ಲೂ ಸಂವಿಧಾನ ಜಾರಿಗೆ ಬಂದ ಹತ್ತನೇ ವರ್ಷವನ್ನು ದಾಟದಂತೆ ಕಾರ್ಯಾನ್ವಯಗೊಳಿಸಲಾಗುತ್ತದೆ.

ಪ್ರಭುತ್ವ ಸಮಾಜವಾದದತ್ತ ಒಲವು

ಆ ದಸ್ತಾವೇಜಿಗೆ ಲಗತ್ತಿಸಿದ ವಿವರಣೆಯ ಟಿಪ್ಪಣಿಗಳಲ್ಲಿ ಅಂಬೇಡ್ಕರ್ ಇನ್ನೂ ನೇರವಾಗಿಯೇ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ:

"ಈ ಯೋಜನೆಯು, ಸಾಮೂಹಿಕ ಪದ್ಧತಿಯ ಬೇಸಾಯದಿಂದ ಕೂಡಿದ ಕೃಷಿಯು ಪ್ರಭುತ್ವದ ಒಡೆತನಕ್ಕೆ ಒಳಪಟ್ಟಿರಬೇಕೆಂದು ಸೂಚಿಸುತ್ತದೆ ಮತ್ತು ಉದ್ದಿಮೆ ಕ್ಷೇತ್ರದಲ್ಲಿ ಪ್ರಭುತ್ವ ಸಮಾಜವಾದದ ಒಂದು ಮಾರ್ಪಡಿಸಿದ ರೂಪದಲ್ಲಿರಬೇಕೆಂದು ಸೂಚಿಸುತ್ತದೆ. ಕೃಷಿಗೂ ಮತ್ತು ಉದ್ದಿಮೆಗಳಿಗೂ ಬಂಡವಾಳ ಒದಗಿಸುವ ಹೊಣೆಯನ್ನು ಪ್ರಭುತ್ವವೇ ಹೊರಬೇಕಾಗುತ್ತದೆ. ಹಾಗೆ ಮಾಡದಿದ್ದರೆ, ಕೃಷಿಯಿಂದಾಗಲಿ ಅಥವಾ ಕೈಗಾರಿಕೆಯಿಂದಾಗಲಿ ಒಳ್ಳೆಯ ಫಲಿತಾಂಶ ಬರುವುದಿಲ್ಲ. ....ಭಾರತವು ವೇಗವಾಗಿ ಕೈಗಾರಿಕರಣಗೊಳ್ಳಬೇಕಾದರೆ, ಪ್ರಭುತ್ವ ಸಮಾಜವಾದ ಅವಶ್ಯವಾಗುತ್ತದೆ. ಈ ಕೆಲಸ ಖಾಸಗಿ ಉದ್ಯಮಗಳಿಂದ ಆಗದು. ಒಂದು ವೇಳೆ ಸಾಧ್ಯವಿದ್ದರೂ ಅದು ಯೂರೋಪಿನಲ್ಲಿ ಖಾಸಗಿ ಬಂಡವಾಳಶಾಹಿಯು ಸೃಷ್ಟಿಸಿದ ರೀತಿಯಲ್ಲಿಯೇ ಅಸಮಾನತೆಗಳನ್ನು ಉಂಟುಮಾಡುತ್ತದೆ. ಅದು ನಮಗೆ ಒಂದು ಎಚ್ಚರಿಕೆಯಾಗಬೇಕು.

"ಈ ಯೋಜನೆಯಲ್ಲಿ ಎರಡು ವಿಶೇಷವಾದ ಅಂಶಗಳಿವೆ. ಮೊದಲನೆಯದು, ಆರ್ಥಿಕ ಜೀವನದ ಪ್ರಮುಖ ಕ್ಷೇತ್ರಗಳಲ್ಲಿ ಪ್ರಭುತ್ವ ಸಮಾಜವಾದ ಇರಬೇಕೆಂದು ಸೂಚಿಸುತ್ತದೆ. ಎರಡನೆಯದು, ಪ್ರಭುತ್ವ ಸಮಾಜವಾದ ನೆಲೆಗೊಳ್ಳುವ ಕ್ರಿಯೆಯನ್ನು ಶಾಸಕಾಂಗದ ಇಚ್ಚೆಗೆ ಬಿಡದಿರುವುದು. ಅಂದರೆ, ಇದು ಪ್ರಭುತ್ವ ಸಮಾಜವಾದವನ್ನು ಸಂವಿಧಾನದ ಕಾನೂನಿನ ಮೂಲಕ ಸಥಾಪಿಸುತ್ತದೆ. ಆಮೂಲಕ ಯಾವುದೇ ಶಾಸಕಾಂಗ ಅಥವ ಕಾರ್ಯಾಂಗದ ಕ್ರಿಯೆಯ ಮೂಲಕ ಇದನ್ನು ಬದಲಾಯಿಸಲು ಸಾಧ್ಯವಿಲ್ಲದಂತೆ ಮಾಡುತ್ತದೆ"


ವ್ಯಂಗ್ಯಚಿತ್ರ ಕೃಪೆ: ಮಂಜುಲ್, ಡಿಎನ್‌ಎ

ಅಂದರೆ ಮುಂದಿನ ಯಾವ ಸರಕಾರವೂ ಈ 'ಪ್ರಭುತ್ವ ಸಮಾಜವಾದೀ ಸ್ವರೂಪವನ್ನು ಬದಲಿಸುವಂತಿಲ್ಲ. ಈ ಮೇಲೆ ಹೇಳಿದಂತೆ ಡಾ। ಅಂಬೇಡ್ಕರ್ ಅವರ ಈ ತೀವ್ರಗಾಮೀ ಆರ್ಥಿಕ ವಿಚಾರಗಳಲ್ಲಿ ಯಾವುದನ್ನೂ ಸಂವಿಧಾನ ಸಭೆ ಒಪ್ಪಲಿಲ್ಲ.

1950ರ ಸುಮಾರಿನಲ್ಲಿ, ಖ್ಯಾತ ಬರಹಗಾರ ಡಾ। ಮುಲ್ಕ್ ರಾಜ್ ಆನಂದ್ ಅವರಿಗೆ ನೀಡಿದ ಸಂದರ್ಶನದಲ್ಲಿ (ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ ಸಾಪ್ತಾಹಿಕದಲ್ಲಿ ಪ್ರಕಟವಾಗಿದೆ), ಇದು ತನ್ನ ಕನಸಿನ ಸಂವಿಧಾನ ಅಲ್ಲ. ಎಂದು ಹೇಳಿದ್ದಾರೆ. ನಿರ್ದಿಷ್ಟವಾಗಿ, ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕುಗಳ ಸಾಲಿನಲ್ಲಿ ಸೇರಿಸುವುದನ್ನು ಅವರು ವಿರೋಧಿಸಿದ್ದರು. ಅದರ ಬದಲಿಗೆ, ಉದ್ಯೋಗದ ಹಕ್ಕು, ವಿದ್ಯೆಯ ಹಕ್ಕು ಮತ್ತು ಆರೋಗ್ಯದ ಹಕ್ಕುಗಳನ್ನು ಮೂಲಭೂತ ಹಕ್ಕುಗಳಲ್ಲಿ ಸೇರಿಸುವಂತೆ ಪಟ್ಟು ಹಿಡಿದುದಾಗಿ ಡಾ.ಅಂಬೇಡ್ಕರ್ ಹೇಳಿದರು. ವರ್ಷಗಳು ಉರುಳಿದಂತೆ, ದೇಶದಲ್ಲಿ ಉಂಟಾಗುತ್ತಿದ್ದ ಪರಿಸ್ಥಿತಿಯಿಂದ ಡಾ। ಅಂಬೇಡ್ಕರ್ ಎಷ್ಟೊಂದು ಭ್ರಮನಿರಸನಗೊಂಡಿದ್ದರು ಎಂದರೆ ಈ ಸಂವಿಧಾನವನ್ನು ಸುಟ್ಟುಹಾಕುವಲ್ಲಿ ತಾನೇ ಮೊದಲಿಗನಾಗುತ್ತೇನೆ ಎಂದಿದ್ದರು ಎಂಬುದನ್ನು ಡಾ.ಅಶೋಕ ಧವಳೆ ನೆನಪಿಸಿದ್ದಾರೆ.

ಸಂವಿಧಾನದ ಶಿಲ್ಪಿಯೆನಿಸಿದ್ದ ಅಂಬೇಡ್ಕರ್ ಅವರನ್ನು ಸಂಸದೀಯ ಪ್ರಜಾಪ್ರಭುತ್ವದ ಉಪಾಸಕ ಎಂದು ಭಾವಿಸಲಾಗಿದೆ. ಪ್ರಜಾಪ್ರಭುತ್ವದ ಬಗ್ಗೆ ಅವರಿಗೆ ಆಳವಾದ ಅರಿವಿತ್ತು. ನಿರಂಕುಶ ಪ್ರಭುತ್ವಕ್ಕಿಂತ(ಸರ್ವಾಧಿಕಾರ) ಸಂಸದೀಯ ಪ್ರಜಾಪ್ರಭುತ್ವ (ಬೂರ್ಜ್ವಾ ಪ್ರಜಾಪ್ರಭುತ್ವ) ಉತ್ತಮ ಎಂದು ಅರಿತಿದ್ದ ಅವರಿಗೆ ಸಂಸದೀಯ ಪ್ರಜಾಪ್ರಭುತ್ವವು ಶ್ರೀಮಂತರ ಮತ್ತು ಬಲಾಢ್ಯರ ಕೈಗೊಂಬೆಯಾಗುತ್ತದೆ ಎಂಬ ತಿಳುವಳಿಕೆ ಇತ್ತು. ಆದ್ದರಿಂದ ಅವರು ಕಾರ್ಮಿಕರ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಪ್ರಜಾಪ್ರಭುತ್ವಕ್ಕೆ ಒತ್ತುಕೊಟ್ಟಿದ್ದರು.

ಶ್ರಮಿಕರ ಪ್ರಜಾಪ್ರಭುತ್ವ/ಸಾಮಾಜಿಕ ಪ್ರಜಾಪ್ರಭುತ್ವ

ನವೆಂಬರ್ 25, 1949ರಂದು ಸಂವಿಧಾನ ರಚನಾ ಮಂಡಲಿಯ ಸಭೆಯಲ್ಲಿ ಡಾ। ಅಂಬೇಡ್ಕರ್ ಮಾಡಿದ ಕೊನೆಯ ಭಾಷಣದಲ್ಲಿ ಅವರ ವಿಚಾರಗಳು ಬಹಳ ಸ್ಪಷ್ಟವಾಗಿವೆ: "ನಮ್ಮ ಸಂಸದೀಯ ಪ್ರಜಾಪ್ರಭುತ್ವವನ್ನು ನಾವು ಒಂದು ಸಾಮಾಜಿಕ ಪ್ರಜಾಪ್ರಭುತ್ವವನ್ನಾಗಿ ಮಾಡಬೇಕಾಗಿದೆ. ಏಕೆಂದರೆ, ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿಂತಿರದ ರಾಜಕೀಯ ಪ್ರಜಾಪ್ರಭುತ್ವ ಬಹಲ ಕಾಲ ಬಾಳುವುದಿಲ್ಲ. ಸಾಮಾಜಿಕ ಪ್ರಜಾಪ್ರಭುತ್ವ ಎಂದರೇನು? ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ಜೀವನದ ತತ್ವಗಳೆಂದು ಮಾನ್ಯ ಮಾಡುವ ಬದುಕಿನ ಒಂದು ಮಾರ್ಗ. ಸ್ವಾತಂತ್ರ್ಯ, ಸಮಾನತೆ, ಸೋದರತೆಯ ತತ್ವ ತ್ರಯಗಳು ಒಂದರಲ್ಲೊಂದು ಐಕ್ಯವಾಗಿರು ತ್ರಿಮೂರ್ತಿಯಂತಿವೆ. ಈ ಮೂರು ತತ್ವಗಳಲ್ಲಿ ಒಂದರಿಂದ ಇನ್ನೊಂದನ್ನು ಬೇರ್ಪಡಿಸಿದರೆ ಪ್ರಜಾಪ್ರಭುತ್ವದ ಉದ್ದೇಶವೇ ವಿಫಲವಾಗುತ್ತದೆ....."

ಆ ಭಾಷಣದಲ್ಲಿರುವ ಎಚ್ಚರಿಕೆಯ ಮಾತುಗಳು ಹೀಗಿವೆ: "ಭಾರತೀಯ ಸಮಾಜದಲ್ಲಿ ಇಲ್ಲವೇ ಇಲ್ಲ ಎನ್ನುವ ಎರಡು ಅಂಶಗಳಿವೆ. ಮೊದಲನೆಯದು, ಸಮಾನತೆ. ಭಾರತದ ಸಮಾಜ, ಒಂದು ಶ್ರೇಣೀಕೃತ ಅಸಮಾನತೆಯ ತತ್ವದ ಮೇಲೆ ನಿಂತಿದೆ. ಕೆಲವರ ಬಳಿ ಹೇರಳವಾದ ಸಂಪತ್ತಿದೆ. ತದ್ವಿರುದ್ಧವಾಗಿ, ಬಹಳ ಮಂದಿ ದಟ್ಟ ದಾರಿದ್ರ್ಯದಲ್ಲಿದ್ದಾರೆ. ಎರಡನೆಯ ಅಂಶ, ಸೋದರತ್ವದ ತತ್ವವನ್ನು ಮಾನ್ಯ ಮಾಡದಿರುವುದು".

"1950ರ ಜನವರಿ 26ರಂದು ನಾವು ವೈರುಧ್ಯಗಳ ಒಂದು ಬದುಕಿಗೆ ಅಡಿಯಿಡುತ್ತಿದ್ದೇವೆ. ರಾಜಕೀಯದಲ್ಲಿ ಸಮಾನತೆ ಇರುತ್ತದೆ. ಮತ್ತು ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಅಸಮಾನತೆ ಇರುತ್ತದೆ. ರಾಜಕೀಯವಾಗಿ ಒಬ್ಬ ವ್ಯಕ್ತಿ ಒಂದು ಮತ; ಒಂದು ಮತ ಒಂದು ಮೌಲ್ಯ ಎನ್ನುವ ತತ್ವವನ್ನು ಮಾನ್ಯ ಮಾಡುತ್ತೇವೆ. ಆದರೆ, ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ, ನಮ್ಮ ಸಾಮಾಜಿಕ ಮತ್ತು ಆರ್ಥಿಕ ಸಂರಚನೆಯ ಕಾರಣಗಳಿಂದಾಗಿ, ಒಬ್ಬ ವ್ಯಕ್ತಿ ಒಂದು ಮೌಲ್ಯ ಎಂಬ ತತ್ವದ ನಿರಾಕರಣೆಯನ್ನು ಮುಂದುವರೆಸುತ್ತೇವೆ. ಇನ್ನೂ ಎಷ್ಟು ದಿನಗಳ ಕಾಲ ನಾವು ಈ ವೈರುಧ್ಯಗಳ ಬದುಕನ್ನು ಮುಂದುವರೆಸುತ್ತೇವೆ? ಇನ್ನೂ ಎಷ್ಟು ದಿನಗಳ ಕಾಲ ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಮಾನತೆಯ ನಿರಾಕರಣೆಯನ್ನು ನಾವು ಮುಂದುವರೆಸುತ್ತೇವೆ? ನಮ್ಮ ನಿರಾಕರಣೆ ಬಹಳ ಕಾಲ ಮುಂದುವರೆದರೆ ನಮ್ಮ ರಾಜಕೀಯ ಪ್ರಜಾಪ್ರಭುತ್ವವೇ ಗಂಡಾಂತರಕ್ಕೀಡಾಗುತ್ತದೆ. ಈ ವೈರುಧ್ಯಗಳನ್ನು ಸಾಧ್ಯವಾದಷ್ಟು ಬೇಗ ಕೊನೆಗಾಣಿಸಬೇಕು. ಇಲ್ಲದಿದ್ದರೆ, ಅಸಮಾನತೆಯಿಂದ ನರಳುತ್ತಿರುವ ಜನ ಈ ಸಂವಿಧಾನ ಸಭೆಯು ಶ್ರಮಪಟ್ಟು ನಿರ್ಮಿಸಿರುವ ರಾಜಕೀಯ ಪ್ರಜಾಪ್ರಭುತ್ವದ ಸೌಧವನ್ನು ಸ್ಫೋಟಗೊಳಿಸುತ್ತಾರೆ".

ಅಂಬೇಡ್ಕರ್ ಮತ್ತು ಮಾರ್ಕ್ಸ್‌ವಾದ

ಭಾರತದ ಕಮ್ಯೂನಿಸ್ಟ್‌ರು ಜಾತಿ ದಬ್ಬಾಳಿಕೆಯ ಸಮಸ್ಯೆಯನ್ನು ಗಂಭೀರವಾಗಿ ಕೈಗೆತ್ತಿಕೊಳ್ಳಲಿಲ್ಲ ಎನ್ನುವ ಡಾ। ಅಂಬೇಡ್ಕರ್ ಅವರ ಟೀಕೆಯನ್ನು ಪೂರ್ಣವಾಗಿ ತಳ್ಳಿಹಾಕುವಂತಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಕಾರ್ಮಿಕ ಚಳುವಳಿಯನ್ನು ಜಾತಿ–ವಿರೋಧಿ ಚಳುವಳಿಯ ಜೊತೆಯಲ್ಲಿ ಬೆಸೆಯುವ ಸಾಧ್ಯತೆ ಇತ್ತು ಎನ್ನುವ ಅಭಿಪ್ರಾಯ ಎರಡೂ ಕಡೆಗಳಲ್ಲಿದೆ. ಆ ದೋಷವನ್ನು ಈಗ ಸರಿಪಡಿಸಿಕೊಳ್ಳಲಾಗುತ್ತಿದೆ. ಭಾರತದ ಪರಿಸ್ಥಿತಿಯಲ್ಲಿ, ವರ್ಗ ಶೋಷಣೆ ಮತ್ತು ಜಾತಿ ದಬ್ಬಾಳಿಕೆಗಳು ಒಂದರೊಳಗೊಂದು ಸೇರಿಕೊಂಡಿವೆ. ಅವುಗಳ ವಿರುದ್ಧದ ಹೋರಾಟಗಳು ವರ್ಗ ಹೋರಾಟದ ಭಾಗವಾಗಿಯೇ ಇರುತ್ತವೆ. ಬೌದ್ಧ ಮತ ಮತ್ತು ಮಾರ್ಕ್ಸ್‌ವಾದಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದ ಡಾ। ಅಂಬೇಡ್ಕರ್, ಅವುಗಳ ನಡುವೆ ಅನುಸಂಧಾನ ನಡೆಯಬೇಕೆಂದು ಬಯಸಿದ್ದರು.

ಬಹಳ ಮುಖ್ಯವಾದ ಮತ್ತು ಬಹಳ ಮಂದಿಯ ಗಮನಕ್ಕೆ ಬರದೇ ಉಳಿದಿರುವ ಒಂದು ಅಂಶ ಗೋವಿಂದ್ ಪನ್ಸಾರೆಯವರು ಬರೆದಿರುವ *Religion, Caste, Class and Directions for Transformation* ಎಂಬ ಪುಸ್ತಕದಲ್ಲಿದೆ. ಅವರು ಬರೆಯುತ್ತಾರೆ: "ಅಂಬೇಡ್ಕರ್ ಮರಣ ಹೊಂದುವ ನಾಲ್ಕು ವರ್ಷಗಳ ಮುನ್ನ, 1952ರ ಒಂದು ಘಟನೆಯನ್ನು ಗಮನಿಸಬೇಕಿದೆ. ಅಂಬೇಡ್ಕರ್ ಅವರ ನಿಕಟವರ್ತಿಯಾಗಿದ್ದ ಕರ್ಮವೀರ ದಾದಾಸಾಹೇಬ್ ಗಾಯ್‌ಕ್ವಾಡ್ ಅವರ ಜೀವನ ಚರಿತ್ರೆ ಬರೆದಿರುವ ಹರಿಭಾವು ಪಗಾರೆ ಆ ಘಟನೆಯನ್ನು ದಾಖಲಿಸಿದ್ದಾರೆ. 1952ರ ಚುನಾವಣೆಗಳ ನಂತರ ಬೇಸರದ ಮನಸ್ಥಿತಿಯಲ್ಲಿ ಗಾಯ್‌ಕ್ವಾಡ್ ಅವರಿಗೆ ಬರೆದ ಒಂದು ಪತ್ರದಲ್ಲಿ ಡಾ। ಅಂಬೇಡ್ಕರ್ ಹೀಗೆ ಬರೆದಿದ್ದರು: 'ಫೆಡರೇಷನ್(Scheduled Caste Federation) ತೊರೆಯಬೇಕೆಂದು ಅನ್ನಿಸುತ್ತಿದೆ. ಅಷ್ಟೇ ಅಲ್ಲ, ರಾಜಕೀಯದಿಂದ ಸಂಪೂರ್ಣವಾಗಿ ನಿವೃತ್ತನಾಗಬೇಕೆನಿಸುತ್ತಿದೆ. ಅದು ಸುಲಭವಲ್ಲ ಎಂದು ನನಗೆ ಗೊತ್ತಿದೆ. ಆದಾಗ್ಯೂ, ನನ್ನ ರಾಜಕೀಯ ತತ್ವಶಾಸವು ತಕ್ಷಣದಲ್ಲಿ ನಮ್ಮ ಜನರ ಏಳಿಗೆಯತ್ತ ಮುನ್ನಡೆಸುತ್ತದೆ ಎಂದು ನನಗನಿಸುತ್ತಿಲ್ಲ. ನಮ್ಮ ಜನರ ದುಮ್ಮಾನಗಳನ್ನು ನಾನು ಬಲ್ಲೆ. ತಮ್ಮ ಏಳಿಗೆ ಸಾಧಿಸಲು ಅವರು ಎಷ್ಟು ಸಮಯ ಕಾಯಬಲ್ಲರು? ಕಮ್ಯೂನಿಸ್ಟ್ ಪಕ್ಷವನ್ನು ಸೇರಬೇಕೆಂಬ ಅಭಿಪ್ರಾಯದತ್ತ ಸಾಗುತ್ತಿದ್ದೇನೆ'

ಪನ್ಸಾರೆಯವರು ಬರೆಯುತ್ತಾರೆ: 'ಇದರ ಕನಿಷ್ಠ ಅರ್ಥವೆಂದರೆ, ತಮ್ಮ ತತ್ವಶಾಸ್ರದ ನಂತರ, ಡಾ। ಅಂಬೇಡ್ಕರ್ ಕಮ್ಯೂನಿಸ್ಟ್ ತತ್ವಶಾಸ್ತ್ರವನ್ನು ನಂಬಿದ್ದರು. ಅವರು ಖಂಡಿತವಾಗಿಯೂ ಅದರ ವಿರೋಧಿಯಾಗಿರಲಿಲ್ಲ'.

ಆಧಾರ: ಡಾ। ಅಶೋಕ್ ಧವಳೆಯವರ ಲೇಖನ



ಕೇರಳ: ಎಲ್‌ಡಿಎಫ್ ಚುನಾವಣಾ ಪ್ರಣಾಳಿಕೆ ಬಿಡುಗಡೆ

'ಹಸಿವು ಮುಕ್ತ' ರಾಜ್ಯದ ಗುರಿ

ಉದ್ಯೋಗ ಸೃಷ್ಟಿ–ಸಾಮಾಜಿಕ ಭದ್ರತೆಗೆ ಆದ್ಯತೆ

ಹಸಿವು ಮುಕ್ತ, ಭ್ರಷ್ಟಾಚಾರ ಮುಕ್ತ, ಜಾತ್ಯತೀತ ಕೇರಳವನ್ನು ರೂಪಿಸುವ ಭರವಸೆ ನೀಡುವ ಮತ್ತು ಉದ್ಯೋಗ ಸೃಷ್ಟಿ ಮತ್ತು ಸಾಮಾಜಿಕ ಭದ್ರತೆ ಆದ್ಯತೆಯಾಗಿರುವ ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ(ಎಲ್‌ಡಿಎಫ್)ದ ಚುನಾವಣಾ ಪ್ರಣಾಳಿಕೆ ಬಿಡುಗಡೆಯಾಗಿದೆ.

5 ವರ್ಷಗಳಲ್ಲಿ 25 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಪ್ರಣಾಳಿಕೆ ಜನತೆಗೆ ಭರವಸೆ ನೀಡಿದೆ. ಸಣ್ಣ ಕೈಗಾರಿಕೆಗಳು, ಮಾಹಿತಿ ತಂತ್ರಜ್ಞಾನ ಕ್ಷೇತ್ರ ಸೇರಿದಂತೆ ಒಟ್ಟಾರೆ ಉದ್ಯೋಗ ಸೃಷ್ಟಿಗೆ ಒತ್ತು ನೀಡುವುದಾಗಿ ಭರವಸೆ ನೀಡಲಾಗಿದೆ. 2017 ರ ಹೊತ್ತಿಗೆ ಕೇರಳದ ಎಲ್ಲ ಮನೆಗಳಿಗೂ ವಿದ್ಯುತ್ ಒದಗಿಸಲು ಬದ್ಧತೆಯನ್ನು ಪ್ರಣಾಳಿಕೆ ಘೋಷಿಸಿದೆ. ರಾಜ್ಯದಲ್ಲಿ ಸ್ವಂತ ಮನೆ ಇಲ್ಲದ ಎಲ್ಲ ಬಡವರಿಗೂ ಮನೆ, ಎಲ್ಲರಿಗೂ ಶೌಚಾಲಯದ ಭರವಸೆಯನ್ನು ಸಹ ನೀಡಲಾಗಿದೆ. ನಗರ ಪ್ರದೇಶದ ಕಸದ ಉತ್ತಮ ನಿರ್ವಹಣೆ ಯೋಜನೆಯನ್ನೂ ಪ್ರಣಾಳಿಕೆ ಒಳಗೊಂಡಿದೆ.

ಸಾಮಾಜಿಕ ಸುರಕ್ಷಾ ಪಿಂಚಣಿ ಯೋಜನೆಯ ಮೊತ್ತವನ್ನು ಮಾಸಿಕ 1000 ರೂಪಾಯಿಗಳಿಗೆ ಏರಿಸುವುದು, ಎಲ್ಲರಿಗೂ ಶಿಕ್ಷಣ, ಎಲ್ಲರಿಗೂ ಆರೋಗ್ಯ ವಿಮಾ ಸೌಕರ್ಯಗಳ ಭರವಸೆಯನ್ನು ಸಹ ಪ್ರಣಾಳಿಕೆ ನೀಡಿದೆ.

ಪರಿಸರ ಸಂರಕ್ಷಣೆ, ಜಲ ಸಂರಕ್ಷಣೆಗೆ ಒತ್ತು ನೀಡಲಾಗುವುದು ಎಂದು ಪ್ರಣಾಳಿಕೆ ಹೇಳಿದೆ. ತರಕಾರಿ ಬೆಳೆಗಳ ಸಾವಯವ ಕೃಷಿಯನ್ನು 50,000 ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸುವುದಾಗಿ ಪ್ರಣಾಳಿಕೆ ಹೇಳಿದೆ.

ಒಂದು ಸಾವಿರ ಸರಕಾರಿ ಶಾಲೆಗಳನ್ನು ಅಂತರ ರಾಷ್ಟ್ರೀಯ ಮಟ್ಟದ ಶಾಲೆಗಳನ್ನಾಗಿ ಮೇಲೆತ್ತಲು ಕ್ರಮ ವಹಿಸುವುದಾಗಿ ಪ್ರಣಾಳಿಕೆ ಹೇಳಿದೆ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಒತ್ತು ನೀಡುವುದಾಗಿ ಹೇಳಿರುವ ಪ್ರಣಾಳಿಕೆಯು ಕೇರಳವನ್ನು ಹಸಿವು ಮುಕ್ತ ರಾಜ್ಯವನ್ನಾಗಿ ಮಾಡುವ ಭರವಸೆ ನೀಡಿದೆ.

ಅಭಿವೃದ್ಧಿ ಯೋಜನೆಗಳ ವಿಕೇಂದ್ರೀಕರಣ

1996 ರಲ್ಲಿ ಎಲ್‌ಡಿಎಫ್ ಸರಕಾರ ನಡೆಸಿದಂತೆ ಅಭಿವೃದ್ಧಿ ಯೋಜನೆ ರೂಪಿಸುವಲ್ಲಿ ವಿಶಾಲ ಜನತೆ ಪಾಲ್ಗೊಳ್ಳುವ 'ಜನತಾ ಯೋಜನೆ' ಪ್ರಕ್ರಿಯೆಯನ್ನು ಮತ್ತೆ ನಡೆಸುವುದಾಗಿ ಪ್ರಾಣಾಳಿಕೆ ಹೇಳಿದೆ.

ಅಭಿವೃದ್ಧಿ ಪ್ರಕ್ರಿಯೆಯನ್ನು ಸಂಪೂರ್ಣ ವಿಕೇಂದ್ರೀಕರಣಗೊಳಿಸುವ ಬದ್ದತೆ ಘೋಷಿಸಲಾಗಿದೆ. ಗ್ರಾಮ ಪಂಚಾಯತ್ ಮತ್ತು ಗ್ರಾಮ ಸಭೆಗಳನ್ನು ಈ ಉದ್ದೇಶಕ್ಕೆ ಪೂರಕವಾಗಿ ಆಧಾರವಾಗಿ ನಡೆಸಲು ಉದ್ದೇಶಿಸಲಾಗಿದೆ. ಜಿಲ್ಲಾ ಮತ್ತು ಸಹಕಾರಿ ಬ್ಯಾಂಕುಗಳ ನಡುವೆ ಸಂಪರ್ಕ ಮತ್ತು ಸಮನ್ವಯವನ್ನು ಸಾಧಿಸಲು ಕೇರಳ ವ್ಯಾಪ್ತಿಯ ಬ್ಯಾಂಕ್ ಒಂದನ್ನು ಸ್ಥಾಪಿಸಲೂ ಉದ್ದೇಶಿಸಲಾಗಿದೆ.

ಕೇಂದ್ರ ಸರಕಾರದ ಸಹಯೋಗದೊಂದಿಗೆ ಈಗಿರುವ ರೈಲ್ವೆ ಹಳಿಗಳ ಜೊತೆಗೆ ಮತ್ತೊಂದು ಅತಿವೇಗದ ರೈಲು ಮಾರ್ಗವನ್ನು ರೂಪಿಸುವುದಾಗಿ ಪ್ರಣಾಳಿಕೆ ಭರವಸೆ ನೀಡಿದೆ.

'ಆಲ್ಕೋಹಾಲ್' ನೀತಿ

'ಆಲ್ಕೋಹಾಲ್' ನೀತಿ ಕುರಿತಂತೆ ಪ್ರಣಾಳಿಕೆ ವಿಶೇಷ ಅಂಶಗಳನ್ನು ಒಳಗೊಂಡಿದೆ.

ಆಲ್ಕೋಹಾಲ್ ಸೇವನೆಗೆ ಈಗಿರುವ ವಯೋಮಿತಿಯನ್ನು 23 ವರ್ಷಗಳಿಗೆ ಏರಿಸುವುದಾಗಿ ಪ್ರಾಣಾಳಿಕೆ ಹೇಳಿದೆ. ಎಂಟ–ರಿಂದ ಹನ್ನೆರಡನೇ ತರಗತಿಯ ಶಾಲಾ ಪಠ್ಯದಲ್ಲಿ ಕುಡಿತದ ದುಶ್ಪರಿಣಾಮಗಳ ಬಗೆಗೆ ಪಾಠವನ್ನು ಯೋಜಿಸಲಾಗುವುದು ಎಂದೂ ಪ್ರಣಾಳಿಕೆ ತಿಳಿಸಿದೆ.

ಪ್ರಣಾಳಿಕೆ ಬಿಡುಗಡೆ ಸಂದರ್ಭದಲ್ಲಿ ಎಲ್‌ಡಿಎಫ್ ಸಂಚಾಲಕರಾದ ವೈಕೋಂ ವಿಶ್ವನ್ ಅವರು ಮಾತನಾಡುತ್ತಾ ಕೇರಳ ರಾಜ್ಯದಲ್ಲಿ ಯುಡಿಎಫ್ ಸರಕಾರ 700 ಬಾರ್‌ಗಳನ್ನು ಮುಚ್ಚಿದೆ ಎಂದು ಸುಳ್ಳು ಪ್ರಚಾರ ನಡೆಸಲಾಗಿದೆ. ವಾಸ್ತವವಾಗಿ ಬಾರ್‌ಗಳನ್ನು ಬೀರ್ ಮತ್ತು ವೈನ್ ಕೇಂದ್ರಗಳಾಗಿ ಬದಲಿಸಲಾಗಿದೆ. ಆಲ್ಕೋಹಾಲ್ ಮಾರಾಟದಿಂದ ಸರಕಾರಕ್ಕೆ ಬರುವ ಆದಾಯ ಈ ಅವಧಿಯಲ್ಲಿ ಹೆಚ್ಚಾಗಿದೆ ಹೊರತು ಕಡಿಮೆಯಾಗಿಲ್ಲ ಎಂದು ತಿಳಿಸಿದ್ದಾರೆ. ●

ಗ್ರಂಥಾಲಯ ಸುಟ್ಟಲ್ಲೇ ಇನ್ನೂ ದೊಡ್ಡ ಗ್ರಂಥಾಲಯ



ಕೇರಳ ರಾಜ್ಯದ ಮಲ್ಲಪುರಂ ಜಿಲ್ಲೆಯ ತಾಲೂಕ್ಕರ ಎಂಬ ಊರಿನಲ್ಲಿ ಮಾರ್ಚ್ 22, 2016 ರಂದು ಒಂದು ವಿಷಾದನೀಯ ದುಷ್ಕೃತ್ಯವೊಂದು ಜರುಗಿತ್ತು.

ಆರೆಸ್ಸೆಸ್ ಕಾರ್ಯಕರ್ತರು ಅಂದು ಕೇರಳದ ಜನರ ಅಚ್ಚುಮೆಚ್ಚಿನ ಒಬ್ಬ ಜನನಾಯಕ ಕಾಮ್ರೇಡ್ ಎ.ಕೆ. ಗೋಪಾಲನ್ ಸ್ಮಾರಕ ಗ್ರಂಥಾಲಯಕ್ಕೆ ಬೆಂಕಿ ಇಟ್ಟಿದ್ದರು. ಬೆಂಕಿಯಲ್ಲಿ ಸು. 5000 ದಷ್ಟು ಅಮೂಲ್ಯ ಗ್ರಂಥಗಳು ಮತ್ತು ಪೀಠೋಪಕರಣಗಳು ಸುಟ್ಟು ಹೋಗಿದ್ದವು.

ಎ.ಕೆ. ಗೋಪಾಲನ್ ಅವರು ಭಾರತದ ಮೊದಲ ವಿರೋಧ ಪಕ್ಷದ ಮುಖಂಡರು. ಸಿಪಿಐ(ಎಂ)ನ ಸಂಸ್ಥಾಪಕ ಮುಖಂಡರುಗಳಲ್ಲಿ ಒಬ್ಬರು. 'ಎ.ಕೆ.ಜಿ.'

ಎಂದೇ ಹೆಸರಾದ ಈ ಕಮ್ಯೂನಿಸ್ಟ್ ದಿಗ್ಗಜನ ಮರಣ ದಿನಾಚರಣೆಯಂದು ಅವರ ಕೊಡುಗೆಯನ್ನು ಜನರು ನೆನಪಿಸಿಕೊಳ್ಳುತ್ತಿರುವಾಗಲೇ ಕೋಮುವಾದಿ ಶಕ್ತಿಗಳು ಎ.ಕೆ.ಜಿ. ಸ್ಮಾರಕ ಗ್ರಂಥಾಲಯಕ್ಕೆ ಕೊಳ್ಳಿ ಇಟ್ಟಿದ್ದರು. ಗ್ರಂಥಾಲಯಕ್ಕೆ ಬೆಂಕಿ ಇಡುವ ಮೂಲಕ ಜನರ ವೈಚಾರಿಕ ಪ್ರಜ್ಞೆಯನ್ನು ನಾಶ ಮಾಡಿ ತಮ್ಮ ಮತಾಂಧ ಆಟಗಳನ್ನು ಆಡಬಹುದು ಎಂದು ಸಂಘ ಪರಿವಾರದ ಗೂಂಡಾಗಳು ಭಾವಿಸಿದ್ದರು. ಆದರೆ ಘಟನೆಯ ಪರಿಣಾಮವು ಅವರು ಬಯಸಿದ್ದುದರ ವಿರುದ್ಧದ ಬೆಳವಣಿಗೆಗೆ ಕಾರಣವಾಗಿದೆ.

'ಪ್ರತಿಯೊಬ್ಬರೂ ಕೊಡಿ–ಒಂದು ಪುಸ್ತಕ ಕೊಡಿ' ಎಂಬ ಕರೆಗೆ ಅಪಾರ ಜನಸ್ಪಂದನೆ ದೊರೆತಿದೆ. 5,000 ಪುಸ್ತಕಗಳು ಸುಟ್ಟು ಹೋಗಿರುವ ಗ್ರಂಥಾಲಯಕ್ಕೆ 15,000 ಪುಸ್ತಕಗಳು ಕೇರಳದ ನಾನಾ ಭಾಗಗಳಿಂದ ಬಂದಿವೆ. ಬರೀ ಕೇರಳದಿಂದ ಮಾತ್ರವಲ್ಲ ಬೆಂಗಳೂರು, ಮುಂಬೈ, ದೆಹಲಿ ಮುಂತಾದ ನಗರಗಳಿಂದಲೂ ಮತ್ತು ವಿದೇಶಗಳಿಂದ ಪುಸ್ತಕಗಳು ಕೊಡುಗೆಯಾಗಿ ಬಂದಿವೆ. ಗ್ರಂಥಾಲಯಕ್ಕೆ ಪೀಠೋಪಕರಣಗಳು ಸಹ ಕೊಡುಗೆಯಾಗಿ ಬಂದಿವೆ. ತಾಲೂಕ್ಕರ ಪ್ರದೇಶದ ಈ ಗ್ರಂಥಾಲಯ ಮತ್ತು ಕೇಂದ್ರವು ಸಂಕೇತಿಸುವ ವೈಚಾರಿಕತೆಯ ಮೇಲೆ ದಾಳಿ ನಡೆದಿತ್ತು. ಆದರೆ ಈ ದಾಳಿಯಿಂದ ಪ್ರಗತಿ ವಿರೋಧಿ ಕೋಮುವಾದಿ ಶಕ್ತಿಗಳಿಗೆ ಇನ್ನೂ ದೊಡ್ಡ ಪ್ರತಿರೋಧದ ಕೇಂದ್ರವಾಗಿ ತಾಲೂಕ್ಕರ ಎದ್ದು ನಿಲ್ಲುತ್ತಿದೆ. ●

ವಿದೇಶಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದಾಗ, ವಿಶ್ವ ಆರ್ಥಿಕತೆಯಲ್ಲಿ ಬೆಳವಣಿಗೆ ಹೊಂದುತ್ತಿರುವ ಪ್ರದೇಶ ಯಾವುದು ಎಂದು ಕೇಳಿದ್ದರು. ಅದಕ್ಕೆ ಉತ್ತರಿಸಿದ ನಾನು "ಅಂದೋಮೆ ಕಾನಾ ರಾಜಾ" ಕುರುಡರ ರಾಜ್ಯದಲ್ಲಿ ಒಕ್ಕಣ್ಣಿನ ವ್ಯಕ್ತಿ ರಾಜನಂತೆ ಎಂದು ಹೇಳಿದ್ದೆ. ಆ ವಾಕ್ಯದ ಅರ್ಥ, ಜಾಗತಿಕ ಆರ್ಥಿಕತೆ ದುರ್ಬಲವಾಗಿರುವ ಸಂದರ್ಭದಲ್ಲಿ ದೇಶದ ಆರ್ಥಿಕ ಸಾಧನೆ ಪರಿಗಣನೆಗೊಳಪಡುತ್ತಿಲ್ಲ. ಆದರೆ, ನಾವು ಅಭಿವದ್ಧಿ ಪಥದತ್ತ ಸಾಗಲು ಆತುರತೆ ತೋರುತ್ತಿದ್ದೇವೆ ಎಂದು ಹೇಳುವ ಉದ್ದೇಶವಿತ್ತು

– ರಘುರಾಮ್ ರಾಜನ್,
ರಿಸರ್ವ್ ಬ್ಯಾಂಕಿನ ಗವರ್ನರ್

ಇದೇ ಮಾತನ್ನು ಕಾಂಗ್ರಸ್ಸಿಗರೋ, ಕಮ್ಯುನಿಷ್ಟರೋ ಹೇಳಿದ್ದರೆ 'ಭಕ್ತರ' ಬಾಯಿಂದ ಎಂತೆಂತಹ ಕೊಳಕು ಪದಗಳು ಬರುತ್ತಿದ್ದವೋ ಏನೋ! ಆದರೆ, ದೇಶದ ಆರ್ಥಿಕ ಪರಿಸ್ಥಿತಿ ಎಷ್ಟೊಂದು ಹದಗೆಟ್ಟಿದೆ ಎಂಬುದನ್ನು ಮೋದಿ ಆಸ್ಥಾನದ ವಿದ್ವಾಂಸರೇ ಒಂದೇ ವಾಕ್ಯದಲ್ಲಿ ಹೇಳಿ ಮುಗಿಸಿದ್ದಾರೆ.

ತಮಿಳುನಾಡು 25 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ತಮಿಳು ನಾಡಿನ ವಿಧಾನ ಸಭಾ ಚುನಾವಣಾ ಪ್ರಕ್ರಿಯೆಗಳು ದಿನೇ ದಿನೇ ತೀವ್ರಗೊಳ್ಳುತ್ತಿವೆ. ಸಿಪಿಐ(ಎಂ), ಸಿಪಿಐಗಳು ಬಾಗವಾಗಿರುವ 'ಜನತಾ ಕಲ್ಯಾಣ ರಂಗ (ಪಿಡಬ್ಲ್ಯೂಎಫ್) ಮತ್ತು ನಟ ವಿಜಯ್ ಕಾಂತ್ ನೇತೃತ್ವದ ಡಿಎಂಡಿಕೆ ಒಟ್ಟುಗೂಡಿದ ಹೊಂದಾಣಿಕೆಯು ಪ್ರಬಲವಾದ ಸವಾಲನ್ನೇ ಒಡ್ಡಿದೆ.

ಚನ್ನೈ ಉತ್ತರ ವಿಧಾನ ಸಭಾ ಕೇತ್ರದಲ್ಲಿ ಸ್ಪರ್ಧಿಸುತ್ತಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯೆ ಕಾಂ. ವಾಸುಕಿ ಸೇರಿದಂತೆ ಒಟ್ಟು 25 ಜನ ಸಿಪಿಐ(ಎಂ) ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ.



ಪ. ಬಂಗಾಳ 4ನೇ ಸುತ್ತು: ಸಿಪಿಐ(ಎಂ) ನ ತಹಿದುಲ್ ಇಸ್ಲಾಂ ಕೊಲೆ

ಪ. ಬಂಗಾಳದಲ್ಲಿ 4ನೇ ಸುತ್ತಿನಲ್ಲಿ 62 ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಚುನಾವಣೆಯಲ್ಲಿ ತೃಣಮೂಲ ಗೂಂಡಾಗಳು ಹಲವು ಕಡೆ ಬೂತ್ ವಶಪಡಿಸಿಕೊಳ್ಳಲು ಪ್ರಯತ್ನಿಸಿದ್ದು, ಅದಕ್ಕೆ ಪ್ರತಿ–ರೋಧ ಒಡ್ಡಿದ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಜಿತ್ಪುರ್ ದೊಮ್ಕೊಲ್ ಎಸಿ ಮತಗಟ್ಟೆಯಲ್ಲಿ ನಡೆದ ಇಂತಹ ಹಲ್ಲೆಯಲ್ಲಿ ಸಿಪಿಐ(ಎಂ) ನ ಮತಗಟ್ಟೆ ಏಜೆಂಟ್ ತಹಿದುಲ್ ಇಸ್ಲಾಂ ಹುತಾತ್ಮರಾಗಿದ್ದಾರೆ.



ನಮ್ಮ ಚುರು-ಟ್ವೀಟ್

@SurjyaKMishra

ತಹಿದುಲ್ ಇಸ್ಲಾಂ ಅವರ ಬಲಿದಾನ
ವ್ಯರ್ಥವಾಗದು !
ನಮ್ಮ ಕೊನೆಯ ರಕ್ತ ಹನಿ ಇರುವವರೆಗೂ
ತೃಣಮೂಲ ಗೂಂಡಾಗಳಿಗೆ ಬೂತ್
ವಶಪಡಿಸಿಕೊಳ್ಳಲು ಬಿಡುವುದಿಲ್ಲ.
ಜನತೆ ತೃಣಮೂಲ ಕಾಂಗ್ರೆಸನ್ನು
ಸರಕಾರದಿಂದ ಹೊರಗೆ ದಬ್ಬುತ್ತಾರೆ.

– ಸೂರ್ಯಕಾಂತ ಮಿಶ್ರ
– ಪ.ಬಂಗಾಳ ಸಿಪಿಐ(ಎಂ) ಕಾರ್ಯದರ್ಶಿ

(5 ಭಾಗಗಳಲ್ಲಿ ಪ್ರಕಟವಾಗಲಿರುವ ಲೇಖನದ 3ನೇ ಭಾಗ)

ಇನ್ನುಳಿದ ಎಡ ಮತ್ತು ಪ್ರಗತಿಪರ ಚಿಂತನೆಗಳಾದ ಸಮಾಜವಾದಿಗಳು ಮತ್ತು ಸುಧಾರಣಾವಾದಿಗಳಿಗೆ ಹೋಲಿಸಿದರೂ ಕೂಡ ಮೂಲಭೂತ ವಿಷಯಗಳ ಬಗ್ಗೆ ಅಂಬೇಡ್ಕರ್ ಮತ್ತು ಕಮ್ಯೂನಿಸ್ಟ ಚಿಂತನೆಗಳ ನಡುವೆಯೇ ಅತಿ ಹೆಚ್ಚು ಸಮಾನ ಚಿಂತನೆ ಇದ್ದುದು ಸ್ಪಷ್ಟವಾಗುತ್ತದೆ. ಆದರೂ ಕೂಡ ಈ ಎರಡೂ ಸಾಮಾಜಿಕ ಚಳುವಳಿಯ ಧಾರೆಗಳು ಒಂದಾಗಿ ಕೆಲಸ ಮಾಡಲಾಗದ್ದು ಭಾರತದ ಜನ ಸಾಮಾನ್ಯರ, ದಲಿತರ, ಇತರ ಕೆಳ ಜಾತಿಗಳ ಬದುಕಿನಲ್ಲಿ ದೊಡ್ಡ ತಿರುವನ್ನು ತರುವುದಕ್ಕೆ ಅಡ್ಡಗಲ್ಲಾಯಿತು. ಒಟ್ಟಾರೆ ಭಾರತದಲ್ಲಿ ಆಮೂಲಾಗ್ರ ಸಾಮಾಜಿಕ ಬದಲಾವಣೆಯನ್ನು ತರುವ ಸಾಧ್ಯತೆಯನ್ನೂ ಇಲ್ಲಿಯವರೆಗೆ ಇಲ್ಲವಾಗಿಸಿದೆ. ಇದಕ್ಕೇನು ಕಾರಣ ಎಂಬ ಬಗ್ಗೆ ಗಂಭೀರ ಅನ್ವೇಷಣೆ ಕೈಗೊಳ್ಳಬೇಕಾದ್ದು ಅತ್ಯಗತ್ಯ.



ಅಂಬೇಡ್ಕರ್ ಮತ್ತು ಎಡಪಂಥ : ಭಾಗ-3

ಎರಡೂ ಚಳುವಳಿಗಳೂ ಏಕೆ ಒಂದಾಗಿ ಕೆಲಸ ಮಾಡಲಿಲ್ಲ?

ಜಿ.ಎನ್. ನಾಗರಾಜ್

ಈ ನಿರ್ಣಯಕ್ಕೆ ಅನುಸಾರವಾಗಿ ಧೇಶದ್ಯಂತ ಕಮ್ಯೂನಿಸ್ಟ್ ನಾಯಕರು ತಮ್ಮ ತಮ್ಮ ಪ್ರದೇಶಗಳಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ಹಲವಾರು ಹೋರಾಟಗಳನ್ನು ಕೈಗೊಂಡರು ಅಥವಾ ಭಾಗವಹಿಸಿದರು. ಈ ಬಗ್ಗೆ ಏಪ್ರಿಲ್ 2012 ರ ಸಂವಾದ ಮಾಸ ಪತ್ರಿಕೆಯ–ಅಂಬೇಡ್ಕರ್ ವಿಶೇಷಾಂಕದಲ್ಲಿ ಮತ್ತು ಜನಶಕ್ತಿಯಲ್ಲಿ "ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟದಲ್ಲಿ ಕಮ್ಯೂನಿಸ್ಟರು" ಎಂಬ ಲೇಖನದಲ್ಲಿ ಮುಖ್ಯ ಹೋರಾಟಗಳ ವಿವರಗಳನ್ನು ನೀಡಿದ್ದೇನೆ. ಕೇರಳದಲ್ಲಿ ಮುಂದೆ ಪ್ರಸಿದ್ಧ ನಾಯಕರು ಮತ್ತು ಭಾರತದ ಮೊದಲ ವಿರೋಧ ಪಕ್ಷದ ನಾಯಕರೂ ಆಗಿದ್ದ ಎ.ಕೆ. ಗೋಪಾಲನ್ ರವರು ನೇತೃತ್ವ ವಹಿಸಿದ್ದ ವೈಕ್ಕಂ ಸತ್ಯಾಗ್ರಹ, ಒಂದು ವರ್ಷ ದೀರ್ಘಕಾಲ ನಡೆದ ಗುರುವಾಯೂರು ಕೃಷ್ಣ ದೇವಾಲಯ ಪ್ರವೇಶದ ಸತ್ಯಾಗ್ರಹ, (ಇಡೀ ಕೇರಳದಲ್ಲಿ ಒಂದು ಸಾವಿರ ಕಿ.ಮೀ ಕಾಲ್ನಡಿಗೆ ಜಾಥಾದ ಮೂಲಕ ಎಚ್ಚರವನ್ನು ಮೂಡಿಸಲಾಯಿತು.) ಭಾರತದಲ್ಲಿ ಪ್ರಸಿದ್ಧವಾಗಿದೆ. ಈ ಕಾರಣಕ್ಕಾಗಿಯೇ ಅವರ ಹೆಂಡತಿ ಅವರನ್ನು ತ್ಯಜಿಸುವಂತಹ ಪ್ರಸಂಗವೂ ಆಯಿತು. ಹೀಗೆಯೇ ಇ.ಎಮ್.ಎಸ್ ನಂಬೂದರಿಪಾದ್, ಪಿ. ಸುಂದರಯ್ಯ, ಪಿ.ರಾಮಮೂರ್ತಿ, ಎಂ ಬಸವಪುನ್ನಯ್ಯ, ಜ್ಯೋತಿ ಬಸು, ಪ್ರಮೋದ್ ದಾಸ್ ಗುಪ್ತ, ಸುರ್ಜಿತ್ ಎಂಬ ಮಾರ್ಕ್ಸ್‌ವಾದೀ ಪಕ್ಷದ ನವರತ್ನಗಳೆಂದು ಹೆಸರಾದವರೆಲ್ಲರೂ ಅವರ ರಾಜ್ಯಗಳಲ್ಲಿ ಜಾತಿ ಬೇಧಗಳ ವಿರುದ್ಧ, ಅಸ್ಪೃಶ್ಯತೆಯ ವಿರುದ್ಧ ಅನೇಕ ಹೋರಾಟಗಳು ಮತ್ತು ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಚೆನ್ನೈ ನ ಐಯ್ಯಂಗಾರ್‌ಗಳಿಗೆ ಸೇರಿದ ಪ್ರಸಿದ್ಧ ಪಾರ್ಥಸಾರಥಿ ದೇವಾಲಯದ ಟ್ರಸ್ಟ್ ಗೆ ಇನ್ನೂರು ಚಮ್ಮಾರರನ್ನು ಸದಸ್ಯರನ್ನಾಗಿ ಸೇರಿಸಿ ಅವರನ್ನು ದೇವಾಲಯದ ಮಾಲೀಕರನ್ನಾಗಿಸಿದ್ದು ಅದನ್ನುಪಯೋಗಿಸಿ ದೇವಾಲಯ ಪ್ರವೇಶ ದೊರಕಿಸಿದ್ದು ಮತ್ತೊಂದು ವಿಶೇಷ ಪ್ರಸಂಗ. ಕಮ್ಯೂನಿಸ್ಟ ಪಕ್ಷ ಭೂಮಿ ಹೋರಾಟಗಳು, ಕಾರ್ಮಿಕ ಹೋರಾಟಗಳ ಜೊತೆ ಜೊತೆಗೇ ಅಸ್ಪೃಶ್ಯತೆಯ ಮತ್ತು ಜಾತಿ ಬೇಧಗಳ ವಿರುದ್ಧ ಹೋರಾಟಗಳನ್ನು ಕೈಗೊಂಡಿತು. ಅಂಬೇಡ್ಕರ್ ರವರ ಪ್ರಸಿದ್ಧ ಮಹಾಡ್ ಸತ್ಯಾಗ್ರಹದ ಮುಖ್ಯ ಸಂಘಟಕರಾಗಿದ್ದವರು ಆರ್ ಬಿ. ಮೋರೆ ಎಂಬ ದಲಿತರು ಮುಂದೆ ಮಹರಾಷ್ಟ್ರದ ಪ್ರಸಿದ್ಧ ಕಮ್ಯೂನಿಸ್ಟ ನಾಯಕರಲ್ಲೊಬ್ಬರಾದರು.

ಇವುಗಳ ಜೊತೆಗೆ ಭಾರತಾದ್ಯಂತ ಪ್ರಸಿದ್ಧವಾದ ಭೂ ಹೋರಾಟಗಳು–ತೆಲಂಗಾಣ, ತೇಭಾಗ, ಆಧಿಬಾಗ್ ವಾರಲೀಯರ ಹೋರಾಟ ಮೊದಲಾದ ಅನೇಕ ಹೋರಾಟಗಳು ದಲಿತ ಮತ್ತು ದಲಿತೇತರರ ನಡುವೆ ಒಗ್ಗಟ್ಟು ಮೂಡುವಂತೆ ಮಾಡಿದವು. ಮತ್ತು ಪಾಳೆಯಗಾರೀ ಹಳ್ಳಿಗಳಲ್ಲಿ ಅಸ್ಪೃಶ್ಯತೆಯ ಕಟ್ಟಲೆಗಳನ್ನು ಹೇರುತ್ತಿದ್ದ, ದಲಿತರನ್ನು ಹಿಂಸಿಸುತ್ತಿದ್ದ ಭೂಮಾಲಕರ ಶಕ್ತಿಯನ್ನು ಉಡುಗಿಸಿದವು. ಡಾ ಅಂಬೇಡ್ಕರ್ ರವರೂ ಕೂಡ ಭೂಮಿಯ ಪ್ರಶ್ನೆಗಳ ಬಗ್ಗೆ ಹೋರಾಟ ಮಾಡುವ ಅವಶ್ಯಕತೆಯನ್ನು ಮನಗಂಡಿದ್ದರೆಂಬುದನ್ನು ಅವರು ನಾಯಕತ್ವ ನೀಡಿದ ಕೊಂಕಣ ಪ್ರದೇಶದ ಖೋತಿ ಪದ್ಧತಿಯ ವಿರುದ್ಧ ಹಾಗೂ ಮಹಾರ್ ವತನ್ ಪದ್ಧತಿಯ ವಿರುದ್ಧ ಕೈಗೊಂಡ ಹೋರಾಟಗಳು ಎತ್ತಿ ತೋರಿಸುತ್ತವೆ.

ಅಂಬೇಡ್ಕರ್ ಮತ್ತು ಕಮ್ಯೂನಿಸ್ಟ್ ಚಳುವಳಿ ದೂರವಾಗಲು ಕಾರಣಗಳು

ಗಾಂಧೀವಾದವಂತೂ ಬಹಳ ದೂರ, ಇನ್ನುಳಿದ ಎಡ ಮತ್ತು ಪ್ರಗತಿಪರ ಚಿಂತನೆಗಳಾದ ಸಮಾಜವಾದಿಗಳು ಮತ್ತು ಸುಧಾರಣಾವಾದಿಗಳಿಗೆ ಹೋಲಿಸಿದರೂ ಕೂಡ ಮೂಲಭೂತ ವಿಷಯಗಳ ಬಗ್ಗೆ ಅಂಬೇಡ್ಕರ್ ಮತ್ತು ಕಮ್ಯೂನಿಸ್ಟ ಚಿಂತನೆಗಳ ನಡುವೆಯೇ ಅತಿ ಹೆಚ್ಚು ಸಮಾನ ಚಿಂತನೆ ಇದ್ದುದು ಸ್ಪಷ್ಟವಾಗುತ್ತದೆ. ಆದರೂ ಕೂಡ ಈ ಎರಡೂ ಸಾಮಾಜಿಕ ಚಳುವಳಿಯ ಧಾರೆಗಳು ಒಂದಾಗಿ ಕೆಲಸ ಮಾಡಲಾಗದ್ದು ಭಾರತದ ಜನ ಸಾಮಾನ್ಯರ, ದಲಿತರ, ಇತರ ಕೆಳ ಜಾತಿಗಳ ಬದುಕಿನಲ್ಲಿ ದೊಡ್ಡ ತಿರುವನ್ನು ತರುವುದಕ್ಕೆ ಅಡ್ಡಗಲ್ಲಾಯಿತು. ಒಟ್ಟಾರೆ ಭಾರತದಲ್ಲಿ ಆಮೂಲಾಗ್ರ ಸಾಮಾಜಿಕ ಬದಲಾವಣೆಯನ್ನು ತರುವ ಸಾಧ್ಯತೆಯನ್ನೂ ಇಲ್ಲಿಯವರೆಗೆ ಇಲ್ಲವಾಗಿಸಿದೆ. ಇದಕ್ಕೇನು ಕಾರಣ ಎಂಬ ಬಗ್ಗೆ ಗಂಭೀರ ಅನ್ವೇಷಣೆ ಕೈಗೊಳ್ಳಬೇಕಾದ್ದು ಅತ್ಯಗತ್ಯ.

ಈ ಕಾರಣಗಳ ಬಗ್ಗೆ ಅಂಬೇಡ್ಕರ್ ವಾದದಿಂದ ಪ್ರಭಾವಿತರಾಗಿ ಮಹಾಡ್ ಸತ್ಯಾಗ್ರಹದ ಮುಖ್ಯ ಸಂಘಟಕರಾಗಿದ್ದ ರಾಮಚಂದ್ರ ಮೋರೆ, ಮಹಾರಾಷ್ಟ್ರದ ಪ್ರಮುಖ ದಲಿತ ಚಿಂತಕರಲ್ಲೊಬ್ಬರಾಗಿದ್ದ ರಾವ್ ಸಾಹೇಬ್ ಕಸ್ಬೆ ಮತ್ತು ಮಹಾರಾಷ್ಟ್ರದ ಕಮ್ಯೂನಿಸ್ಟ್ ನಾಯಕರಾದ ಪ್ರಭಾಕರ್ ಸಂಝ್‌ಗಿರಿ ಇವರುಗಳು ಗಮನ ಹರಿಸಿದ್ದಾರೆ. ಅವರುಗಳ ವಿಶ್ಲೇಷಣೆ ಮತ್ತು ನನ್ನದೇ ಅಧ್ಯಯನಗಳ ಪ್ರಕಾರ ಈ ಕೆಳಗಿನ ಕಾರಣಗಳು ಮುಖ್ಯವೆಂದು ಕಂಡಿವೆ.

1. ಸ್ವಾತಂತ್ರ್ಯ ಚಳುವಳಿಯ ಬಗೆಗಿನ ದೃಷ್ಟಿಕೋನ:

"ಭಾರತ ಸ್ವಾತಂತ್ರ್ಯ ಪಡೆದರಷ್ಟೇ ಸಾಲದು. ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಹಕ್ಕುಗಳು ಎಲ್ಲರಿಗೂ ಸಮಾನವಾಗಿ ದೊರಕುವಂತಾಗಬೇಕು "ಇದು 'ಮೂಕನಾಯಕ 'ಪತ್ರಿಕೆಯಲ್ಲಿ ತಮ್ಮ ರಾಜಕೀಯ ಜೀವನದ ಆರಂಭದಲ್ಲಿಯೇ ಡಾ, ಅಂಬೇಡ್ಕರ್ ರವರು ವ್ಯಕ್ತಪಡಿಸಿದ ಅಭಿಪ್ರಾಯ. ಈ ಬಗ್ಗೆ ಕಮ್ಯೂನಿಸ್ಟರಿಗೆ ಸಂಪೂರ್ಣ ಸಹಮತವಿತ್ತು. ಅದೇ ಸಮಯದಲ್ಲಿ ಬ್ರಿಟಿಷರು ಇಡೀ ಭಾರತವನ್ನು ಹಲವು ರೀತಿಯ ಶೋಷಣೆಗೆ ಒಳಪಡಿಸುತ್ತಿರುವುದಲ್ಲದೆ, ಜಾತಿ ವ್ಯವಸ್ಥೆ ಮತ್ತು ಪಾಳೆಯಗಾರೀ ಮೌಲ್ಯಗಳ ಮೂಲಾಧಾರವಾದ ರಾಜ–ನವಾಬರುಗಳಿಗೆ ಮತ್ತು ಜಮೀನುದಾರರಿಗೆ ಬೆಂಬಲ ನೀಡುತ್ತಾ ತಮ್ಮ ಶೋಷಣೆಗೆ ಬೆಂಬಲ ಪಡೆಯುತ್ತಿದ್ದಾರೆ. ಆದ್ದ–ರಿಂದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಸೆಣಸುವುದರ ಜೊತೆಯಲ್ಲಿಯೇ ಜಾತಿ ವ್ಯವಸ್ಥೆ ಮತ್ತು ಪಾಳೆಯಗಾರೀ ದಬ್ಬಾಳಿಕೆಗಳ ವಿರುದ್ಧವೂ ಏಕಕಾಲಕ್ಕೆ ಹೋರಡಬೇಕು. ಜನರಲ್ಲಿ ಎರಡರ ಬಗ್ಗೆಯೂ ಎಚ್ಚರ ಬೆಳೆಸಬೇಕು ಮತ್ತು ಸಂಘಟಿಸಬೇಕು ಎಂಬುದು ಕಮ್ಯೂನಿಸ್ಟರ ಅಭಿಪ್ರಾಯ. ಆದ್ದರಿಂದ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯನ್ನು ಮೊದಲ ಬಾರಿಗೆ ಎತ್ತಿದರು ಎಂಬುದನ್ನು ಮೇಲೆ ವಿವರಿಸಲಾಗಿದೆ. ಆದರೆ ಅಂಬೇಡ್ಕರ್ ರವರು ಮೊದಲು ಸಾವಿರಾರು ವರ್ಷಗಳ ಜಾತಿ ದಬ್ಬಾಳಿಕೆಯಿಂದ ಸ್ವಾತಂತ್ರ್ಯ ಸಿಗಬೇಕು ಎಂಬ ನಿಲುವನ್ನು ತಳೆದರು. ಜೊತೆಗೆ ಬ್ರಿಟಿಷ್ ಸರ್ಕಾರವನ್ನು ಬಳಸಿ ದಲಿತರ ಹಕ್ಕುಗಳನ್ನು ಸಾಧಿಸಬೇಕು ಎಂಬ ಚಿಂತನೆ ಅವರದು. ಅದರಂತೆ ಬ್ರಿಟಿಷರಿಂದ ನಾಮಕರಣಗೊಂಡ ಸದಸ್ಯರಾಗಿ ವಿಧಾನ ಸಭೆಯಲ್ಲಿ ಕೆಲಸ ಮಾಡಿದರು., ಕೇಂದ್ರ ಮಂತ್ರಿಯಾಗಿ ಹೊಣೆಯನ್ನು ನಿರ್ವಹಿಸಿದರು. ಸೈಮನ್‌ಟೆಂಬುವರ ನೈತೃತ್ವದಲ್ಲಿ ಬ್ರಿಟಿಶ್ ಸರ್ಕಾರ ಒಂದು ಆಯೋಗವನ್ನು ನೇಮಿಸಿದಾಗ ಕಾಂಗ್ರೆಸ್ ಮಾತ್ರವಲ್ಲದೆ ಎಲ್ಲ ಧಾರೆಗಳ ಸ್ವಾತಂತ್ರ್ಯ ಹೋರಾಟಗಾರರು ಅದನ್ನು ಬಹಿಷ್ಕರಿಸಬೇಕೆಂದು ತೀರ್ಮಾನಿಸಿದರು. ಸೈಮನ್ ಗೋಬ್ಯಾಕ್ ಎಂದು ದೇಶದ ಅನೇಕ ಕಡೆ ಪ್ರತಿಭಟನೆಗಳು ನಡೆಯುವಾಗ ಅಂಬೇಡ್ಕರ್ ರವರು ಅದೇ ಕಮಿಷನ್ ಮುಂದೆ ಹಾಜರಾಗಿ ಮನವಿ ಸಲ್ಲಿಸಿದರು.

ಕಮ್ಯೂನಿಸ್ಟರು ಆರಂಭದಿಂದಲೂ ಬ್ರಿಟಿಷ್ ಸರ್ಕಾರದಿಂದ ನಿಷೇಧಕ್ಕೊಳಗಾಗಿ ಭೂಗತರಾಗಿ ಅಥವಾ ಬೇರೆ ಬೇರೆ ಸಂಘಟನೆಗಳ ಮೂಲಕ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದರಲ್ಲದೇ ಹತ್ತಾರು ಪಿತೂರಿ ಮತ್ತು ದೇಶದ್ರೋಹದ (ಈಗ ಪ್ರಸಿದ್ಧವಾದ ಸೆಡಿಷನ್) ಮೊಕದ್ದಮೆಗಳಿಂದ ಪೀಡಿತರಾಗಿದ್ದರು. ಹೀಗೆ ಬ್ರಿಟಿಷರಿಗೂ ಕಮ್ಯೂನಿಸ್ಟರಿಗೂ ಮಸೆದಿತ್ತು ಕದನ. ಗಾಂಧೀಜಿಯವರು ಮತ್ತು ಕಾಂಗ್ರೆಸ್ ಆಗಾಗ್ಗೆ ರಾಜಿ ಒಪ್ಪಂದಗಳ ಮೂಲಕ ಚಳುವಳಿಯನ್ನು ಸ್ಥಗಿತಗೊಳಿಸುತ್ತಿದ್ದರು. ಕಮ್ಯೂನಿಸ್ಟರು ಕಾಂಗ್ರೆಸನ್ನು ತೀವ್ರವಾಗಿ ಟೀಕೆಗೊಳಪಡಿಸಿ ನಿರಂತರ ಹೋರಾಟ ಸಾಗಿಸುತ್ತಿದ್ದರು. ಅಂದಿನ ಭಾರತದಲ್ಲಿ ಸ್ವಾತಂತ್ರ್ಯದ ಪ್ರಶ್ನೆ ಉಳಿದೆಲ್ಲ ವಿಷಯಗಳ ಮೇಲೂ ಪ್ರಭಾವ ಬೀರುವ ಕೇಂದ್ರ ವಿಷಯವಾಗಿತ್ತು. ಈ ಸನ್ನಿವೇಶ ಇಬ್ಬರನ್ನೂ ಎದುರು ಬದುರಾಗಿ ನಿಲ್ಲಿಸಿತ್ತು.

2. ಜಾತಿ ಬೇಧದ ಮತ್ತು ಅಸ್ಪೃಶ್ಯತೆಯ ಪ್ರಶ್ನೆಗಳು :

ಕಮ್ಯೂನಿಸ್ಟರು ಮೇಲೆ ವಿವರಿಸಿದಂತೆ ಜಾತಿ ಭೇದದ, ಅಸ್ಪೃಶ್ಯತೆಯ ಅಮಾನವೀಯತೆಯ ಪ್ರಶ್ನೆಗಳನ್ನು ಕೈಗೆತ್ತಿಕೊಂಡರೂ ಕೂಡ ಚಳುವಳಿ ಬೆಳೆದಂತೆ ಕಾರ್ಮಿಕರ ಮತ್ತು ರೈತರ ಪ್ರಶ್ನೆಗಳಿಗೆ, ಭೂಮಿಯ ಪ್ರಶ್ನೆಗಳಿಗೆ ನೀಡಿದ ಆದ್ಯತೆಯನ್ನು ಅವುಗಳಿಗೆ ನೀಡಲಿಲ್ಲ. ಜಾತಿ ವ್ಯವಸ್ಥೆಯ ವಿರುದ್ಧ ಮಾಡಿದ ಹೋರಾಟಗಳು ಅವರ ಪ್ರದೇಶದಲ್ಲಿ ಮಾತ್ರ ಪ್ರಚುರವಾದವು. ಭೂಮಿಯ ಮೇಲಿನ ಹಿಡಿತ ಮತ್ತು ಕಾರ್ಮಿಕರ ಜೀವನ ಮೊದಲಾದ ವರ್ಗ ಪ್ರಶ್ನೆಗಳ ಮೇಲೆ ಮಾಡಿದ ಹೋರಾಟಗಳು ದೇಶವ್ಯಾಪಿಯಾಗಿ ಪ್ರಸಿದ್ಧವಾದವು. ಹೀಗಾಗಿ ಕಮ್ಯೂನಿಸ್ಟರಿಗೆ ಕೇವಲ ವರ್ಗ ಪ್ರಶ್ನೆ ಮಾತ್ರ ಮುಖ್ಯ ಎಂಬ ಭಾವನೆ ಬೆಳೆಯಿತು. ಅದೇ ಸಮಯದಲ್ಲಿ ಭೂ ಹೋರಾಟದ ಮೂಲಕ ಪಾಳೆಯಗಾರೀ ವ್ಯವಸ್ಥೆಯನ್ನು ಕೊನೆಗೊಳಿಸಿದರೆ ಅದರ ಭಾಗವಾದ ಜಾತಿ ವ್ಯವಸ್ಥೆ ಅದರ ಜೊತೆಗೇ ಕೊನೆಗೊಳ್ಳುತ್ತದೆ ಎಂಬ ತಪ್ಪು ತಿಳುವಳಿಕೆಯೂ ಕೂಡ ಇದಕ್ಕೆ ಕಾರಣ. ಈ ತಪ್ಪು ತಿಳುವಳಿಕೆಗಳ ಕಾರಣವಾಗಿ ಮಹಾಡ್ ಸತ್ಯಾಗ್ರಹ ಮೊದಲಾದ ಹೋರಾಟಗಳ ಸಮಯದಲ್ಲಿ ಅದಕ್ಕೆ ತನ್ನ ಎಲ್ಲಾ ಬೆಂಬಲ ನೀಡುವುದು ಮಾತ್ರವಲ್ಲ ಆ ಹೋರಾಟವನ್ನು ವ್ಯಾಪಕಗೊಳಿಸುವುದು ಕಮ್ಯೂನಿಸ್ಟರ ಕರ್ತವ್ಯವಾಗಿತ್ತು. ಆದರೆ ಅದನ್ನು ನಿರ್ವಹಿಸುವುದರಲ್ಲಿ ವಿಫಲವಾದರು.

3. ಕಾರ್ಮಿಕ ಹೋರಾಟಗಳು :

ಅಂದು ಕಮ್ಯೂನಿಸ್ಟ್ ಪಕ್ಷ ದೇಶದಾದ್ಯಂತ ಕಾರ್ಮಿಕರನ್ನು ಸಂಘಟಿಸಿ ಅಂದು ನೀಡಲಾಗುತ್ತಿದ್ದ ಅತ್ಯಲ್ಪ ವೇತನ ಮತ್ತು ಇತರ ಬದುಕಿನ ಸಮಸ್ಯೆಗಳ ಆಧಾರದ ಮೇಲೆ ಹೋರಾಟಗಳಿಗೆ ನೇತೃತ್ವ ನೀಡುತ್ತಿತ್ತು. ಬಾಂಬೆಯಲ್ಲಿ ಜವಳಿ ಗಿರಣಿ ಕಾರ್ಮಿಕರ ಮುಷ್ಕರಗಳನ್ನು 1924, 1925, 1928, 1929, 1934ರಲ್ಲಿ ಸಂಘಟಿಸಿತು. ಅದರಲ್ಲಿಯೂ 1928–33 ರ ನಡುವಣ ವಿಶ್ವ ಆರ್ಥಿಕ ಮಹಾ ಕುಸಿತದ ಸಮಯದಲ್ಲಿ ಅವರ ಕಷ್ಟ ಪರಂಪರೆ ಹೇಳತೀರದು. ಆಗ ನಡೆದ ಮುಷ್ಕರ ಭಾರತದ ಇತಿಹಾಸದಲ್ಲಿ ಅತಿ ವ್ಯಾಪಕ ಮುಷ್ಕರವಾಗಿತ್ತು. ಈ ಮುಷ್ಕರವೂ ಸೇರಿದಂತೆ ಈ ಎಲ್ಲಾ ಮುಷ್ಕರಗಳಲ್ಲಿ ದಲಿತ ಕಾರ್ಮಿಕರು ಭಾಗವಹಿಸದಂತೆ ಅಂಬೇಡ್ಕರ್ ಕರೆ ನೀಡಿದರು. ಈ ಮುಷ್ಕರಗಳೆಲ್ಲಾ ರಾಜಕೀಯ ಪ್ರೇರಿತ ಎಂಬುದವರ ಕಾರಣವಾಗಿತ್ತು. ಇಂತಹ ಮುಷ್ಕರಗಳ ಸಂದರ್ಭದಲ್ಲಿ ಮುಷ್ಕರ ಮಾಡುವ ಮತ್ತು ಕೆಲಸಕ್ಕೆ ಹೋಗುವ ಕಾರ್ಮಿಕರ ನಡುವೆ ಸಂಘರ್ಷಗಳು ಎಲ್ಲಾ ಗಿರಣಿಗಳ ಮುಂದೆಯೂ ನಡೆಯುತ್ತಿತ್ತು. ಇದು ಗಿರಣಿ ಮಾಲೀಕರಿಗೆ ಮುಷ್ಕರ ಮುರಿಯಲು ಅವಕಾಶ ನೀಡುತ್ತಿದ್ದವು.

ಅಂಬೇಡ್ಕರ್ ರವರ ಮತ್ತೊಂದು ಆಕ್ಷೇಪಣೆ ದಲಿತ ಕಾರ್ಮಿಕರಿಗೆ ಗಿರಣಿ ಮಾಲೀಕರು ಹೆಚ್ಚು ಕೌಶಲ್ಯದ ನೇಯ್ಗೆ ವಿಭಾಗಗಳಲ್ಲಿ ಅಸ್ಪೃಶ್ಯತೆಯ ಕಾರಣಕ್ಕಾಗಿ ಕೆಲಸ ನೀಡುತ್ತಿರಲಿಲ್ಲ. ಈ ಪ್ರಶ್ನೆಯನ್ನು ಕಾರ್ಮಿಕ ಸಂಘಗಳು ಎತ್ತಿಕೊಳ್ಳಲಿಲ್ಲ ಎಂಬುದು. ಕಾರ್ಮಿಕ ಚಳುವಳಿಯ ಒಳಗೆ ಜಾತಿ ಬೇ ಧ ನಿವಾರಣೆಯ ಪ್ರಶ್ನೆಗಳನ್ನು ಕಾರ್ಮಿಕ ನಾಯಕರು ಎತ್ತಿಕೊಳ್ಳಲಿಲ್ಲ ಎಂಬುದು ಕೂಡ ಇಬ್ಬರ ನಡುವೆ ಸಹಮತ ಮೂಡದಿರಲು ಕಾರಣವಾಯಿತು.

ಅದರೆ ಕಾಂಗ್ರೆಸ್ ಪಕ್ಷದ ಪ್ರಾಂತೀಯ ಸರ್ಕಾರಗಳು ಅಸ್ತಿತ್ವಕ್ಕೆ ಬಂದ ನಂತರ 1938 ರಲ್ಲಿ ಕಾರ್ಮಿಕ ಕಾನೂನುಗಳ ತಿದ್ದುಪಡಿ ವಿಚಾರದಲ್ಲಿ ಅಂಬೇಡ್ಕರ್ ಮತ್ತು ಕಮ್ಯೂನಿಸ್ಟ ನೇತೃತ್ವದ ಕಾರ್ಮಿಕ ಸಂಘಗಳು ಸೇರಿ ಜಂಟಿ ಹೋರಾಟವನ್ನು ಸಂಘಟಿಸಿದವು. ಮುಂದೆ ಈ ಐಕ್ಯತೆ ಮುಂದುವರೆಯಲಿಲ್ಲ. ಏಕೆಂದರೆ ಮುಂದೆ ಎರಡನೇ ಮಹಾಯುದ್ಧ ಆರಂಭವಾಯಿತು. ಅಂಬೇಡಕರ್ ರವರು 1942ರಲ್ಲಿ ಸ್ವತಃ ಭಾರತದ ವೈಸ್ ರಾಯ್ ರವರ ಕಾರ್ಯ ಮಂಡಲದಲ್ಲಿ ಕಾರ್ಮಿಕ ವಿಷಯಗಳ ಹೊಣೆ ಹೊತ್ತ ಸದಸ್ಯರಾದರು.

4. ಮಹಾರಾಷ್ಟ್ರ ಕಮ್ಯೂನಿಸ್ಟ್ ಚಳುವಳಿಯ ಬ್ರಾಹ್ಮಣ ನಾಯಕತ್ವ :

ಅಂದು ದೇಶದ ವಿವಿದ ಭಾಗಗಳಲ್ಲಿ ಕಮ್ಯೂನಿಸ್ಟ್ ಚಳುವಳಿಗೆ ಮುಸ್ಲಿಮರೂ ಸೇರಿದಂತೆ ವಿವಿಧ ಜಾತಿಗಳ ನೇತೃತ್ವ ಇದ್ದರೂ ಮಹಾರಾಷ್ಟ್ರದಲ್ಲಿ ಬ್ರಾಹ್ಮಣ ನಾಯಕತ್ವವೇ ಪ್ರಧಾನವಾಗಿತ್ತು. ಅಂಬೇಡ್ಕರ್ ರವರ ಅನೇಕ ಬರಹಗಳಲ್ಲಿ ವ್ಯಕ್ತವಾದಂತೆ ಜಾತಿ ವ್ಯವಸ್ಥೆಯನ್ನು ರೂಪಿಸುವುದು, ಬೌದ್ಧ ಧರ್ಮವನ್ನು ಓಡಿಸಿದ್ದು, ಮನುಸ್ಮೃತಿಯ ಆರಾಧನೆ ಮೊದಲಾದ್ದರ ಮುಖ್ಯಸ್ಥರು ಬ್ರಾಹ್ಮಣರೇ. ಆದ್ದರಿಂದ ಅವರನ್ನು ನೆಚ್ಚುವಂತಿಲ್ಲ, ಅವರು ಬ್ರಾಹ್ಮಣ್ಯವನ್ನು ಬಿಡುವುದಿಲ್ಲ ಎಂಬುದು ಅವರ ನಿಶ್ಚಲ ನಂಬಿಕೆಯಾಗಿತ್ತು. ಸೆಕ್ಯುಲರ್ ಆದ ಬ್ರಾಹ್ಮಣರೂ, ಸೆಕ್ಯುಲರ್ ಅಲ್ಲದ ಬ್ರಾಹ್ಮಣರೂ ಒಂದೇ ಎಂಬುದವರ ಭಾವನೆಯಾಗಿತ್ತು. ಕಮ್ಯೂನಿಸ್ಟರ ಬಗೆಗಿನ ಅಪನಂಬಿಕೆಗೆ ಇದೂ ಒಂದು ಕಾರಣವಾಗಿತ್ತು.

●

JANASHAKTHI KANNADA VARA PATRIKE MAY 1, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283

ಮಾತಿಗೆ ತಪ್ಪಿದ ಸರ್ಕಾರ – ಸಿಐಟಿಯು ಪ್ರತಿಭಟನೆ


ಕೋಲಾರ


ಧಾರವಾಡ

ಗುತ್ತಿಗೆ ಕಾರ್ಮಿಕರ ಕೆಲಸದ ಖಾಯಮಾತಿ, ಸಮಾನ ಕೆಲಸಕ್ಕೆ ಸಮಾನ ವೇತನ, ಕಾರ್ಮಿಕ ಸಂಘಗಳ ಮಾನ್ಯತೆಯ ಶಾಸನಕ್ಕಾಗಿ, ರಾಜ್ಯದಲ್ಲಿ ಕನಿಷ್ಠ ವೇನತ 18 ಸಾವಿರಕ್ಕಾಗಿ ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರ ವಿವಿಧ ಹಕ್ಕೋತ್ತಾಯಗಳಿಗೆ ಆಗ್ರಹಿಸಿ ಮಾರ್ಚ್ 11ರಂದು ವಿಧಾನಸೌಧ ಚಲೋ ಚಳುವಳಿ ನಡೆಸಲಾಗಿತ್ತು.

ಕಾರ್ಮಿಕರ ಹೋರಾಟದ ಸಂದರ್ಭದಲ್ಲಿ ಏಪ್ರಿಲ್ 12 ರಂದು ಎಲ್ಲಾ ಇಲಾಖೆಗಳ ಅಧಿಕಾರಿಗಳು, ಸಚಿವರುಗಳೊಂದಿಗೆ ಜಂಟಿ ಸಭೆ ನಡೆಸುವುದಾಗಿ ಭರವಸೆ ನೀಡಿದ್ದ ಮುಖ್ಯಮಂತ್ರಿ ಸಿದ್ದಾರಮಯ್ಯನವರು ತಮ್ಮ ಮಾತಿಗೆ ತಪ್ಪಿದ್ದು ಕಾರ್ಮಿಕರನ್ನು ಕಡೆಗಣಿಸುತ್ತಿರುವ ಬಗ್ಗೆ ಏಪ್ರಿಲ್ 18ರಂದು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಿಐಟಿಯು ನೇತೃತ್ವದಲ್ಲಿ ಸಾವಿರಾರು ಕಾರ್ಮಿಕರ ಪ್ರತಿಭಟನೆಗಳಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿತು.

ತುಮಕೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್‌ಮುಜೀಬ್, ಪ್ರಧಾನಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ಬೀಡಿ ಕಾರ್ಮಿಕರ ಸಂಘದ ಶಹತಾಜ್, ರಫೀಕ್, ವಿನಾಯಕ ಸಿಎನ್.ಸಿಯ ಗಿರೀಶ್, ಕಾಳೇಶ್ವರಿ ಮುತ್ತುರಾಜ್, ಡಿ.ವೈ.ಎಫ್.ಐ ನಗರಾಧ್ಯಕ್ಷ ಜಿ. ದರ್ಶನ್, ಸೇರಿದಂತೆ ಮುಂತಾದವರು ನೇತೃತ್ವವಹಿಸಿದ್ದರು.

ಕಲಬುರಗಿ ಜಿಲ್ಲೆಯಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಬಿ.ಸಜ್ಜನ್, ಖಜಾಂಚಿ ನಾಗಯ್ಯ ಸ್ವಾಮಿ, ಅಯ್ಯಪ್ಪ, ಶಾಂತ ಘಂಟಿ ಮುಂತಾದ ಮುಖಂಡರು ಭಾಗವಹಿಸಿದ್ದರು.

ರಾಮದುರ್ಗದಲ್ಲಿ ತಹಶೀಲ್ದಾರ್ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರ–ಕ್ಕೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷರಾದ ಸರಸ್ವತಿ ಮಾಳಶೆಟ್ಟಿ, ಕಾರ್ಯದರ್ಶಿ ಯಶೋಧಾ ಹೊಸಕೋಟಿ, ತಾಹಿರಾ ಮಕಾನದಾರ ಪಂಚಾಯತ ನೌಕರರ ಸಂಘದ ಅಧ್ಯಕ್ಷರಾದ ಯು.ಎಫ್. ದಂಡಿನ, ಕಾರ್ಯದರ್ಶಿ ಸುರೇಶ ವಡ್ಡರ ಮತ್ತು ಅಕ್ಷರದಾಸೋಹ ನೌಕರ ಸಂಘದ ಅಧ್ಯಕ್ಷರಾದ ತುಳಸಮ್ಮಾ ಮಾಳದಕರ ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪಂಚಾಯತ ನೌಕರ ಸಂಘದ ತಾಲೂಕಾ ಉಪಾಧ್ಯಕ್ಷ ವೀರಭದ್ರ ಕಂಪ್ಲಿ ಸ್ವಾಗತಿಸಿ ವಂದಿಸಿದರು.

ಧಾರವಾಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾ ಅಧ್ಯಕ್ಷರಾದ ಬಿ.ಐ.ಈಳಿಗೇರ, ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ, ಖಜಾಂಚಿ ಗುರುಸಿದ್ಧಪ್ಪ ಅಂಬಿಗೇರ ಮತ್ತು ಬಿ.ಎನ್,ಪೂಜಾರಿ, ಬಿ.ಎಸ್.ಸೊಪ್ಪಿನ, ಹನಮಂತಪ್ಪ ಜಾಲಗಾರ, ನಿಂಗಪ್ಪ ಪಿರೋಜಿ, ಬಸವಣ್ಣೆಪ್ಪ ನೀರಲಗಿ, ಮಂಜುನಾಥ ಹುಜರಾತಿ, ಹುಸೇನಸಾಬ ನದಾಫ್, ಕತಾಲಸಾಬ ಮುಲ್ಲಾ, ನಾಗಮ್ಮ ಹಿರೇಮನಿ, ಎನ್.ಎಂ.ಪಾಟೀಲ. ಮುಂತಾದವರು ಭಾಗವಹಿಸಿದ್ದರು,

ಕೋಲಾರ ಜಿಲ್ಲೆಯ ಕೋಲಾರ, ಮಾಲೂರು, ಶ್ರೀನಿವಾಸಪುರ, ಬಂಗಾರಪೇಟೆ ತಹಶೀಲ್ದಾರ್ ಕಛೇರಿಗಳ ಎದುರು ಪ್ರತಿಭಟನೆ ಧರಣಿ ನಡೆಸಲಾಯಿತು. ಕೋಲಾರದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಗಾಂಧಿನಗರ ನಾರಾಯಣಸ್ವಾಮಿ ಮಾತನಾಡಿದರು. ಪ್ರತಿಭಟನೆಯಲ್ಲಿ ಸಿಐಟಿಯು ತಾಲ್ಲೂಕು ಅಧ್ಯಕ್ಷ ಹೊನ್ನೇನಹಳ್ಳಿ ಯಲ್ಲಪ್ಪ, ಕಾರ್ಯದರ್ಶಿ ಮುನಿರಾಜಮ್ಮ, ಮುಖಂಡರಾದ ವಿಜಯಕೃಷ್ಣ, ಗಡ್ಡಂ ಮುನಿರಾಜು, ವೆಂಕಟಲಕ್ಷ್ಮಮ್ಮ, ಗೌರಮ್ಮ ಮತ್ತಿತರರು ಭಾಗವಹಿಸಿದ್ದರು.

ಮಾಲೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಬಿ.ಎಸ್.ನಾಗರತ್ನ, ತಾಲ್ಲೂಕು ಕಾರ್ಯದರ್ಶಿ ಬಿ.ವಿ.ಸಂಪಂಗಿ, ಮುಖಂಡರಾದ ಮುನಿವೆಂಕಟಪ್ಪ, ಮುನಿಸ್ವಾಮಿಗೌಡ ಮತ್ತಿತರರು, ಬಂಗಾರಪೇಟೆಯಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾ ಮುಖಂಡರಾದ ಪಿ.ಶ್ರೀನಿವಾಸ್, ಎ.ಆರ್.ಬಾಬು, ಆನಂದರಾಜ್, ತಂಗರಾಜ್ ಮತ್ತಿತರರು, ಶ್ರೀನಿವಾಸಪುರದಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿ.ಈಶ್ವರಮ್ಮ, ವಿ.ಅನಂದ್, ಜಯಮ್ಮ ಮತ್ತಿತರರು ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ಕಾರ್ಮಿಕರ ಭವನದ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್, ಮುಖಂಡರಾಧ ಬಿ.ಎನ್.ರಘು, ರುದ್ರಮೂರ್ತಿ, ಕೋದಂಡರಾಮ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಛೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಸಿಐಟಿಯು ಮುಖಂಡರಾದ ಬಾಬು ದೇವಾಡಿಗ ಮಾತನಾಡಿದರು. ಮುಖಂಡರಾದ ಜಯಂತಿ ಶೆಟ್ಟಿ, ಪದ್ಮಾವತಿ ಶೆಟ್ಟಿ, ಜಯಂತ ನಾಯ್ಕ್, ಸುನಿಲ್ ಕುಮಾರ್ ಬಜಾಲ್, ಯೋಗೀಶ್ ಜಪ್ಪಿನಮೊಗರು, ಸದಾಶಿವ ದಾಸ್, ಭಾರತಿ ಬೋಳಾರ್, ಬಾಬು ಪಿಲಾರ್, ಗಿರಿಜ ಮೂಡಬಿದ್ರೆ, ಭವ್ಯಾ ಮುಚ್ಚೂರು, ನಾಗೇಶ್ ಕೋಟ್ಯಾನ್ ಭಾಗವಹಿಸಿದ್ದರು.

ಕುಂದಾಪುರದಲ್ಲಿ ಸಿಐಟಿಯು ರಾಜ್ಯ ಮುಖಂಡರಾದ ಕೆ. ಶಂಕರ್, ಬಾಲಕೃಷ್ಣ ಶೆಟ್ಟಿ, ಕುಂದಾಪುರ ತಾಲೂಕು ಸಮಿತಿಯ ಅಧ್ಯಕ್ಷ ಎಚ್. ನರಸಿಂಹ ಮಾತನಾಡಿದರು. ಸಿಐಟಿಯು ಮುಖಂಡರಾದ ಸುರೇಶ್ ಕಲ್ಲಾಗರ, ವೆಂಕಟೇಶ್ ಕೋಣಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿದೆಡೆ ತಹಶೀಲ್ದಾರ್ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಮುನಾ ಗಾಂವ್ಕರ್ ಸೇರಿದಂತೆ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ವರದಿ ಪುಟ 4 ರಲ್ಲಿ


ಬೆಳಗಾವಿ


ತುಮಕೂರು

ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**